
# ಗೀತೆಯ ಗೋವಿಂದ



ಶ್ರೀದೇವಿ
ಮಂಡ್ಯ.

# ವಿಶಿಷ್ಟಾದ್ವೈತ



# ಅತ್ತಿಮಬ್ಬೆ ಪ್ರತಿಷ್ಠಾನ (ರಿ)

## ಕನ್ನಡ ಲೇಖಕಿಯರ ಪರಿಷತ್ತು

30, ಬಿನ್ನಿ ಬಡಾವಣೆ, 1ನೇ ಮುಖ್ಯರಸ್ತೆ, ವಿಜಯನಗರ, 2ನೇ ಹಂತ, ಬೆಂಗಳೂರು - 560 040

ದಿನಾಂಕ: 7-3-1997

# ಪ್ರಶಸ್ತಿ ಪತ್ರ

ಶ್ರೀಮತಿ ಶ್ರೀದೇವಿ ಯವರಿಗೆ ತಾವು ಗೀತೆಯ ಗೋವಿಂದ ಪುಸ್ತಕವನ್ನು ರಚಿಸಿ ಕನ್ನಡ ಸಾರಸ್ವತ ಲೋಕಕ್ಕೆ ಅಮೂಲ್ಯ ಸೇವೆಯನ್ನು ಸಲ್ಲಿಸಿದ್ದೀರಿ. ಇದಕ್ಕಾಗಿ ತಮಗೆ ಹೃತ್ಪೂರ್ವಕ ಅಭಿನಂದನೆಗಳು. ತಮ್ಮ ಸಾಹಿತ್ಯ ಸೇವೆ ನಿರಂತರವಾಗಿ ನಡೆಯಲೆಂದು ಹಾರೈಸುತ್ತೇವೆ.

ಪಿ. ಮನೋಹರಿ ಪಾರ್ಥಸಾರಥಿ
ನಿರ್ದೇಶಕಿ

ಶ್ರೀಮತಿ ಬಿ. ಟಿ. ಲಲಿತಾ ನಾಯಕ್
ಅಧ್ಯಕ್ಷರು

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್
ಶ್ರೀಮತಿ ಉಷಾ ನವರತ್ನರಾಮ್
ಗೌರವಾಧ್ಯಕ್ಷರು

ಶ್ರೀಮತಿ ಕೆ. ಎಸ್. ಪ್ರಮೀಳಾ ಫಾಲನೇತ್ರ
ಪ್ರಧಾನ ಕಾರ್ಯದರ್ಶಿ

# ಗೀತೆಯ ಗೋವಿಂದ

ಶ್ರೀದೇವಿ
ಯಾದವಾದ್ರಿ, ಮಂಡ್ಯ.

ಶ್ರೀದೇವಿ ಪ್ರಕಾಶನ
ಮಂಡ್ಯ.
2001

**Geetheya Govinda** ( Based on Bhagavadgeetha) Smt. Sridevi (M.N.Singaramma) and Published by Sridevi Prakashana, 3018, 100ft Road, Nehrunagar, Mandya (Karnataka)

First Edition - 1996

| | | |
|---|---|---|
| ಮುದ್ರಣದ ಪ್ರತಿಗಳು | : | 1000 |
| ಮುದ್ರಣ | : | 2001 |
| ಬೆಲೆ | : | ರೂ. 40-00 |
| ಪುಸ್ತಕ ದೊರೆಯುವ ಸ್ಥಳ | : | ಶ್ರೀದೇವಿ ಪ್ರಕಾಶನ ಮಂಡ್ಯ<br>3018, ನೂರಡಿ ರಸ್ತೆ, ನೆಹರುನಗರ,<br>ಮಂಡ್ಯ.<br>ಫೋನ್ ನಂ. 224897 |
| ಮುದ್ರಣ | : | ಐಡಿಯಲ್ ಆಫ್‌ಸೆಟ್ ಪ್ರಿಂಟರ್ಸ್, ಮಂಡ್ಯ.<br>ಫೋನ್ ನಂ. 223178, 229878. |

ಶ್ರೀ ರಂಗ ಸದ್ಗುರುವೇ ನಮಃ
ಶ್ರೀಮತೇ ರಾಮನುಜಾಯ ನಮಃ

# ಮುನ್ನುಡಿ

ವಿದ್ವಾಂಸರಿಂದಲೂ ವಿದ್ಯಾಸಂಸ್ಥೆಗಳಿಂದಲೂ ಸಹೃದಯ ಸಾಮಾಜಿಕರಿಂದಲೂ ಶಾಸನ ಸತ್ತೆಯಿಂದಲೂ ಶ್ರೀಮದಾಚಾರ್ಯವರ್ಯರಿಂದಲೂ ಸ್ವಸಂತೋಷದಿಂದ ಲಭಿಸಿದ ಪುರಸ್ಕಾರ ಪ್ರಶಸ್ತಿ ಅಭಿನಂದನೆ ಅನುಗ್ರಹ ಆಶೀರ್ವಾದಗಳ ಶ್ರೀಮಾಲೆಯಿಂದ ಅಲಂಕೃತೆಯಾಗಿರುವ ಭಾಗವತ ಶಿರೋಮಣಿ ವಿದ್ಯಾವಿಚಕ್ಷಣೆ ವಿದ್ಯಾರತ್ನ ಶ್ರೀಮತಿ ಶಿಂಗಾರಮ್ಮ ಶ್ರೀದೇವಿಯವರು ಶ್ರೀಯಃ ಪತಿಗೆ ಸಮರ್ಪಿಸುತ್ತಿರುವ ಈ "ಗೀತೆಯ ಗೋವಿಂದ" ಎಂಬ ಗ್ರಂಥ ರತ್ನಕ್ಕೆ ಭೂರಿ ಭೂರಿ ಮಂಗಳಾಶಾಸನಗಳು.

ಶ್ರೀಮತಿ ಶ್ರೀದೇವಿಯವರು ಸಂಸ್ಕೃತ, ಕನ್ನಡ, ಹಿಂದೀ, ತಮಿಳು, ತೆಲುಗು ಮುಂತಾದ ನಾನಾ ಭಾಷಾ ಸಾಹಿತ್ಯಗಳಲ್ಲೂ, ಪುರಾಣೇತಿಹಾಸ ಆಗಮ ದ್ರಾವಿಡ ದಿವ್ಯ ಪ್ರಬಂಧ ಭಕ್ತಿಸೂಕ್ತಿಗಳಲ್ಲೂ ಆಚಾರ್ಯರ ಉಪನ್ಯಾಸ ಕಾಲಕ್ಷೇಪ ಗೋಷ್ಠಿಗಳಲ್ಲೂ ಅವಗಾಹನೆ ಮಾಡಿದರೆ, ಆಚಾರ್ಯ ಕೈಂಕರ್ಯಗಳನ್ನು ಸಲ್ಲಿಸಿದ್ದಾರೆ. ಇವುಗಳಿಂದ ಸಂಸ್ಕೃತವಾದ ಪ್ರತಿಭೆಯಿಂದ ಸುಮಾರು ನೂರು ಕೃತಿಗಳನ್ನು ರಚಿಸಿ ಮಾಧವ ಸೇವೆ ಮಾನವ ಸೇವೆಗೆ ಸಮರ್ಪಣೆ ಮಾಡಿದ್ದಾರೆ. ಅವರ ಪ್ರಕೃತ ಗ್ರಂಥವು ಅವರ ಹಿಂದಿನ ಎಲ್ಲಾ ಗ್ರಂಥಗಳ ನಾಯಕ ಮಣಿಯಾಗಿ ಅವುಗಳ ಭಾವಪುಷ್ಪಗಳಿಂದ ಪರಿಮಳಿತವಾಗಿದಿಯೆಂಬುದು ನಮ್ಮ ಅನಿಸಿಕೆ.

ಗೀತೆಯ ಗೋವಿಂದನ ಪರಿಚಯಕ್ಕೆ ಹಿನ್ನೆಲೆಯಾಗಿ ಶ್ರೀ ಪಾಂಚರಾತ್ರಾಗಮದಲ್ಲಿ ಪ್ರತಿಪಾದಿತವಾಗಿರುವ ಶ್ರೀ ಗೋವಿಂದನ ಪರವ್ಯೂಹ ವಿಭವ ಅಂತರ್ಯಾಮಿ ಅರ್ಚಾರೂಪಗಳಲ್ಲಿ ಅರ್ಚಾವತಾರದ ವಿಶಿಷ್ಟತೆಯನ್ನು ವಿವರಿಸಿದ್ದಾರೆ. ಅನಂತರ ಆತನ ವಿಭವಾವತಾರಗಳಲ್ಲಿ ನಿಕಟತಮವೂ ಪ್ರಿಯತಮವೂ ಆಗಿರುವ ಶ್ರೀಕೃಷ್ಣಾವತಾರಕ್ಕೆ ಮಂಗಳಾಶಾಸನ ಮಾಡಿ ಆ ಅನಂತನ ಅನಂತ ನಾಮಧೇಯಗಳಲ್ಲಿ ಗೋವಿಂದನ ನಾಮಾಮೃತವು ತೋರಿಸುತ್ತಿರುವ ವಿಶೇಷ ಮಹಿಮೆಯನ್ನು ಶಬ್ದವ್ಯುತ್ಪತ್ತಿ ನಿರ್ವಚನಗಳ ಮೂಲಕ ಮಂಡಿಸಿರುತ್ತಾರೆ. ಈ ಮೂಲಕ ಗೋವಿಂದ ಭಕ್ತಿಯಲ್ಲಿ ಭಕ್ತರಿಗೆ ಸ್ನಾನ ಮಾಡಿಸಿ ಆ ಆದಿಗುರುವೂ ಅಖಿಲಗುರುವೂ ಆಗಿರುವ ಗೋವಿಂದನ ಪರಮಾನುಗ್ರಹವಾದ ಶ್ರೀ ಗೀತಾಭವನಕ್ಕೆ ಅವರನ್ನು ಕರೆದೊಯ್ಯುತ್ತಾರೆ. ಶ್ರೀ ಗೀತೋಪದೇಶಕ್ಕೆ ಮೊದಲು ಸ್ವಾಮಿಯು ಎಸಗಿದ ದಿವ್ಯಲೀಲಾವೈಭವವನ್ನು ಸಂಕ್ಷೇಪಿಸಿ, ಆತನ ಶ್ರೀಗೀತೆಯ ವಿಶೇಷತೆಯನ್ನು ರಸ ರೀತಿ ಅಲಂಕಾರಗಳಿಂದ ಶೋಭಿಸುವ

ಸಾಹಿತ್ಯದಿಂದ ಮಂಡಿಸಿರುತ್ತಾರೆ.

ಶ್ರೀ ಗೀತೆಯು ಸಾರುತ್ತಿರುವ ನಾನಾ ಯೋಗಗಳನ್ನು ವಿಶ್ಲೇಷಣೆ ಮಾಡಿ ಅವುಗಳಿಗೆಲ್ಲಾ ''ಶ್ರೀ ಕೃಷ್ಣಯೋಗ''ದಲ್ಲಿ ತಾತ್ಪರ್ಯವೆಂದು ನಿರೂಪಿಸಿದ್ದಾರೆ. ನಿರೂಪಣೆಯಲ್ಲಿ ಶ್ರೀ ಗೀತೆಗೆ ಈ ಹಿಂದೆ ಭಾಷ್ಯ ಮಾಡಿರುವ ಸಾಂಪ್ರದಾಯಿಕರಾದ ಆಚಾರ್ಯರ ಆಶಯ. ಮತ್ತು ಶ್ರೀ ಗಾಂಧಿ ಶ್ರೀ ವಿನೋಬಾ ಮುಂತಾದ ಆಧುನಿಕ ಸಂತರ ಅಭಿಪ್ರಾಯಗಳಲ್ಲಿ ಅವಗಾಹನೆ ಮಾಡಿರುವುದಲ್ಲದೆ. ತಮ್ಮ ಮೌಲಿಕತೆಯನ್ನೂ ಮೆರೆಯಿಸಿರುತ್ತಾರೆ. ಭಾವಕ್ಕೆ ಅನುಗುಣವಾಗಿ ಭಾಷೆ ಸರಳವಾಗಿ ಸಲೀಸಾಗಿ ಹರಿಯುತ್ತಿದೆ. ರಸಪೂರ್ಣವಾದ ಕೃತಿ.

ಪರಿಪೂರ್ಣ ಪುರುಷೋತ್ತಮನಾಗಿ ''ಕೊರೆಯೊನ್ನು ಮಿಲ್ಲಾದ ಗೋವಿಂದ'' ಎಂಬಂತೆ ಯಾವ ಕುಂದುಕೊರೆತೆಯೂ ಇಲ್ಲದೆ ಕಂಗೊಳಿಸುತ್ತಿರುವ ಸ್ವಾಮಿ ಶ್ರೀ ಗೋವಿಂದನಿಗೆ ಈ ಕೃತಿ ಪುಷ್ಪದ ಸೊಗಡು ಸಮರ್ಪಿತವಾಗಲಿ. ಇದಕ್ಕೆ ಮನ್ನಣೆ ದೊರೆಯಲಿ ಎಂದು ನಾರಾಯಣ ಸ್ಮರಣೆ ಮಾಡುತ್ತೇನೆ.

ಶ್ರೀ ಯುವ ನಾಮ
ಸಂವತ್ಸರದ
ಆಶ್ವಯುಜ ಶುದ್ಧ
ವಿಜಯದಶಮೀ
ಮಂಗಳವಾರ
2001

ಶ್ರೀ ಶ್ರೀರಂಗಪ್ರಿಯ ಶ್ರೀಪದ ಶ್ರೀ ಶ್ರೀ:
ಅಷ್ಟಾಂಗ ಯೋಗ ವಿಜ್ಞಾನ ಮಂದಿರ:

# ನನ್ನ ಅಳಲು

ಶ್ರೀ ಕೃಷ್ಣನು ಗೀತೆಯಲ್ಲಿ ಹೇಳಿರುವನು

'' ಜ್ಞಾನಂ ಚ ತತ್‌ಯಜ್ಞಶ್ಚ'' ಎನ್ನುವುದೇ ಅದರ ಅರ್ಥ ಇಂತಹ ''ಕಾಯಕ ''ದೋಷಕ್ಕೆ ದಾರಿ ತೋರಿಸುವುದರಿಂದ ಅದೇ ಮೋಕ್ಷವೆನ್ನುವುದು.

*ಇಲ್ಲಿ ಗೇತಕೆ ಬಂದೆಯೋ ಮಾನವ;*
*ಇರಲು ಶಾಶ್ವತ ಸಾಧ್ಯವೇ-ಹೇಳೋ*

ಕೇಳಿ ನೀ ಬರಲಿಲ್ಲ ಹೇಳಿ ಹೋಗುವವನಲ್ಲ

ಇರಲು ನಿನಗೇಕೆ ಚಿಂತೆ ಕಾಡುತಿಹದಯ್ಯ-

ನಮ್ಮ ಇಷ್ಟದಂತೆ ನಾವು ಹುಟ್ಟುವುದಿಲ್ಲ ಸಾಯ್ಲೂವುದೂ ಇಲ್ಲ. ಹೀಗಿರುವಾಗ ಬದುಕು ನಮ್ಮ ಕೈಯಲ್ಲಿದೆ ಎಂಬ ಭ್ರಮೆ ಬೇಡ. ಶ್ರೀಮನ್ನಾರಾಯಣ ಕರುಣಾಮಯ ಅವನಲ್ಲಿ ಶರಣು ಹೋದವರಿಗೆ ಅವನೊಬ್ಬನೇ ಮೋಕ್ಷ ಕೊಡಬಲ್ಲನು. ಹೀಗೆ ನಮಗೆ ಅಮೃತತ್ವ ಎಂದರೆ ಮೋಕ್ಷವನ್ನು ಕೊಡಲು ಶ್ರೀ ಕೃಷ್ಣನೊಬ್ಬನೇ ಸಮರ್ಥನು ಪರಮಾತ್ಮ ನನ್ನು ಭಕ್ತಿಯಿಂದ ಧ್ಯಾನ ಮಾಡಬೇಕು.

ಆತ್ಮನಾ ವಿಂದತೇವೀರ್ಯಂ-ನಮ್ಮ ಜ್ಞಾನ ಪರಮಾತ್ಮನನ್ನು ಹೊಂದಲು ಅವನಲ್ಲಿಗೆ ಹೋಗಲು ಸಮರ್ಥವಾಗುತ್ತದೆ. ವಿದ್ಯಾ-ಜ್ಞಾನ ನೇನ-ಯಾತಿಗಚ್ಛತಿ+ಧ್ಯಾನೇನ-ವಿದ್ಯಾ

ಶ್ರೀ ಕೃಷ್ಣನು ಏನು ಪ್ರಮಾದ ಮಾಡಿರುವನೆಂದು ನೋಡಿ; ನನ್ನನ್ನು ಈ ಸಂಸಾರದಲ್ಲಿ ತಳ್ಳಿ ನನ್ನ ಅಂತರಾತ್ಮದಲ್ಲಿ ನೆಲೆಸಿದ. ಅವನು ಜ್ಞಾನವನ್ನೇನೋ ಕೊಟ್ಟ, ಆದರೆ ನಾನು ಅಜ್ಞಾನವೆಂಬ ಅಂಧಕಾರದಲ್ಲಿ ಮುಳುಗಿ ಅರಿಷಡ್ವರ್ಗಕ್ಕೆ ಬಲಿ ಆದೆನು.

ಮೋಸ ಹೊದೆನಯ್ಯ-ಕೃಷ್ಣ-ಮೋಸ ಹೋದೆನಯ್ಯ

*ಸುಲಭನೆಂದು ಪೇಳಿ ದೂರ ಸರಿವೆಯೇಕೆ*
*ಇಷ್ಟವಿಲ್ಲವೇ ನಾನು ನಿನಗೆ ಬೇಡವಾದನೇ*

''ಯಥೇಚ್ಛಸಿ ತಥಾಕುರು'' ಎಂದೆ; ಅದನ್ನರಿಯದೆ ನಾನು ಮೋಸ ಹೋದೆ; ನಿನ್ನ ಮಾತಿಗೆ ಮರುಳಾದೆ; ನಾನು ಭಕ್ತಿ ಸುಲಭನು ಎಂದು ಹೇಳಿದೆ; ಹಾಗೆಯೇ ನಿನ್ನಲ್ಲಿ ಭಕ್ತಿ ಇಟ್ಟೆ ಹಾಗಿದ್ದೂ ಏಕೆ ದೂರವಾಗಿಯೇ ಇರುವೇ? ಹೇಳು? ನನಗೂ ಅಂತರ್ಯಾಮಿಯಾಗಿ ರುವ ನೀನು, ನೊಂದ ಮನಸ್ಸುಳ್ಳ ನನ್ನನ್ನು ರಕ್ಷಿಸು.

ಭಗವದ್ಗೀತೆಯಲ್ಲಿ ನಾನು ಎನ್ನುವುದು ಒಂದು ಅಲೌಕಿಕ ತತ್ತ್ವ ಇದೂ ಒಂದು ಪ್ರಕಾಶ

ವಸ್ತು. ತನ್ನನ್ನು ತಾನೇ ನೋಡಿಕೊಳ್ಳುವುದಕ್ಕೆ ''ಅಪರೋಕ್ಷ'' ಜ್ಞಾನವೆನ್ನುತ್ತಾರೆ. ಯೋಗಿಗಳು-ಅಪರೋಕ್ಷ ಜ್ಞಾನವನ್ನು ಧರ್ಮಿಜ್ಞಾನವೆಂತಲೂ ಇವೆರಡೂ ಒಂದನ್ನು ಬಿಟ್ಟು ಮತ್ತೊಂದಿಲ್ಲವೆಂತಲೂ, ಸೂರ್ಯ ಮತ್ತು ಅವನ ಕಿರಣಗಳಿಂತಿವೆ ಎಂತಲೂ ವೇದವೂ ಹೇಳುತ್ತಿದೆ. ಭಗವದ್ಗೀತೆಯೂ ಪ್ರತಿಪಾದಿಸಿದೆ. ಭಗವದ್ಗೀತೆಯು ಕ್ಷೇತ್ರಜ್ಞಃ ಎಂದಿದೆ.

ಆತ್ಮಕ್ಷೇತ್ರಜ್ಞಃ ಶರೀರ ಕ್ಷೇತ್ರ, ಈ ನಾನು ಎನ್ನುವ ಆತ್ಮವನ್ನು ಶರೀರ ಅಂದರೆ ಕ್ಷೇತ್ರವಾಗಿ ಉಳ್ಳ ಪರಮಾತ್ಮನೂ ಕ್ಷೇತ್ರಜ್ಞ ಆದರೆ ಇದೇ ವೇದಾಂತದ ಸಾರವನ್ನು ಆಸ್ವಾದನೆ ಮಾಡಿದರೆ ಆನಂದವಾನುಭವ ನಮಗೆ ಸಿಗುತ್ತದೆ.

ಹೇ ಕೃಷ್ಣ! ನಿನ್ನ ಊರು ವೈಕುಂಠ ಅಲ್ಲಿ ನೀನು ಇದ್ದರೆ ನನಗೇನು ಬಂತು ಭಾಗ್ಯ? ನಿನ್ನನ್ನೇ ನೆನಸಿಕೊಳ್ಳುತ್ತಿರುವೆ; ನನ್ನನ್ನು ಕರೆದೊಯ್ಯಲು, ಸಂಸಾರ ದಡವನ್ನು ದಾಟಿಸು.

''ಯೋಗ ಕ್ಷೇಮಂ ವಹಾಮ್ಯಹಂ, ಮಾಂಶರಣಂವ್ರಜ-ಮಾಶುಚಃ'' ಎನ್ನುವ ನಿನ್ನ ಮಾತನ್ನೇ ನಂಬಿರುವೆನು. ನನ್ನನ್ನು ನಿನ್ನ ಬಳಿಗೆ ಕರೆದೊಯ್ಯು, ಇದೇ ನನ್ನ ಪ್ರಾರ್ಥನೆ.

ಈ ಕಿರು ಹೊತ್ತಿಗೆ ಬರೆದು ಕೆಲವಾರು ವರ್ಷವಾಯಿತು. ಏನು ಮಾಡಲಿ? ಆದರೆ ಧಾರವಾಡ ಯೂನಿವರ್ಸಿಟಿಯ ನಿವೃತ್ತ ಪ್ರೊಫೆಸರ್ ಡಾ|| ಕೃಷ್ಣಮೂರ್ತಿಯವರ ಆದೇಶದಿಂದ ಈಗ ಪ್ರಕಟಿಸಿರುವೆನು.

ಶ್ರೀಯುತ ಸುಬ್ರಮಣ್ಯರೆಂಬುವರು ಸಹಾಯ ಮಾಡುತ್ತಾರೆಂದು ತಿಳಿದು ಬಂದಿತು. ನಾನು ಇದುವರೆವಿಗೂ ಅವರನ್ನು ಭೇಟಿ ಮಾಡಿಲ್ಲ. ಆದರೆ ಅವರು ಕಾಣದ ದೇವರು ವರಕೊಟ್ಟ ಹಾಗೆ ಮುದ್ರಣಕ್ಕೆ ತಕ್ಷಣ ಧನ ಸಹಾಯ ಮಾಡಿದರು. ಪುಸ್ತಕವನ್ನು ಮುದ್ರಣಕ್ಕೆ ನೀಡಿದೆನು. ಆದರೆ ವಿಳಂಬವಾಗಿದೆ.

ಈ ಪುಸ್ತಕಕ್ಕೆ ಮುನ್ನುಡಿಯನ್ನು ರಚಿಸಿಕೊಟ್ಟಿರುವ ಮಹಾನ್ ವ್ಯಕ್ತಿ ಶ್ರೀ. ಉ.ವೇ. ಪರಮಹಂಸಪರಿವ್ರಾಜಕಾಚಾರ್ಯರಾದ ''ರಂಗಪ್ರಿಯ'' ರೆಂಬ ವರದ ದೇಶಿಕರು, ನಮ್ಮ ಭಾಗ್ಯದಿಂದ ಇಂತಹ ಈ ಸಣ್ಣ ಕೃತಿಗೆ ತಮ್ಮ ಆಶೀರ್ವಾದವನ್ನು ನೀಡಿ ಅನುಗ್ರಹಿಸಿರುತ್ತಾರೆ. ಅವರಿಗೆ ನನ್ನ ಹೃತ್ಪೂರ್ವಕವಾದ ಪ್ರಣಾಮಗಳು.

ಶ್ರೀ ಎಂ. ಎಸ್. ಶಿವಪ್ರಕಾಶ್‌ರವರು ತಮ್ಮ ಕಂಪ್ಯೂಟರ್ ಮುದ್ರಾಣಾಲಯದಿಂದ ಸುಂದರವಾಗಿ ಮುದ್ರಣ ಮಾಡಿಕೊಟ್ಟಿರುತ್ತಾರೆ. ನನ್ನ ಆರೋಗ್ಯ ಸರಿ ಇಲ್ಲಾವಾದ್ದರಿಂದ ಅನೇಕ ದೋಷಗಳುಂಟಾಗಿರಬಹುದು. ಓದುಗರು ಕ್ಷಮಿಸುವಿರೆಂದು ನಂಬಿರುವ ತಮ್ಮ

ಶ್ರೀ ದೇವಿ ಯಾದವಾದ್ರಿ
ಮಂಡ್ಯ

*''ಯತ್ರಯೋಗೇಶ್ವರಃ ಕೃಷ್ಣೋಯತ್ರ ಪಾರ್ಥೋಧನುರ್ಧರಃ।*
*ತತ್ರಶ್ರೀರ್ವಿಜಯೋಭೂತಿರ್ಧ್ರುವಾನೀತಿರ್ಮತಿರ್ಮಮ॥''*



ಶ್ರೀಕೃಷ್ಣ ಜನನ

# ಶ್ರೀಕೃಷ್ಣಾವತಾರ

ಶ್ರೀಮದ್ ಭಾಗವತವು ಶ್ರೀಕೃಷ್ಣನನ್ನು ಸಾಧಾರಣ ಜನರೂ. ಮತ್ತು ವಿದ್ವಾಂಸರೂ ತಿಳಿಯುವಂತೆ ಹೇಳುವುದರಿಂದ ಈ ಕೃತಿ ಜ್ಞಾನಕಾಂಡವನ್ನು ತಿಳಿಸುವ ಪುರಾಣವೆಂದು ಹೇಳುತ್ತಾರೆ.,

ಭಾಗವತದ ಹಿರಿಮೆ ಏನೆಂದರೆ, ಶ್ರೀಕೃಷ್ಣನ ಮಿತಿಮೀರಿದ ಕಲ್ಯಾಣ ಗುಣಗಳನ್ನು ಪ್ರತಿ ಒಬ್ಬರೂ ತಿಳಿಯುವಂತೆ ವರ್ಣಿಸಿರುತ್ತದೆ. ಶ್ರೀ ಕೃಷ್ಣನ ಗುಣಗಳನ್ನು ಕೇಳಿದ ಮಾತ್ರವೇ ಮನಸ್ಸಿನಲ್ಲಿ ಪವಿತ್ರತೆ ಉಂಟಾಗುತ್ತದೆ. ಹಾಗೂ ವೇದ, ಉಪನಿಷತ್ತುಗಳಲ್ಲಿ ಹೇಳಿರುವ ಕಠಿಣವಾದ ಎಲ್ಲಾ ವಿಷಯಗಳೂ ಈ ಗ್ರಂಥದಲ್ಲಿ ಸುಲಭವಾಗಿದೆ. ಪ್ರಾಪಂಚಿಕ ವಿಷಯಗಳೂ ಮತ್ತು ಪರಮ ಪುರುಷನಾದ ಶ್ರೀಕೃಷ್ಣನಲ್ಲಿ ಭಕ್ತಿಯೂ ಉಂಟಾಗುತ್ತದೆ.ಇದೇ ಸರ್ವ ಶ್ರೇಷ್ಟವಾದ ಮೋಕ್ಷಕ್ಕೂ ಸಾಧನವಾಗಿರುತ್ತದೆ. ಇದನ್ನೇ ಪದ್ಮಪುರಾಣವು ಕೆಳಕಂಡ ಶ್ಲೋಕದಲ್ಲಿ ವರ್ಣಿಸಿರುತ್ತದೆ

*''ಇದಂ ಭಾಗವತಂ ನಾಮ ಪುರಾಣಂ ಬ್ರಹ್ಮಸಂಮಿತಮ್।*
*ಭಕ್ತಿ ಜ್ಞಾನ ವಿರಾಗಾಣಾಂ ಸ್ಥಾಪನಾಯ ಪ್ರಕಾಶಿತಮ್॥*

ಯಾವ ಯಾವ ಸಮಯದಲ್ಲಿ ಧರ್ಮವು ನಶಿಸಿ ಅಧರ್ಮವು ಹೆಚ್ಚುತ್ತದೆಯೋ ಆಗ ಶ್ರೀಮನ್ನಾರಾಯಣನು ಅವತಾರ ಮಾಡಿ, ಅಧರ್ಮವನ್ನು ನಾಶಮಾಡಿ, ಧರ್ಮವನ್ನು ಪ್ರತಿಷ್ಠಾಪಿಸುತ್ತಾನೆ ಈ ವಿಧ ಅವತಾರಗಳಲ್ಲಿ-ಶ್ರೀ ಕೃಷ್ಣಾವತಾರವು ಸರ್ವ ಶ್ರೇಷ್ಟವಾದ ಅವತಾರ.

ಇದನ್ನೇ ಶುಕ ಬ್ರಹ್ಮನು ಈ ರೀತಿ ಹೇಳಿರುತ್ತಾನೆ.

*ಏಕೆ ಚಾಂಶಕಲಾಃ ಪುಂಸಃ ಕೃಷ್ಣೇಸ್ತು ಭಗವಾನ್ ಸ್ವಯಮ್।*
*ಇಂದ್ರಾಸ್ತು ವ್ಯಾಕುಲಂ ಲೋಕಂ ಮೃಡಯಂತಿ ಯುಗೇ-ಯುಗೇ॥*

ಶ್ರೀ ಕೃಷ್ಣ ಅವತರಿಸಲು ಕಾರಣ

ಒಂದಾನೊಂದು ಕಾಲದಲ್ಲಿ ಸಂಪತ್ತು, ಬಲ ಶಕ್ತಿಗಳಿಂದ ಕೊಬ್ಬಿದ ರಾಜರು ರಾಜ್ಯವಾಳುತ್ತಿದ್ದರು, ಅವರು ರಾಕ್ಷಸರ ಪ್ರತಿರೂಪವೇ ಆಗಿದ್ದರು. ಆಗ ಭೂಮಾತೆಯು ಅವರ ಕ್ರೌರ್ಯವನ್ನು ಸಹಿಸಲಾರದೆ, ಚತುರ್ಮುಖ ಬ್ರಹ್ಮನೊಂದಿಗೆ ಬಂದು ಶ್ರೀಮನ್ನಾರಾಯಣನನ್ನು ಪ್ರಾರ್ಥಿಸಿದಳು.

*ಕತ್ರೆ ಗತ್ವಾ ಜಗನ್ನಾಥಂ ದೇವ ದೇವಂ ವೃಷಾಕಪಿಮ್।*

*ಪುರುಷಂ ಪುರುಷ ಸೂಕ್ತೇನ ಉಪತಸ್ಥೇ ಸಮೂಹಿತಃ॥*

ಆಗ ಅಶರೀರವಾಣಿ ಕೇಳಿಸಿತು

ಹೇ ದೇವತೆಗಳೇ! ಭಗವಂತನಾದ ನಾರಾಯಣನು ವಸುದೇವರಿಗೂ ಮತ್ತು ದೇವಕಿಗೂ ಪುತ್ರನಾಗಿ ಹುಟ್ಟುತ್ತಾನೆ. ಆಗ ನಿಮ್ಮ ಕಷ್ಟಗಳು ಪರಿಹಾರವಾಗುತ್ತದೆ.

ಆಗ ಆವಣಿಮಾಸ, ಕೃಷ್ಣಪಕ್ಷದ ನಡುರಾತ್ರಿಯಲ್ಲಿ ರೋಹಿಣಿ ನಕ್ಷತ್ರದಲ್ಲಿ ಶ್ರೀಮನ್ನಾರಾಯಣನು ಶ್ರೀಕೃಷ್ಣನಾಗಿ ಅವತರಿಸಿದನು.

*ದೇವಕ್ಯಾಂ ದೇವರೂಪಿಣ್ಯಾಂ ವಿಷ್ಣುಃ ಸರ್ವ ಗುಹಾಶಯಃ।*
*ಅವಿರಾಸೀತ್ ಯಥಾ ಪ್ರಾಚ್ಯಾಂ ದಿಶೀಂದುರಿದ ಪುಷ್ಕಲಃ॥*

ಆಗ ಸೂರ್ಯನು ಮೊದಲಾದ ಗ್ರಹಗಳು, ಅಶ್ವಿನಿ ಮೊದಲಾದ ನಕ್ಷತ್ರಗಳು, ಸಪ್ತ ಋಷಿ ಮುಂತಾದ ತಾರಕೆಗಳು ಶಾಂತವಾಗಿ ಇದ್ದವು. ಆಕಾಶದಲ್ಲಿ ನಕ್ಷತ್ರಗಳು ತೇಜಪುಂಜವಾಗಿ ಪ್ರಕಾಶಿಸಿದವು. ಭೂಲೋಕದಲ್ಲಿ ಹೀಗಿರುವಾಗ, ದೇವಲೋಕದಲ್ಲಿ ದೇವತೆಗಳು ದುಂದುಭಿ ವಾದ್ಯವನ್ನು ನುಡಿಸಿದರು, ಕಿನ್ನರಿ ಮತ್ತು ಗಂಧರ್ವರು ಗೀತೆಗಳನ್ನು ಹಾಡಿದರು. ಅಪ್ಸರೆಯರು ಮತ್ತು ವಿದ್ಯಾಧರರು ನೃತ್ಯವಾಡಿದರು. ಇವರೆಲ್ಲರೂ ಸಂತೋಷ ಸಂಭ್ರಮದಿಂದ ಪುಷ್ಪವೃಷ್ಟಿಯನ್ನು ಅರ್ಪಿಸಿದರು.

ಶ್ರೀ ಕೃಷ್ಣಶಿಶುವು ಸಾಧಾರಣ ಶಿಶುವಿನಂತಿಲ್ಲದೆ ಶಂಖ, ಚಕ್ರ, ಗದೆ ಮತ್ತು ಪದ್ಮಗಳೊಂದಿಗೆ ಚತುರ್ಭುಜನಾಗಿ ಕಂಗೊಳಿಸಿದನು. ಇದಲ್ಲದೆ ಶ್ರೀವತ್ಸವೆಂಬ ಮಚ್ಚೆ, ಕೌಸ್ತುಭಮಣಿ, ಪೀತಾಂಬರಧರನಾಗಿ ಕಂಡನು. ಶ್ರೀಮದ್ಭಾಗವತದ ದಶಮ ಸ್ಕಂಧದಲ್ಲಿ. ಅ.೩. ಶ್ಲೋಕ ೯-೧೦ರಲ್ಲಿ ತಿಳಿಸಿರುವಂತೆ.

*ತಮದ್ಭುತಂ ಬಾಲಕಮಂಬುಜೇಕ್ಷಣಂ ಚತುರ್ಭುಜಂ ಶಂಖ*
*ಶ್ರೀವತ್ಸಲಕ್ಷ್ಮಂ ಗಲಶೋಭಿಕೌಸ್ತುಭಂ (ಗದಾದ್ಯಾಯುಧಮ್)*
*ಪೀತಾಂಬರಂ ಸಾಂದ್ರಪಯೋದ ಸೌಭಗಮ್*
*ಮಹಾರ್ಹ ಕಿರೀಟ ಕುಂಡಲಕ್ತ್ವಿಷಾಪರಿಷ್ವತ್ತ ಸಸ್ತ್ರ ಕುಂತಲ್ವಃ*
*ಉದ್ಧಾಮ ಕಾಂಚ್ಯಗದ ಕಂಕಣಾದಿಭಿಃ ವಿರಾಜಮಾನಂ*
*(ವಸುದೇವ ಐಕ್ಷಕ)॥*

ಪೂರ್ವಜನ್ಮದ ಪುಣ್ಯದಿಂದ ವಸುದೇವ- ದೇವಕಿಯರು ಪರಮಾತ್ಮನನ್ನು ಪುತ್ರನನ್ನಾಗಿ ಪಡೆದರು. ಆಗ ಅವರು ಕಂಸನ ಭಯದಿಂದ ಭೀತರಾಗಿ ದಿವ್ಯ ಶಿಶುವಿನ ಅದ್ಭುತ ರೂಪವನ್ನು ಮರೆಸಿ ಕೊಳ್ಳುವಂತೆ ಪ್ರಾರ್ಥಿಸಿದರು. ಶ್ರೀಕಷ್ಣನು ಅವರ ಪ್ರಾರ್ಥನೆಯಂತೆ ಎಲ್ಲಾ

ನವಜಾತ ಶಿಶುಗಳಂತೆ ರೂಪವನ್ನು ಧರಿಸಿದನು.

ಅನಂತರ ಅವನ ಆದೇಶದಂತೆ, ವಸುದೇವನು ಶ್ರೀಕಷ್ಣನನ್ನು ನಂದಗೋಕುಲಕ್ಕೆ ಕರೆದೊಯ್ದನು.

ಆಳ್ವಾರುಗಳು ಕೃಷ್ಣವತಾರದ ಲೀಲೆಗಳನ್ನು ಅತ್ಯದ್ಭುತವಾಗಿ ಹಾಡಿರುತ್ತಾರೆ. ಲೀಲಾಶುಕರು ನವನೀತ ಚೋರನನ್ನು ವರ್ಣಿಸಿರುತ್ತಾರೆ.

*ದಧಿಮಥನನಿನಾದ್ಯೈಸ್ತ್ಯುಪ್ತನಿದ್ರಃಪ್ರಭಾತೇ।*
*ನಿಭೃಪದಮಗಾರಂ ವಲ್ಲವೀನಾಂ ಪ್ರವಿಷ್ಟಃ।*
*ಮುಖಕಮಲ ಸಮೀರೈರಾಶು ನಿರ್ವಾಪ್ಯ ದೀಪಾನ್*
*ಕಬಲಿಕ ನವನೀತಃ ಪಾತುಗೋಪಾಲ ಬಾಲಃ॥*
*ಅಸಂಖ್ಯೇಯ ಗುಣಾಢ್ಯಾಯ ಕಾಂಕ್ಷಿ ಕಾರ್ಥ ಪ್ರದಾಯಿನೇ।*
*ದ್ವಾರಕಾ ನಿಲಯಾಯಾಸ್ತು ಸ್ವಾಮಿನೇ ಮಮ ಮಂಗಲಮ್॥*

ಅಸಂಖ್ಯೇಯ ಕಲ್ಯಾಣ ಗುಣಗುಳುಳ್ಳವನೂ, ಕೇಳಿದ ವರವನ್ನು ನೀಡುವವನೂ ಆದ ದ್ವಾರಕಾಧಿಪತಿಯಾದ ನನ್ನ ಸ್ವಾಮಿಗೆ ಮಂಗಳ ಉಂಟಾಗಲಿ.

*''ಉನ್ನಿದ್ರಪದ್ಮ ನೇತ್ರಾಯ ರುಕ್ಮಿಣೀವಲ್ಲಭಾಯುಚ*
*ಬಲ ಭದ್ರಾಮುಜಾಯಸ್ತು ವಾಸು ದೇವಾಯ ಮಂಗಳಂ.''*

ವಿಶಾಲವಾದ ಕಮಲನೇತ್ರನೂ, ರುಕ್ಮಿಣೀವಲ್ಲಭನೂ, ಬಲರಾಮನ ತಮ್ಮನೂ ಆದ ವಾಸುದೇವನಿಗೆ ಮಂಗಳವಾಗಲಿ.

*''ಮುಚ್ಚಿತ ನಿತ್ಯವಾಸಾಯ ಮಂಗಲಾಯತನಾಯುಚ*
*ದ್ವಾರಕಾನಿಲಯಾಯಾಸ್ತು ಕೃಷ್ಣಾಯ ಶುಭ ಮಂಗಲಮ್''*

ನನ್ನ ಮನಸ್ಸಿನಲ್ಲಿ ನಿತ್ಯವಾಸಮಾಡಿದವನೂ, ಮಂಗಳಗಳಿಗೆಲ್ಲಾ ವಾಸಸ್ಥಾನವಾದವನೂ ದ್ವಾರಕಾನಿಲಯನೂ ಆದ ಶ್ರೀಕಷ್ಣನಿಗೆ ಶುಭ ಮಂಗಳವಾಗಲಿ.

ಈ ಮೂರು ಮಂಗಳ ಶ್ಲೋಕಗಳ ಮೊದಲ ಅಕ್ಷರಗಳು ಅ, ಉ, ಮ, ಎನ್ನುವ ಪ್ರಣವದ ಮೂರು ಅಕ್ಷರಗಳ ಕ್ರಮದಲ್ಲಿ ಆರಂಭಿಸಿರುವುದು. ಅಕಾರವಾಚ್ಯನಾದ ಭಗವಂತನಿಗೇ, ಮಕಾರವಾಚ್ಯನಾದ ಚೇತನನು (ಜೀವನು) ಶೇಷಭೂತನು ಎಂದರೆ we (jeevathmas) are the servantes at god solely)ಎಂಬುದನ್ನು ತಿಳಿಯಪಡಿಸುತ್ತದೆ.

# ಶ್ರೀಕೃಷ್ಣ ಪರಮಾತ್ಮನ ಮಹಿಮೆ

*ಶ್ರೀಕೃಷ್ಣ ಕಮಲಾನಾಥೋ ವಾಸುದೇವಃ ಸನಾತನಃ*
*ವಸುದೇವಾತ್ಮಜಃ ಪುಣ್ಯೋ ಲೀಲಾ ಮಾನುಶವಿಗ್ರಹಃ॥*

ಶ್ರೀ ಕೃಷ್ಣಪರಮಾತ್ಮನು ಅದ್ಭುತ ಲೀಲೆಗಳನ್ನು ವರ್ಣಿಸಲು ಎರಡು ಸಾವಿರ ನಾಲಿಗೆಯುಳ್ಳ ಆದಿಶೇಷನಿಂದಲೂ ಸಾಧ್ಯವಿಲ್ಲ. ಗೋಕುಲದಲ್ಲಿನ ಜನರು ಕೃಷ್ಣನ ಶೌರ್ಯ ಸಾಹಸಗಳನ್ನು ಕಂಡು ನೀನು ದೇವನೋ, ಮನುಷ್ಯನೋ ಅಥವಾ ದಾನವನೋ ಎಂದು ಸಂದೇಹಿಸಲು ಶ್ರೀಕೃಷ್ಣನು.

*''ಆತ್ಮಾನಂ ಮಾನುಷಂ ಮನ್ಯೇ ಅಹಂ-ವೋ ಬಾಂಧವೋ ಜಾತಃ''*

ಎಂದು ಸಮಾಧಾನ ಮಾಡಿ ಶತ್ರು ನಿರಸನವನ್ನು ಸಾಧು ಪರಿತ್ರಾಣವನ್ನು ಮಾಡಿದನು.

ಶ್ರೀಕೃಷ್ಣನು ಒಂದು ಸಾರಿ ದ್ವಾರಕೆಯ ಸಮೀಪದಲ್ಲಿರುವ ಪರ್ವತದಲ್ಲಿ ಅರಸರುಗೊಳಂದಿಗೆ ಕೂಡಿ ಇದ್ದನು. ಆಗ ಅಲ್ಲಿ ನೆರೆದಿರುವ ಅರಸುಗಳು, ಯಾದವರೂ ಕೆವಲರು ವಿಚಿತ್ರವಾದ ಕಥೆಗಳನ್ನು ಹೇಳುತ್ತಿದ್ದರು. ಶ್ರೀಕೃಷ್ಣನನ್ನು ಕುರಿತು

*ಆಶ್ಚರ್ಯಖಲು ದೇವಾನಾಂಮೇಕಸ್ತ್ವಂ ಪುರುಷೋತ್ತಮ।*
*ಧನಶ್ಚಾಸಿ ಮಹಾಬಾಹೋ ಲೋಕೇ ನಾಸ್ತಿ ಕಶ್ಚನ॥*

ಭುಜ ಬಲವುಳ್ಳವನೂ ಪುರುಷೋತ್ತಮನೂ ಆದ ಶ್ರೀಕೃಷ್ಣನೇ। ನೀನೊಬ್ಬನೇ ಆಶ್ರಯನಾದವನೂ ಧನ್ಯನೂ ಆಗಿರುತ್ತೀಯೆ! ಮೂರು ಲೋಕಗಳಲ್ಲಿಯೂ ನಿನಗೆ ಸರಿಸಮಾನರಾದವರೂ ಯಾರೂ ಇಲ್ಲ ಎಂದರು. ಅದಕ್ಕೆ ಶ್ರೀಕೃಷ್ಣನು ದಕ್ಷಿಣೆಗಳೊಂದೆಗೆ ಕೂಡ ತಾನು ಅಶ್ರಿತನಾಗಿಯೂ ಧನ್ಯನಾಗಿಯೂ ಇರುವೆನೆಂದು ಹೇಳಲ್ಪಡುವೆನೆಂದನು. ಇದನ್ನು ಕೇಳಿದ ನಾರದ ಮಹರ್ಶಿಯು ಹೇಳಿದರು. ನಿಮ್ಮ ಮಾತಿನಿಂದ ತೃಪ್ತಿ ಉಂಟಾಯಿತು. ಆದ್ದರಿಂದ ಬಂದ ಮಾರ್ಗದಲ್ಲಿಯೇ ಹಿಂದಿರುಗುತ್ತೇನೆ ಎಂದರು. ಇವರ ಸಂಭಾಷಣೆಯನ್ನು ಕೇಳಿದ್ದ ಅರಸರುಗಳು ಕೃಷ್ಣನನ್ನು ಆಶ್ರಯರಾಗಿಯೂ, ಧನ್ಯರಾಗಿಯೂ ಇರುವಿರಿ ಎಂದು ಮಹರ್ಷಿ ಹೇಳಿದರೆ, ತಾವು ದಕ್ಷಿಣೆಗಳೊಂದಿಗೆ ಹೀಗೆಯೇ ಎಂದಿರಿ. ಇದರ ರಹಸ್ಯಾರ್ಥ ನಮಗೆ ತಿಳಿಯಲಿಲ್ಲ ದಯವಿಟ್ಟು ತಿಳಿಸಿ ಎಂದು ಪ್ರಾರ್ಥಿಸಿದರು. ಆಗ ಶ್ರೀಕೃಷ್ಣನು ಈ ವಿಚಾರವನ್ನು ನಾರದರೇ ತಿಳಿಸುವರೆಂದರು. ನಾರದರು ಹೇಳಿದರು.

ಅರುಸುಗಳೇ! ಒಂದು ಸಾರಿ ನಾನು ಗಂಗಾತೀರದಲ್ಲಿ ವಾಸಮಾಡುತ್ತ ತ್ರಿಕಾಲ ಸ್ನಾನ ಮಾಡಿ ಅನುಷ್ಠಾನ ನಿರತನಾಗಿ ಇದ್ದೆನು. ಒಂದು ದಿನ ಸೂರ್ಯೋದಯಾ ನಂತರ ಅತ್ಯಂತ

ದೊಡ್ಡದಾದ ಒಂದು ಆಮೆಯನ್ನು ಕಂಡೆನು. ಅದನ್ನು ಕುರಿತು ಓಡುಗಳಿಂದ ಮುಚ್ಚಲ್ಪಟ್ಟ ಶರೀರವುಳ್ಳವನಾಗಿ, ನಿಶ್ಚಿಂತೆಯಿಂದ ನೀರಿನೊಳಗೆ ಆಶ್ರಯವಾದ ಶರೀರದೊಂದಿಗೆ ಇರುವುದರಿಂದ ನೀನು ಧನ್ಯನಾಗಿ ಇರುವೆಯೆಂದನು. ಆಗ ಆ ಆಮೆಯು ನನ್ನಲ್ಲಿ ಆಶ್ರಯ ವೇನು? ನಾನು ಹೇಗೆ ಧನ್ಯನಾಗುವೆನು? ಯಾವ ಗಂಗಾನದಿಯಲ್ಲಿ ನನ್ನಂತಹ ಲಕ್ಷೋಪ ಲಕ್ಷ ಜೀವ ಜಂತುಗಳು ಸಂಚಾರಮಾಡುತ್ತೋ ಆ ನದಿ ಆಶ್ರಯವಾಗಿಯೂ, ಧನ್ಯೆಯೂ ಆಶ್ರಯೆ ಎಂದು ಹೇಳಿತು. ಅನಂತರ, ನಾನು ಗಂಗಾ ನದಿಯನ್ನು ಕುರಿತು ಗಂಗೆಯೇ ನೀನು ಆಶ್ರಯೆಯೂ ಧನ್ಯೆಯೂ ಆಗಿರುವೆ. ನೀನು ನೀರಿನಲ್ಲಿ ವಾಸಮಾಡುವ ಅನೇಕ ಜಂತುಗಳಿಗೆ ಆಶ್ರಯವಾಗಿ ಮುನಿಪುಂಗವರ ಆಶ್ರಮವನ್ನು ಕಾಪಾಡಿಕೊಂಡು ಸಮುದ್ರ ರಾಜನನ್ನು ಸೇರುವಿಯಲ್ಲವೆ? ಎಂದೆನು. ಆಗ ಗಂಗಾ ಮಾತೆಯು ಹೆಣ್ಣುರೂಪಿನಲ್ಲಿ ಬಂದು ಮುನಿವರೇಣ್ಯ! ನಾನು ಆಶ್ರೆಯೆಯೂ ಅಲ್ಲ, ಧನ್ಯೆಯೂ ಅಲ್ಲ; ಪ್ರಪಂಚದಲ್ಲಿ ಸರ್ವಾಶ್ರಯಕರನೂ ಧನ್ಯನೂ ಆದವನು ಸಮುದ್ರರಾಜನು. ಅವನಲ್ಲಿ ನನ್ನಂತಹ ನೂರಾರು ನದಿಗಳೂ, ಸರೋವರಗಳೂ ಸೇರಿರುತ್ತೆ -ಎಂದಳು. ಅದನ್ನು ಕೇಳಿದ ನಾನು ಸಮುದ್ರರಾಜನಲ್ಲಿ ಹೋಗಿ ಸಾಗರೋತ್ತಮನೇ ನೀನೇ ಆಶ್ರಯನೂ, ಧನ್ಯನೂ ಆಗಿರುತ್ತೀಯೆ! ನೀನು ನೀರು ಬತ್ತದಂತೆ ಇರುತ್ತೀಯೆ, ಪ್ರಪಂಚವನ್ನು ಪರಿಶುದ್ಧ ಪಡಿಸುವ ಅನೇಕ ನದಿಗಳು ಬತ್ತದಂತೆ ಇರುತ್ತೀಯೆ, ಪ್ರಪಂಚವನ್ನು ಪರಿಶುದ್ಧ ಪಡಿಸುವ ಅನೇಕ ನದಿಗಳು ನಿನಗೆ ಪತ್ನಿಯಾಗಿ ನಿನ್ನನ್ನೇ ಸೇರುವರಲ್ಲವೇ ಎಂದೆನು ಆಗ ಸಮುದ್ರರಾಜನು ನನ್ನನ್ನು ಕುರಿತು ಹೇಳಿದನು. ಮುನಿವರ್ಯರೇ! ನನ್ನಲ್ಲಿ ಅಂತಹ ಹಿರಿಮೆ ಒಂದೂ ಇಲ್ಲ. ಯಾವ ಭೂಮಿಯಲ್ಲಿ ನಾನು ವಾಸಮಾಡುತ್ತೇನೆಯೋ ಅದಕ್ಕೆ ಆ ಹಿರಿಮೆ ಉಂಟು. ಏಕೆಂದರೆ, ಪ್ರಪಂಚದಲ್ಲಿ ಆಶ್ರಯದಾತೆ ಭೂಮಾತೆ ಅತ್ಯಂತ ಹಿರಿಮೆಯುಳ್ಳವಳು, ಆಶ್ಚರ್ಯಕರವಾದ ಶಕ್ತಿಯುಳ್ಳವಳು ಎಂದನು. ಅದಕ್ಕೆ ಭೂದೇವಿಯು ಬ್ರಾಹ್ಮಣರಿಗೆ ಹಿರಿಯರಾದ ಋಷಿವರ್ಯರೇ! ಹಾಗೆನ್ನ ಬೇಡಿ. ಕುಲ ಪರ್ವತಗಳ ಆಶ್ರಯದಿಂದಲೇ ನಾನು ಇತರರನ್ನು ಧಾರಣಮಾಡಲು ಶಕ್ತಿಯುಳ್ಳವಳಾಗಿರುವೆನು. ಆದ್ದರಿಂದ ಪರ್ವತವೇ ಹಿರಿಮೆಯುಳ್ಳದ್ದು ಎಂದಳು. ಈ ರೀತಿ ಭೂಮಾತೆಯಿಂದ ಹೇಳಲ್ಪಟ್ಟ ಪರ್ವತವನ್ನು ಕುರಿತು ಪರ್ವತರಾಜನೇ! ಶ್ರೇಷ್ಠವಾದ ರತ್ನಗಳ್ಳುಳವರೇ ವಿವಿಧ ಧಾತುಗಳನ್ನುಳ್ಳವರೇ ಲೋಕದಲ್ಲಿ ನೀವೇ ಹಿರಿಮೆಯುಳ್ಳವರು ಎಂದೆನು.

ಈ ರೀತಿ ಪ್ರಶಂಸಿಲ್ಪಟ್ಟ ಪರ್ವತಗಳು ಹೇಳಿದವು. ಬ್ರಹ್ಮ ಋಷಿಯೇ! ನಾನು ಆಶ್ರಿತನೂ ಅಲ್ಲ. ಧನ್ಯನೂ ಅಲ್ಲ. ಇವೆರಡನ್ನೂ ಉಳ್ಳವನೂ ದೇವತೆಗಳಲ್ಲಿ ಶ್ರೇಷ್ಠನಾದವನೂ ಎಲ್ಲರನ್ನೂ ಸೃಷ್ಟಿಕರ್ತನಾದ ಚತುರ್ಮುಖನೇ ಅಂದರು. ಅನಂತರ ನಾನು ಸೃಷ್ಟಿಕರ್ತನಾದ ಚತುರ್ಮುಖನನ್ನು ಕುರಿತು ಕೇಳಿದೆನು. ಸ್ಥಾವರ ಜಂಗಮಗಳಾದ ಎಲ್ಲಾ ಪದಾರ್ಥಗಳೂ, ದೇವರುಗಳೂ, ಅರಸರುಗಳೂ ನಿಮ್ಮಿಂದಲೇ ಸೃಷ್ಟಿಸಲ್ಪಟ್ಟಿರುತ್ತಾರೆ ಎಂದೆನು. ಆಗ ಬ್ರಹ್ಮನು ನಾರದರೇ! ನಾನಲ್ಲ, ವೇದಗಳೇ ಆಶ್ರಿತರಿಗೆ ವಾಸಸ್ಥಳ, ಸತ್ಯಾರ್ಥಗಳಿಗೆ ಸೀಮಾಭೂಮಿಯಾದ ವೇದಗಳು ಪ್ರಪಂಚವನ್ನು ಧಾರುಣಮಾಡುತ್ತವೆ. ಚತು ರ್ವೇದಗಳನ್ನು ನನ್ನ ಜೀವವಾಗಿರುತ್ತೆ. ಅವುಗಳೇ ನನ್ನನ್ನು ಧರಿಸಿರುತ್ತೆ ಎಂದನು. ಆಗ

ವೇದ ಗಳು ಕುರಿತು ನೀವುಗಳೇ ಧನ್ಯರು. ಆಶ್ರಿತರುಗಳು ಬ್ರಾಹ್ಮಣರಿಗೆ ಆಧಾರಭೂತರು, ಪ್ರಜಾ ಪತಿಯೂ ಆದ ಬ್ರಹ್ಮನು ಇದೇ ರೀತಿ ಹೇಳಿದನು ಎಂದೆನು.

ನನ್ನ ಮಾತನ್ನು ಕೇಳಿದ ನಂತರ ಯೂಪಸ್ತಂಭಗಳನ್ನು ಧ್ವಜಗಳನ್ನಾಗಿಉಳ್ಳ ಅಗ್ನಿಷ್ಟೋಮಗಳಾದ ಯಾಗಗಳು ಆಶ್ರಯಶಬ್ದವೂ, ಧನ್ಯಶಬ್ದವೂ ನಮ್ಮಲ್ಲಿ ಇಲ್ಲ. ವಿಷ್ಣುವಾಗಿರುವ ಪರಬ್ರಹ್ಮವೇ ಆಶ್ರಯ ಅವನೇ ನಮಗೆಲ್ಲಾ ಸದ್ಗತಿಯನ್ನು ನೀಡುವವನು ಎಂದೆವು. ಅಗ್ನಿಯಲ್ಲಿ ಹೋಮಮಾಡುವ ಯಾವುದೊಂದು ಪರಿಶುದ್ಧವಾದ ಘೃತವಿದೇಯೋ ಅದನ್ನು ಭುಜಿಸಿದರೆ ಅದಕ್ಕೆ ಶಕ್ತಿಯನ್ನು ಲೋಕಮೂರ್ತಿಯಾದ ಅವನಲ್ಲವೇ ನೀಡುವವನು ಅದನ್ನು ಕೇಳಿ ನಾನು ಭೂಲೋಕಕ್ಕೆ ಬಂದು ಶ್ರೀಕೃಷ್ಣನನ್ನು ನಮಸ್ಕರಿಸಿ ನೀವು ಆಶ್ರಿತರೂ, ಧನ್ಯರೂ ಆಗಿರುವಿರೆಂದು ಭಿನ್ನವಿಸಿಕೊಂಡೆನು. ಅದಕ್ಕೆ ಪ್ರತ್ಯುತ್ತರವಾಗಿ ''ದಕ್ಷಿಣಾಭಿಸ್ಸಹೇ ತ್ವೇವಂ'' ಹೀಗೆಂದು ಕೃಷ್ಣನಿಂದ ಹೇಳಲ್ಪಟ್ಟ ನುಡಿ ನನಗೆಯುಕ್ತವಾಗಿತ್ತು.

ಹೇಗೆಂದರೆ- ಯಜ್ಞಾನಾಂ ಹಿ ಗತಿರ್ವಿಷ್ಣು

ಸ್ಸರ್ವೇಷಾಂ ತು ಸದಕ್ಷಿಣಃ
ದಕ್ಷಿಣಾಭೀ ಸ್ಸಹೇತ್ಯೇವಂ ಪ್ರಶ್ನೋಮಮ
ಸಮವಾಪ್ತವಾನ್''

ಎಂದು ಎಲ್ಲಾ ಯಜ್ಞಗಳಿಗೂ ದಕ್ಷಿಣೆಗಳೊಂದಿಗೆ ಕೂಡಿ ಇರುವ ಸರ್ವೇಶ್ವರನೇ ರಕ್ಷಕನಾಗಿರುತ್ತಾನೆ. ಆದ್ದರಿಂದಲೇ ದಕ್ಷಿಣಾಬಿಸ್ಸಹೇತ್ಯೇವಂ ಎಂಬ ಮಾತಿನಿಂದ ನನ್ನ ಪ್ರಶ್ನೆಗೆ ಉತ್ತರ ದೊರೆಯಿತು.

ವಸುಗಳೇ! ಆ ಮಾತಿನ ತಾತ್ಪರ್ಯವು ನನ್ನಿಂದ ಹೇಳಲ್ಪಟ್ಟಿತು, ನಾನು ಹೋಗಿ ಬರುತ್ತೇನೆ ಎಂದರು. ಇದನ್ನು ಕೇಳಿದ ಅರಸರುಗಳು ಶ್ರೀಕೃಷ್ಣನ ಮಹಾತ್ಮೆಯನ್ನು ಕೇಳಿ ಆನಂದದಿಂದ ತಮ್ಮ ತಮ್ಮ ದೇಶಗಳಿಗೆ ಹಿಂತಿರುಗಿದರು.

ಈ ವೃತ್ತಾಂತದಲ್ಲಿ ಭಗವಂತನು ನಾರದಮಹರ್ಷಿಗೆ ತನ್ನ ಸರ್ವಾಧಿಕೃತ್ಯವನ್ನು ಪ್ರಕಾಶಿಸಲು ಇಚ್ಛಿಸಿ, ಗಂಗಾನದಿಯಲ್ಲಿ ದೊಡ್ಡ ಆಕಾರವುಳ್ಳ ಆಮೆಯಾಗಿ ಆನಂತರ ಮೇಲೆ ತಿಳಿಸಿದ ವಿವರಗಳ ರೀತಿಯಲ್ಲಿ ಸರ್ವರಿಗೂ ಅಪೇಕ್ಷಾನುಗುಣವಾಗಿ ಎಲ್ಲವಿಧ ಹಿರಿಮೆ ಗಳನ್ನು ಕೊಡುವಂತಹ ಅಸಾಧಾರಣ ದಿವ್ಯ ವಿಗ್ರಹದೊಂದಿಗೆ ಕೂಡಿರುವ ವಿಷ್ಣುವಾದ ಕೃಷ್ಣನೇ ಅಖಿಲ ಬಲಪ್ರದನು ಮತ್ತು ಪರಮ ಪ್ರಾಪ್ಯನು ಅವನೇ ಎಂದಾಯಿತು.

ಈ ವೃತ್ತಾಂತ ಪೆರಿಯಾಳ್ವಾರ್ ತಿರುಮೊಳಿಯಲ್ಲಿ (ಮರವಡಿ) ಐದನೆಯ ಪಾಶುರ ಆಮೆಯಾಯಿ ಎನ್ನುವ ಪಾಶುರದಲ್ಲಿ ಹೇಳಲ್ಪಟ್ಟಿರುತ್ತೆ.

ಶ್ರೀ ಮಣವಾಳಮಾಮುನಿಗಳ ವ್ಯಾಖ್ಯಾನದಲ್ಲಿ ವಿವರಿಸಲ್ಪಟ್ಟಿರುತ್ತೆ.

* * *



ಶ್ಯಾಮ ಸುಂದರ

# ಅರ್ಚಾವತಾರದ ಮಹಿಮೆ

ಭಗವಂತನ ಸ್ವರೂಪವಾದದ್ದು-ಪರ, ವ್ಯೂಹ, ವಿಭವ, ಅಂತರ್ಯಾಮಿ ಮತ್ತು ಅರ್ಚಾವತಾರವೆಂದು ಐದು ವಿಧವಾಗಿರುತ್ತದೆ. ಈ ವಿಷಯವು ವಿಶ್ವಕ್ಸೇನ ಸಂಹಿತೆಯಲ್ಲಿ

*''ಮಮ ಪ್ರಕಾರಾಃ ಪಂಚೇತಿ ಪ್ರಾಹುರ್ವೇದಾಂತ ಪಾರಗಾಃ*
*ಪರೋವ್ಯೂಹಶ್ಚ ವಿಭವೋ ನಿಯಂತಾ ಧರ್ಮದೇಹಿನಾಮ್,*
*ಅರ್ಚಾವತಾರಶ್ಚ ತಥಾ ದಯಾಳು ಪುರುಷಾಕೃತಿಃ ಇತೀವಮ್ ಪಂಚಧ*
*ಪ್ರಾಹುರ್ಮಾಂ ವೇದಾಂತವಿದೋ ಜನಾಃ''*

ಎಂದು ಹೇಳಲ್ಪಟ್ಟಿದೆ.

ಇದರಲ್ಲಿ ಪರತ್ವವೆಂದರೆ ನಲಮಂದ ಮಿಲ್ಲದೋರ್ ನಾಡು ಎನ್ನಲ್ಪಡುವ ನಿತ್ಯಭೂತಿಯಲ್ಲಿ ನಿತ್ಯರಿಗೂ ಮುಕ್ತರಿಗೂ ಭೋಗ್ಯವಾಗಿರುವ ಸ್ಥಿತಿ. ಅದರ ಉದಾಹರಣೆಗೆ ಶ್ರೀ ಭಗವದ್ರಾಮಾನುಜರು ಶ್ರೀ ವೈಕುಂಠ ಗದ್ಯದಲ್ಲಿಯ ಇಚ್ಛಾವಿಹಾರ ವಿಧಯೇ ವಿಹಿತಾನ್ಯ ಮೂನಿ ಮೊದಲುಗೊಂಡು ಸಂಸಾರದಿಂದ ವಿಮುಕ್ತರಾಗಿ ಸ್ವರೂಪಾವಿರ್ಭಾವ ಹೊಂದಿ ಭಗವದನುಭವ ಕೈಂಕರ್ಯದಲ್ಲಿಯೇ,ಸಮಯವನ್ನು ಕಳೆಯುವವರು ಮುಕ್ತರೆನ್ನಲ್ಪಡುತ್ತಾರೆ. ಒಂದು ದಿನವೂ ಸಂಸಾರ ಮಂಡಲದಲ್ಲಿ ಕಾಲಿಡದವರು ನಿತ್ಯರು. ಅನಂತ,ಗರುಡ, ವಿಶ್ವಕ್ಷೇನರನ್ನು ನಿತ್ಯರೆನ್ನುತ್ತಾರೆ. ಈ ರೀತಿನಿತ್ಯ-ಮುಕ್ತರಿಂದ ಸೇವಿಸಲ್ಪಡುತ್ತಾ ಪರಮ ಪದದಲಿರುವ ಸ್ಥಿತಿ ಪರತ್ವವೆಂದಾಯಿತು.

ಸೃಷ್ಟಿಸ್ಥಿತಿ ಸಂಹಾರಗಳನ್ನು ನಿರ್ವಹಿಸುವುದಕ್ಕಾಗಿಯೂ ಬುಭುಕ್ಷಗಳಾದ ಸಂಸಾರಿಗಳ ಇಷ್ಟಪ್ರಾಪ್ತಿಗಳನ್ನೂ ಅನಿಷ್ಟನಿವೃತ್ತಿಯನ್ನೂ ಮಾಡಿಕೊಟ್ಟು ಅವರುಗಳನ್ನೂ ರಕ್ಷಿಸುವುದು, ಮುಮುಕ್ಷುಗಳಾಗಿ ಉಪಾಸಿಸುವವರಿಗೆ ಸಾಂಸಾರಿಕ ನಿವೃತ್ತಿಪೂರ್ವಕವಾಗಿ ತನ್ನನ್ನು ಸೇರುವಂತೆ ಅನುಗ್ರಹಿಸುವುದಕ್ಕಾಗಿ ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧರುಗಳಾಗಿ ಕ್ಷೀರಾಬ್ಧಿಯಲ್ಲಿ ವಾಸುದೇವರನ್ನು ಸೇರಿ ಚತುರ್ವಿಧವ್ಯೂಹವೆನ್ನಲ್ಪಡುತ್ತದೆ.

## ವಿಭವಾವತಾರ

ಮತ್ಸ್ಯ, ಕೂರ್ಮ,ರಾಮ,ಕೃಷ್ಣಾದ್ಯವತಾರಗಳೇ ವಿಭವಾವತಾರಗಳು, ಇವು ಆವೇಶಾವತಾರವೆಂದೂ, ಸಾಕ್ಷಾದವತಾರವೆಂದೂ ಎರಡು ವಿಧ. ಆವೇಶದಲ್ಲಿ ಸ್ವರೂಪಾವೇಶ, ಶಕ್ತ್ಯಾವೇಶವೆಂದು ಎರಡು ವಿಧಗಳು. ತನ್ನ ಅಸಾಧಾರಣರೂಪದಿಂದ ಪ್ರವೇಶಿಸುವುದು ಸ್ವರೂಪಾವೇಶವಾಗುತ್ತದೆ. ಉದಾ:- ಪರಶುರಾಮಾದಿಗಳಾದ ಚೇತನರ

ಶರೀರಗಳಲ್ಲಿ ತನ್ನ ಅಸಾಧಾರಣ ವಿಗ್ರಹಗಳೊಂದಿಗೆ ಪ್ರವೇಶಿಸಿ ಇರುವುದು, ಕೆಲಸ ನಡೆಯಬೇಕಾದ ಕಾಲದಲ್ಲಿ ಮಾತ್ರ ಬ್ರಹ್ಮ, ಶಿವ ಮೊದಲಾದ ಚೇತನರಲ್ಲಿ ಶಕ್ತಿ ಮಾತ್ರವಾಗಿ ಸ್ಫುರಿಸಿ ನಿಲ್ಲುವುದುಶಕ್ತ್ಯಾವೇಶವಾಗುವುದು. ಈ ರೀತಿಯಾದ ವಿಭವಾವತಾರ ಅಸಂಖ್ಯಾತ ಆದ್ದರಿಂದಲೇ ಶ್ರೀ ನಮ್ಮಾಳ್ವಾರ್ರು ''ಎನ್ನನ್ರಯೋನಿಯುಮಾಯ್ ಪ್ಪಿರಂದಾಯಿಮ್ಮೈಯೋರ್ ತಲೈವಾ'' ಎನ್ನುತ್ತಾರೆ. (ತಿರುವಿರುತ್ತ-೧)

''ಅಂತರ್ಯಾಮಿತ್ವ:-

ಅಂತಃ ಪ್ರವಿಷ್ಟಃಶಾಸ್ತಾ ಜನಾನಾಮ್''

''ಶಾಸ್ತಾ ವಿಷ್ಣು ರಶೇಶಸ್ಯ ಜಗತೋ ಯೋ ಹೃದಿಸ್ಥಿತಃ''

ಮುಂತಾದುವುಗಳಲ್ಲಿ ಹೇಳುವಂತೆಯೇ ಒಳಗೆ ಪ್ರವೇಶಿಸಿ ಪ್ರವೃತ್ತಿ ನಿವೃತ್ತಿಗಳಿಗೂ ನಿಯಾಮಕನಾಗಿರುತ್ತಾನೆ. ಈ ಅಂತರ್ವ್ಯಾಪ್ತಿಯಲ್ಲಿ ಕೆಲವು ಪಕ್ಷಭೇದಗಳುಂಟು.

ಇನ್ನು ಅರ್ಚಾವತಾರ:- ಅರ್ಚಾವತಾರವೆಂದರೆ ದೇವಸ್ಥಾನಗಳಲ್ಲಿಯೂ, ಗೃಹಗಳಲ್ಲಿಯೂ ಇರುವ ಸ್ಥಿತಿ, ಅರ್ಚಾ ಎನ್ನುವ ನುಡಿ (ಮೂರ್ತಿ).

ಅರ್ಚಾ ಪೂಜಾ ಪ್ರತಿಮಯೋಃ ಎನ್ನುವ ನಿಘಂಟಿನಂತೆ ಪೂಜಿಸುವುದು ಎನ್ನುವ ಅರ್ಥವನ್ನು ಮತ್ತು ಪ್ರತಿಮೆ ಎನ್ನುವ ಅರ್ಥವನ್ನು ಉಳ್ಳದ್ದು, ಇಲ್ಲಿ ಪ್ರತಿಮೆ ಎನ್ನುವುದೇ ಅರ್ಥವಾಗಿದೆ.

ಈ ಅರ್ಚಾವತಾರದಲ್ಲಿ ವಿಶೇಷವಾಗಿ ಅಭಿನಿವೇಶವುಳ್ಳವರು ಶ್ರೀವೈಷ್ಣವ ಆಳ್ವಾರುಗಳು ಮತ್ತು ಆಚಾರ್ಯರುಗಳು. ಇವರುಗಳ ದಿವ್ಯಸೂಕ್ತಿಗಳಲ್ಲಿ ಮೊದಲ ಆಳ್ವಾರರು ಶ್ರೀಪೆರಿಯಾಳ್ವಾರ್ರವರು ತಮ್ಮ ಕೃತಿಯಾದ ಮುದಲ್ ತಿರುವಂದಾದಿಯ ೧೪ನೇ ಶ್ಲೋಕದಲ್ಲಿ-

''ತಮರು ಹಂದ ತ್ತೆ ವುರುವ ಮವುರವುಮ್ ತಾನೇ,

ತಮರುಹಂದತ್ತೇಪ್ಪೇರ್ ಮತ್ತಪ್ಪೇರ್ ತಮರುಹಂದು,

ವಿವ್ವಣ್ಣಮ್ ಶಿಂತ್ತಿತ್ತಿಮ್ಮೈಯಾದಿರುಪ್ಪರೇ, ಅವ್ವಣ್ಣ ಮಾಳಿಯಾವಾಯ್,''

ಈ ಪಾಶುರವು ಅರ್ಚಾವತಾರದ ಹಿರಿಮೆಯನ್ನು ತಿಳಿಸುತ್ತದೆ.

ಒಂದು ಸಾರಿ ಶ್ರೀಭಗವದ್ರಾಮಾನುಜರು ಸನ್ಯಾಸ ನಿಯಮದಂತೆ ನಿತ್ಯಭಿಕ್ಷಾಟನೆಗಾಗಿ ಮಾರ್ಗದಲ್ಲಿ ಬರುತ್ತಿದ್ದರೆ ಕೆಲವು ದುಷ್ಟಬಾಲಕರು ಭಗವಂತನ ಆಕಾರವನ್ನು ನೆಲದಲ್ಲಿ

ಬರೆದು ರಾಮಾನುಜರೇ !ನಿಮ್ಮ ದೇವರನ್ನು ನೋಡಿದಿರಾ! ಎಂದರು. ಆಗ ಶ್ರೀ ರಾಮಾನುಜರು ನಿಜವಾಗಿಯೂ ಆ ಮೂರ್ತಿಯಲ್ಲಿ ಭಗವಂತನ ರೂಪನ್ನು ಸ್ಮರಿಸಿ ನಮಸ್ಕರಿಸಿದರು. ಅವರು ಮಹನೀಯರು, ಜ್ಞಾನಿಗಳು ಸಾಕ್ಷಾತ್ಕಾರ ಪಡೆದವರಾಗಿರುತ್ತಾರೆ. ಈ ರೀತಿ ಶ್ರೀರಂಗದಲ್ಲಿ ಅನೇಕ ಸಾರಿ ಬಾಲಕರು ರಾಮಾನುಜರಿಗೆ ಮಣ್ಣು ಅಥವಾ ಮರಳನ್ನು ಪ್ರಸಾದವೆಂದು ನೀಡಿದ್ದನ್ನು ರಾಮಾನುಜರು ಶ್ರದ್ಧೆಯಿಂದ ಕೈ ನೀಡಿ ತೆಗೆದುಕೊಂಡಿರುತ್ತಾರೆ.

ಶ್ರೀ ನಂಜೀಯರೆಂಬ ವೇದಾಂತಿಯವರ ಆರಾಧನ ವಿಗ್ರಹ ''ಆಯರ್ ತೇವು'' ಎಂಬುದು. ಆ ದೇವರು ಎಂಗಳಾಳ್‌ವಾನ್ ಎಂಬ ದ್ವಿಜೋತ್ತಮರ ಸ್ವಪ್ನದಲ್ಲಿ ಕಾಣಿಸಿಕೊಂಡು ನೇರಳೆ ಹಣ್ಣನ್ನು ಬೇಡಿ ಅವರು ನಂಜೀಯರ ಮನೆಗೆ ತಂದುಕೊಟ್ಟರೆಂದು ಪ್ರತೀತಿ.

ಆಳ್ವಾರುಗಳಲ್ಲಿ ಶ್ರೀ ತಿರಮಂಗೈ ಆಳ್ವಾರ್ರು ಅರ್ಚಾವತಾರದಲ್ಲಿ ಅಂತ್ಯ ಪ್ರತಿಪತ್ತಿ ಉಳ್ಳವರಾಗಿದ್ದರು. ಅವರು ತಮ್ಮ ಕೃತಿಯಲ್ಲಿ ಅಡಿಯೋಮುಕ್ಕೇ ಎಂಬೆರುಮಾನಲ್ಲೀರೋ ನೀರ್‌ಇಂದಳೂರಿರೇ ಪಿನ್ನಾನಾರ್‌ವಣಂಗುಂ ಜ್ಯೋತಿ ತಿರುಮೊಳ್ಳಿಕ್ಕಳತ್ತಾನಾಯ್ ಶ್ರೀ ತಿರುಮಂಗೈ ಆಳ್‌ವಾರ್ರವರು ತಿರುವಿಂದಳೂರಿನ ಪರಿಮಳರಂಗನಾಥನ ಸನ್ನಿಧಿಯಲ್ಲಿ ಹೋಗಿ ದಿವ್ಯಮಂಗಳ ವಿಗ್ರಹ ಸೇವೆಯಲ್ಲಿ ತಮಗಿರುವ ಮಿತಿಮೀರಿದ ಅಭಿನಿವೇಶವನ್ನು ಪ್ರಕಟಿಸುತ್ತಾರೆ. ಆದರೆ ಅರ್ಚಕಪರಾಧೀನನಾದ ಭಗವಂತನು ಏನು ಮಾಡಲು ಸಾಧ್ಯ? ಅರ್ಚಕರು ನಿಯತ ಸಮಯ ಮುಗಿದ ನಂತರ ಬೀಗ ಮುದ್ರೆಯನ್ನು ಮಾಡಿ ಹಿಂತಿರುಗಿದ್ದರು. ಈ ಸಂದರ್ಭದಲ್ಲಿ ಆಳ್ವಾರವರು ಪರಮಾತ್ಮನನ್ನು ನಿಂದಿಸಿದರೆ ಭಗವಂತನು ಆಳ್ವಾರಿಗೆ ಅನೇಕ ಸಮಾಧಾನದ ವಾಕ್ಯಗಳನ್ನು ಹೇಳುತ್ತಾರೆ. ಆದರೆ ಆಳ್ವಾರಾದರೋ ಯಾವುದರಿಂದಲೂ ಸಮಾಧಾನ ಹೊಂದುವುದಿಲ್ಲ.

ಆಗ ಭಗವಂತನು ಆಳ್ವಾರನ್ನು ಕುರಿತು ಆಳ್ವಾರೇ ಪ್ರಹ್ಲಾದನ ವಿಷಯ ನಿಮಗೆ ಗೊತ್ತೋ ಇಲ್ಲವೋ? ಅದಕ್ಕೆ ಆಳ್ವಾರ್ರವರು ತಮಗೆ ಸಂಪೂರ್ಣವಾಗಿ ತಿಳಿದಿರುವ ಪ್ರಹ್ಲಾದನ ಪ್ರಾರ್ಥನೆಯನ್ನು ತಿಳಿಸಿದರು. ಸರ್ವಭೂತಾತ್ಮಕೇ ತಾತ! ಜಗನ್ನಾಥೇ ಜಗನ್ಮಯೇ ಪರಮಾತ್ಮನಿ ಗೋವಿಂದೇ ಈ ಉಕ್ತಿಯನ್ನು ಅನುಸರಿಸಿ, ತೀಯುಂಬೆರುಮಾನ್ ನೀರೆಂಬೆರುಮಾನ್ ಎನ್ನುತ್ತಾರೆ.

''ನೀರ್‌ವಾನಮ್ ಮಣ್ಣೇರಿ ಕಾಲಾಯ್ ನಿನ್ರನೆಡುಮಾಲೆ'' ಎನ್ನುವಂತೆಯೇ ನಾವು

ಕಣ್ಣಿಂದ ನೋಡುವ ವಸ್ತುಗಳೆಲ್ಲಾ ಭಗವಂತನರೂಪವೆಂದಿರುವ ಪ್ರಹ್ಲಾದನ ಅಭಿಪ್ರಾಯವನ್ನು ಆಳ್ವಾರ್ರು ತಿಳಿಸಿದರು. ಇದನ್ನು ಕೇಳಿದ ಪರಮಾತ್ಮನು - ಆಳ್ವಾರ್ ! ನಿಮಗೂ ಈ ರೀತಿಯಾದ ಅಧ್ಯವಸಾಯವಿರುವುದರಿಂದ ನೀವು ಜಗತ್ತಿನ ಪ್ರತಿವಸ್ತುವಿನಲ್ಲಿಯೂ ನನ್ನನ್ನು ನೋಡಿದ್ದಾಗಿ ತಿಳಿದು ತೃಪ್ತರಾಗಿರಬಹುದಲ್ಲ. ಪ್ರಹ್ಲಾದನು ಯಾವುದಾದರೊಂದು ದೇವಸ್ಥಾನಕ್ಕೆ ಹೋಗಿ ನನಗೆ ನಿರ್ಬಧಿಸಿದುದುಂಟೋ ? ಇಲ್ಲವಲ್ಲ: ''ಅಗ್ನೌತಿಷ್ಠತಿ ವಿಪ್ರಾಣಾಮ್'' ಎನ್ನುವುದು ನಿಮಗೆ ತಿಳಿದಿದ್ದೇ. ಆದ್ದರಿಂದ ನೀವು ನಿರ್ಬಂಧಿಸುವುದು ಏಕೆ? '' ಅದಕ್ಕೆ ಆಳ್‌ವಾರ್ರವರು'' ನಾವು ಪ್ರಹ್ಲಾದನ ಗೋಷ್ಠಿಯಲ್ಲಿ ಸೇರಿದವರಲ್ಲ; ಅಸಾಧರಣ ದಿವ್ಯಮಂಗಳ ವಿಗ್ರಹ ವೇಷವನ್ನು ಕಂಡು ಆನಂದಿಸಲು ಆತುರರಾಗಿರುವ ನಮಗೆ ಜಗತ್ ಸ್ವರೂಪನಾಗಿರುವ ಸ್ಥಿತಿ ಏನು ತೃಪ್ತಿಯನ್ನುಂಟು ಮಾಡಿತ್ತದೆ! ವೇದಾಂತ ಪ್ರಕ್ರಿಯೆಯಲ್ಲಿ ಚರಾಚರವೆಲ್ಲಾ ನಿನ್ನ ಪ್ರತಿರೂಪವಾಗಿದ್ದರೂ ನಿನ್ನ ಅಸಾಧಾರಣವಾದ ದಿವ್ಯರೂಪವನ್ನು ದರ್ಶಿಸಿ ಆನಂದಿಸಬೇಕಲ್ಲವೇ ? ನೀನು ಅರ್ಚಾರೂಪವನ್ನು ಪರಿಗ್ರಹಿಸಿ ವಿರಾಜಿಸುತ್ತಿರುವೆಯಲ್ಲ''.

ನಿತ್ಯಮುಕ್ತರಿಗಾಗಿ ನಿನ್ನ ಪರಾವಾಸುದೇವನಸ್ಥಿತಿ. ರಾಮಕೃಷ್ಣಾದಿ ವಿಭವಾವತಾರಗಳು ಮಾತ್ರ. ಆದರೆ ಅರ್ಚಾವತಾರ ಸ್ಥಿತ್ತಿಯು ನಮ್ಮಂತಹವರಿಗೆ ಜೀವಜೀವಾಳ, ಸಂಸಾರಿಗಳಿಗೆ ನಿನ್ನ ದಿವ್ಯಮಂಗಳ ದರ್ಶನ ನೀಡುವುದಕ್ಕಾಗಿ ಅಲ್ಲವೇ ಈ ಅರ್ಚಾವತಾರವು ಪ್ರಕಟವಾಗಿರುವುದು!

ತಿರುವಾಯ್‌ಮೊಳಿಯಲ್ಲಿ (೬-೯-೧) ''ನೀರಾಯ್ ನಿಲನಾಯ್ ತ್ತೀಯಾಯ್ ಕಾಲಾಯ್ ನೆಡುವಾನಾಯ್, ಶೀರಾರ್ ಶುಡರ್‌ಗಳಿರಂಡಾಯ್ ಶಿವನಾಯಯನಾಯ್'' ಈ ರೀತಿ ಪರಮಾತ್ಮನ ಜಗಸ್ವರೂಪದ ಸ್ಥಿತಿಯನ್ನು ಮೊದಲು ತಿಳಿಸಿ ಅದರಲ್ಲಿ ಆಳ್ವಾರಿಗೆ ಸಂತುಷ್ಟಿ ಇಲ್ಲದ್ದರಿಂದ ಅಸಾಧಾರಣ ವಿಗ್ರಹ ಸೇವೆಯೇ ಬೇಕೆಂಬುದನ್ನು ಈ ಪಾಶುರದಿಂದ ತಿಳಿಸಿರುತ್ತಾರೆ. ''ಕೂರಾರಾಳಿ ವೆಣ್ ಶಂಗೇಂದಿ ಕೊಡಿಯೇನ್ ಪಾಲ್ ವಾರಾಯ್, ಒರುನಾಳ್ ಮಣ್ಣುಮ್ ವಿಣ್ಣುಮ್ ಮಹಿಳವೇ'' ಎನ್ನುವ ನುಡಿಗಳಿಂದ ವಿರಾಜಿಸುವವನು.

ಅರ್ಚಾವತಾರದಲ್ಲಿ ಭಗವಂತನು ಸರ್ವಗುಣ ಸಂಪೂರ್ಣನು, ಷಾಡ್ಗುಣ್ಯ ಪರಿಪೂರ್ಣನೆಂದು ಹೆಸರು. ೧) ಸ್ವರೂಪನಿರೂಪ ಗುಣಗಳು, ೨) ನಿರೂಪಿತ ಸ್ವರೂಪ ವಿಶೇಷ ಗುಣಗಳು ೩) ದಿವ್ಯಾತ್ಮ ಸ್ವರೂಪ ಪ್ರಕಾಶಿತ ಗುಣಗಳು, ೪) ದಿವ್ಯಮಂಗಳ ವಿಗ್ರಹಾಶ್ರಿತ ಗುಣಗಳು, ೫) ಆಶ್ರಯಣ ಸೌಕರ್ಯಾಪಾದಕ ಗುಣಗಳು, ೬) ಆಶ್ರಿತ ಕಾರ್ಯಾಪಾದಕ ಗುಣಗಳು ಎಂದು. ಇದರಲ್ಲಿ ಕೊನೆಯದಾದ ಎರಡು ಗುಣಗಳು ಅತ್ಯಂತ ಪರಿಪೂರ್ಣ

ವಾಗಿರುತ್ತದೆ. ಭಗವಂತನು ಪರವ್ಯೂಹಾದಿಗಳು ಯಾವ ಸ್ಥಿತಿಯಲ್ಲಿಯೂ ಇಲ್ಲದಿರುವ ಎಲ್ಲಾ ಗುಣಗಳೂ ಪೂರ್ಣವಾಗಿರುವುದೇ ಅರ್ಚಾವತಾರದ ಶ್ರೇಷ್ಠತೆ; ಶ್ರೀ ಪಿಳ್ಳೈ ಲೋಕಾಚಾರ್ಯರು ತಮ್ಮ ಶ್ರೀವಚನಭೂಷಣವೆಂಬ ಗ್ರಂಥದಲ್ಲಿ "ಪ್ರಪತ್ತಿಕ್ಕು ಅಪೇಕ್ಷಿತಂಗಳಾನ ಸೌಲಭ್ಯಾದಿಗಳ್ ಇರುಟ್ಟರೈಯಿಲ್ ವಿಳಕ್ಕುಪ್ಪೋಲೇ ಪ್ರಕಾಶಿಪ್ಪುದಿಂಗೇ" ಇದಕ್ಕೆ ಮಣವಾಳ ಮಾಮುನಿಗಳ ವ್ಯಾಖ್ಯಾನ ಪರತ್ವದಲ್ಲಿಯೂ ಈ ಎಲ್ಲಾ ಗುಣಗಳಿದ್ದರೂ ಸಾಮಾನ್ಯ ಜನರಿಗೆ ದರ್ಶನವಿಲ್ಲದೆ ಕೇವಲ ನಿತ್ಯ, ಮುಕ್ತರಿಗೆ ಮಾತ್ರವಾದ್ದರಿಂದ ಹಗಲು ದೀಪದಂತೆ ಪ್ರಕಾಶವಿಲ್ಲದೆ ಇವೆ. ಅರ್ಚಾವತಾರವಾದರೋ ಸಂಸಾರಿಚೇತನರಿಗೆ ಸಂತೃಪ್ತಿಯನ್ನು ನೀಡುವುದರಿಂದ ಅಂಧಕಾರದಲ್ಲಿರುವ ದೀಪದ ಹಾಗೆ ಪ್ರಕಾಶಿಸುತ್ತದೆ. ಶ್ರೀವೈಕುಂಠದಲ್ಲಿರುವವರೂ ಶೀಲಾದಿಗುಣಗಳನ್ನನುಭವಿಸಲು ಈ ಜಗತ್ತಿಗೆ ಬರುತ್ತಾರೆ.

ದಯೆ, ವಾತ್ಸಲ್ಯ, ಕ್ಷಮೆ; ಸೌಶೀಲ್ಯ **ಮೊದಲಾದ ಗುಣಗಳಲ್ಲಿ ಯಾವ ಗುಣವಾದರೂ** ಶ್ರೀ ವೈಕುಂಠದಲ್ಲಿ ಪ್ರಕಾಶಿಸುತ್ತೋ ಎಂದರೆ, **"ಪರದುಃಖದುಃಖಿತ್ವ", ದುಃಖವುಳ್ಳವರಿಗೆ** ತಾನೇ ದಯೆಯನ್ನು ತೋರಿಸಬೇಕು. **ಆ ಪರಮಪದದಲ್ಲಿ ದುಃಖವೇ ಇಲ್ಲ, ವಾತ್ಸಲ್ಯ** ವಾವುದು ದೋಷ ಭೋಗ್ಯತ್ವವೋ **ಅಥವಾ ದೋಶಾದರ್ಶಿತ್ವವೋ** ದೋಷವುಳ್ಳವರಿಗೆ ಮಾತ್ರ ವಾತ್ಸಲ್ಯವನ್ನು **ತೋರಿಸಬಹುದು.**

ಆದರೆ ಶ್ರೀ ವೈಕುಂಠದಲ್ಲಿ ದೋಷಯುತರು ಯಾರು ಇಲ್ಲ. ದುಷ್ಟರು ಇಲ್ಲ. ಅಲ್ಲಿ ಈ ವಾತ್ಸಲ್ಯಕ್ಕೆ ಅವಕಾಶವೇ ಇಲ್ಲ. ಈ ರೀತಿ ಪ್ರತಿಯೊಂದು ಗುಣವನ್ನು ವಿಮರ್ಶಿಸಿ ನೋಡಿದ್ದೇ ಆದರೆ ಸ್ವಾಮಿತ್ವವೊಂದಲ್ಲದೆ ಮತ್ತ್ಯಾವಗುಣವೂ ಪ್ರಕಾಶಿಸಲು ಅವಕಾಶವೇ ಇಲ್ಲ. ಆ ಗುಣಗಳೆಲ್ಲಾ ಅಂಧಕಾರವಾದ ಸ್ಥಳದಲ್ಲಿಡಲ್ಪಟ್ಟ ದೀಪದ ಹಾಗೆ ಈ ಜಗತ್ತಿನಲ್ಲಿ ಪ್ರಕಾಶಿಸುತ್ತವೆ.

ಭಗವಂತನು ಅವಾಪ್ತ ಸಮಸ್ತ ಕಾಮನೆಂದು ಪ್ರಸಿದ್ಧಿ. **ಅಪೇಕ್ಷಿತಗಳನ್ನೆಲ್ಲಾ ತಾನೇ** ಪಡೆಯು ವಂತಹ ಆ ಪರಮಾತ್ಮನು **ಅರ್ಚಕಪರಾಧೀನನಾಗಿ** ತನ್ನ ಸ್ವರೂಪ, ಸ್ಥಿತಿ ಮುಂತಾದುವುಗಳನೆಲ್ಲಾ ಪರಾಧೀನವಾಗಿಟ್ಟು ಸಾಧಾರಣವಾಗಿ ಸುಲಭವಾಗಿರುವುದರಿಂದ ಈ ಸೌಲಭ್ಯದಲ್ಲಿ ಪರವಶಗೊಳ್ಳುವರೆಂದರೆ ಹಾಗಿಲ್ಲದೆ ಆ ಸೌಲಭ್ಯವೇ ಕಾರಣವಾಗಿ ಸಂಸಾರಿಗಳು ಅವನನ್ನು ಉಪೇಕ್ಷಿಸುತ್ತಾರೆ, ಹಾಗೂ ಆ ಉಪೇಕ್ಷೆಯನ್ನು ಪ್ರಕಾಶಿಸದೆ ಅವರನ್ನು ಬಿಟ್ಟಗಲದೆ ನಿಲ್ಲುವ ಸ್ಥಳ ಅರ್ಚಾವತಾರ.

ಪರತ್ವ ಮೊದಲಾದ ನಾಲ್ಕು ಸ್ಥಿತಿಯಿಂದ ನಮಗೇನೂ ಲಾಭವಿಲ್ಲ.

ಅರ್ಚಾವತಾರದಲ್ಲಿ ಮಾತ್ರ ಫಲವುಂಟೆಂಬುದನ್ನು ನಮ್ಮ ಪೂರ್ವಾಚಾರ್ಯರು ಸ್ಪಷ್ಟವಾಗಿ ನಿರೂಪಿಸಿದ್ದಾರೆ. ಬಹಳ ಬಾಯಾರಿಕೆಯಿಂದ ಬಳಲಿ ಬಂದವರಿಗೆ ತಣ್ಣೀರನ್ನು ಕೊಡದೆ ಭೂಮಿಯಲ್ಲಿ ನೀರಿದೆಯೆಂದು ತೋರಿಸಿದರೆ ಅವನ ಬಾಯಾರಿಕೆ ಹೋಗುತ್ತದೆಯೇ? ಆ ನೀರಿನಿಂದ ಏನು ಪ್ರಯೋಜನ! ಹಾಗೆಯೇ ತಕ್ಷಣ ಭಗವಂತನನ್ನು ದರ್ಶಿಸಬೇಕೆಂಬ ಮುಮುಕ್ಷುಗಳಿಗೆ ಮೇಲೆ ಹೇಳಿದ ಯಾವ ಪರವ್ಯೂಹಾದಿಗಳಿಂದಲೂ ಪ್ರಯೋಜನವಿಲ್ಲ. ಆದರೆ ದೇವಸ್ಥಾನಗಳಲ್ಲಿಯೂ, ಗೃಹಗಳಲ್ಲಿಯೂ ದರ್ಶನನೀಡುವ ಅರ್ಚಾವತಾರವಾದರೋ ವಾಪೀಕೂಪ ತಟಾಕಾದಿಗಳು ಹೇಗೆ ಬಾಯಾರಿದವರಿಗೆ ಉಪಯೋಗವಾಗಿರುತ್ತೋ ಹಾಗೆ ಮನೆಗಳಲ್ಲಿಯೂ ದೇವಸ್ಥಾನಗಳಲ್ಲಿಯೂ ಕಣ್ಣಿಗೆ ಆನಂದದಾಯಕವಾಗಿರುವ ಅರ್ಚಾವತಾರವೇ ಉಪಯೋಗಕರವಾಗಿರುತ್ತದೆ.

ಮತ್ತು ಆ ಅರ್ಚಾವತಾರದ ಮಹಿಮೆಯನ್ನು ವಿವರಿಸುವೆವು- ಹಿತಗಳನ್ನು ತಿಳಿಸುವ ಶ್ರುತಿಸ್ಮೃತಿಗಳಾದ ಶಾಸ್ತ್ರಗಳು ವಿಷಾಯಾಂತರಗಳಲ್ಲಿ ಅರುಚಿಯುಂಟಾಗುವಂತೆ ಅವುಗಳ ಕೆಡುಕನ್ನು ಭಗವದ್ ವಿಷಯದಲ್ಲಿ ಅಭಿರುಚಿ ಉಂಟಾಗುವಂತೆ ಅದರ ನಲ್ಮೆಯನ್ನು ಎಷ್ಟೋ ಉಪದೇಶ ಮಾಡಿದ್ದರೂ ಅದರಿಂದ ವಿಷಯಾಂತರಗಳಲ್ಲೇ ಅಪಾರ ಅಭಿನಿವೇಶವುಳ್ಳವರಾಗಿ, ಭಗವದ್ವಿಷಯದಿಂದ ವಿಮುಖರಾಗಿರುತ್ತಾರೆ. ಭಗವದ್ವಿಷಯವೆಂದರೆ ಕಣ್ಣೆತ್ತಿಯೂ ನೋಡದೆ ಇರುವ ಸಂಸಾರಿಗಳನ್ನು ಸರಿಪಡಿಸಲು ಈ ಅರ್ಚಾವತಾಳವೇ ಮುಖ್ಯವಾಗಿ ಉಪಯೋಗವಾಗುತ್ತದೆ. ಈ ವಿಷಯವನ್ನು ತೊಂಡರಡಿಪೊಡಿಯಾಳ್ವಾರ್ರು ತಮ್ಮ ತಿರುಮಾಲೆ ಎಂಬ ಕೃತಿಯಲ್ಲಿ ಚೆನ್ನಾಗಿ ನಿರೂಪಿಸಿದರು. ದೇವಸ್ಥಾನಕ್ಕೆ ಅನೇಕ ಕಾರಣಗಳಿಗಾಗಿ ಬರುವರಾಗಿರುತ್ತಾರೆ. ಹಾಗೆ ಲೌಕಿಕ ಭಾವನೆಯಿಂದ ಬರುವವರನ್ನೂ ಪರಮಾತ್ಮನು ತನ್ನ ಸೌಂದರ್ಯಾತಿಶಯದಿಂದ ಬೆರಗುಗೊಳಿಸಿ ವಶೀಕರಿಸಿಕೊಳ್ಳುತ್ತಾನೆ. ಶ್ರೀವಚನಭೂಷಣವೆಂಬ ಗ್ರಂಥದಲ್ಲಿ ''ಇದು ತಾನ್ ಶಾಸ್ತ್ರಂಗಳಾಲ್, ತಿರುತ್ತವೊಣ್ಣಾದೇ ವಿಷಯಾಂತರಹಗಳಿಲೇ ಮಂಡಿ ಮಿಮುಖರಾಯಿರಪ್ಪೋರುಮ್ ಚೇತನರಕ್ಕು ವೈಮುಖ್ಯತ್ತೈಮಾತ್ತಿ ರುಚಿಯ್ಯೈ ವಿಳಿಕ್ಕಕ್ಕಡವದಾಯ್, ರುಚಿ ಪರಂದಾಲ್ ಉಪಾಯಮಾಯ್, ಉಪಾಯ ಪರಿಗ್ರಹಮ್ ಪಣ್ಣಿನಾಲ್ ಭೋಗ್ಯಮಾಯಿರುಕ್ಕಮ್''.

ಈ ರೀತಿಯಾದ ಅರ್ಚಾವತಾರದ ವೈಭವವು ಅಪ್ರಮೇಯುವಾಗಿರುತ್ತದೆ. ಸರ್ವೇಶ್ವರನಾದ ಭಗವಂತನು ತನ್ನ ಸ್ವಾಮಿತ್ವವನ್ನು ಬಿಟ್ಟು ನಮ್ಮಗಳ ಸ್ವತ್ತುಗಳಲ್ಲಿ ತಾನು ಒಂದು ವಸ್ತು ಎನ್ನುವಂತೆ ಇದ್ದುಕೊಂಡು ತನ್ನ ಸರ್ವಜ್ಞತ್ವವನ್ನು ಸರ್ವವಿಧ ಶಕ್ತಿ ನಿರುಂಕುಶ ಸ್ವಾತಂತ್ರ್ಯವನ್ನೂ ಮರೆಸಿಕೊಂಡು, ತನ್ನ ಕೆಲಸವನ್ನು ಇತರರ ಕೆಲಸವನ್ನು

ತಿಳಿಯಲಾರದ ಅಜ್ಞರ ಹಾಗೆಯೂ, ತನ್ನನ್ನು ತಾನು ರಕ್ಷಿಸಿಕೊಳ್ಳಲಾಗದ ಅಶಕ್ತರಂತೆಯೂ ತನ್ನದಾದ ಒಂದು ಪ್ರಭುತ್ವವಿಲ್ಲದ ಅಸ್ವತಂತ್ರರ ಹಾಗೆ ಇದ್ದರೂ ಕೂಡ ವಿಮುಖರನ್ನು ಕೂಡ ಬಿಡಲಾಗದಂತಹ, ಎಲ್ಲೆ ಮೀರಿದಂತಹ ಕಾರುಣ್ಯದ ಕಟ್ಟುಪಾಡಿಗೊಳಗಾಗಿ ನೇತ್ರಭಾಗ್ಯವನು ನೀಡುವುದು ಸಂತಾನಾಪೇಕ್ಷಿಗಳಿಗೆ ಅವರ ಇಷ್ಟಾರ್ಥ ಸಿದ್ಧಿ ಮೊದಲುಗೊಂಡು ಮೋಕ್ಷಸಾಮ್ರಾಜ್ಯದವರಿಗೆ ಸಕಲಾಪೇಕ್ಷಿತಗಳನ್ನು ಯಥಾಧಿಕಾರ ರೂಪವಾಗಿ ಅನುಗ್ರಹಿಸುತ್ತಾನೆ.

***

# ಗೋವಿಂದ ಶಬ್ದದಲ್ಲಿ ದಶಾವತಾರ ಮಹಿಮೆ

ಇದರ ತಿರುಳೇನೆಂದರೆ: ಒಬ್ಬ ಶಿಷ್ಯನು ಹನ್ನೆರಡು ವರ್ಷ ಗುರುಕುಲವಾಸ ಮಾಡಿ, ಗುರುವಿನಿಂದ ಅನುಮತಿ ಪಡೆದು, ಗೃಹಸ್ಥಾಶ್ರಮವನ್ನು ಸ್ವೀಕರಿಸಲು ಹೊರಡುವವನಾಗಿದ್ದಾನೆ. ಆಗ ಅವನ ಮನಸ್ಸಿನಲ್ಲಿ ಇಷ್ಟೆಲ್ಲಾ ಓದಿದೆವು, ಆದರೆ ಮೋಕ್ಷದ ದಾರಿ ಗೊತ್ತಾಗಲಿಲ್ಲವಲ್ಲ! ಎಂದು ಗುರುಗಳನ್ನು ಪ್ರಶ್ನೆ ಮಾಡಿದನು. ಅದಕ್ಕೆ ಗುರುಗಳು ನೀನು ಮಾಡುವ **ಆಚಮನವೇ ಮೋಕ್ಷಕ್ಕೆ** ದಾರಿ ಎಂದರು.

*ಅಚ್ಯುತಾನಂತ ಗೋವಿಂದ ನಾಮೋಚ್ಚಾರಣ ಭೇಶಜಾತ್!*
*ನಶ್ಯಂತಿ ಸಕಲಾ ರೋಗಾಸ್ಸತ್ಯಂ ಸತ್ಯಂ ವದಾಮ್ಯಹಂ!!*

ಎಂದು ಪುಲಸ್ತ್ಯರು ಹೇಳಿದ್ದಾರೆ. ಇದರ ವಿವರವೇನೆಂದರೆ:

ನಯಚ್ಚವತಿ ಇತಿ ಅಚ್ಯುತಃ ನಛಾಯ ಯತಿ ಇತಿ ಅಚ್ಯುತಃ ಅಂದರೆ ತಾನು ತನ್ನ ಸಂಕಲ್ಪದಿಂದ ಜಾರುವವನಲ್ಲ, ಆಶ್ರಿತರನ್ನು ಕೈ ಬಿಡುವುದಿಲ್ಲ, ಎಂದು ತಿಳಿವಳಿಕೆ ನಿನಗೆ ಬರಬೇಕು. ಇವನು ನಿತ್ಯನೇ ಅನಿತ್ಯನೇ ಎಂಬ ಸಂದೇಹ ಬೇಡ, ಅವನು ಅನಂತನು. ನ ಅನ್ತಃ ಯಸ್ಯಸಃ ಕೊನೆಯಿಲ್ಲದವನು. ಅನಂತನು ಅನಂತ ಮಹಿಮೆಯುಳ್ಳವನು.

ಇಷ್ಟು ದೊಡ್ಡ ಮಹಿಮೆಯುಳ್ಳವನು ನಮಗೆ ಸಿಕ್ಕುವನೇ? ಎಂಬ ಸಂದೇಹ ಬೇಡ. ಅವನು ಗೋವಿಂದನು. ಗೋವಿಂದ ಶಬ್ದಾರ್ಥ: ದೇವಸ್ಥಾನಕ್ಕೆ ಹೋಗುವ ಎಲ್ಲಾ ಜಾತಿಯ ಜನರೂ ಗೋವಿಂದಾ, ಗೋವಿಂದಾ! ಎಂದು ಹೇಳಿಕೊಂಡು ಹೋಗುತ್ತಾರೆ. ಪ್ರಾಚೀನರು ಏತಕ್ಕೆ ಈ ರೀತಿ ಏರ್ಪಡಿಸಿದರು ಎಂದರೆ ಗೋವಿಂದ ಶಬ್ದದಲ್ಲಿ ದಶಾವತಾರಗಳಿವೆ. **ಮೋಕ್ಷಪ್ರದತ್ವವೂ ಇದೆ. ವೇದ ವೇದತ್ವವೂ ಇದೆ ಇಂದ್ರನಿಗೆ ವಜ್ರಾಯುಧವನ್ನು ಕೊಡಿಸಿದ್ದೂ ಇದೆ, ಸೂರ್ಯನಾರಾಯಣ ರೂಪನೂ ಇವನೇ** ಎನ್ನುವುದು ಇದೆ. 'ಗೋ' ಎಂಬ ಶಬ್ದವೂ 'ಇದ್' ಎಂಬ ಧಾತು ಸೇರಿ ಗೋವಿಂದ ಎಂದು ಆಗಿದೆ. ಗೋಶಬ್ದಕ್ಕೆ ಹತ್ತು ಅರ್ಥ: - ಸ್ವರ್ಗ, ಇಶು, ಪಶು, ವಾಕ್, ವಜ್ರ, ದೃಕ್, ನೇತ್ರ ಘೃಣಿ, ಭೂ. ಜಲೆ, 'ವಿದ' ಧಾತುವಿಗೆ ವಿದಜ್ಞಾನೇ, ವಿದಸತ್ತಾಯಾಂ, ವಿದ್‌ಲಾಭೇ, ವಿದ ವಿತಾರೇ, ಎಂಬ ನಾಲ್ಕು ವಿಧ ಅರ್ಥವುಳ್ಳ ವಿಧಧಾತುವಿದೆ. ಇದನ್ನು ಒಂದೊಂದಾಗಿ ವಿವರಿಸೋಣ.

ಸ್ವರ್ಗ:- ಗಾಂವಿಂದಯತೀತಿ ಗೋವಿಂದಃ

1) ಸ್ವರ್ಗ ಎಂದರೆ ಮೋಕ್ಷ ಎಂದರ್ಥ ವೇದಾಂತದಲ್ಲಿ ಆದ್ದರಿಂದ ಮೋಕ್ಷವನ್ನು ಕೊಡತಕ್ಕವನು. ಇದರಿಂದ ಮೋಕ್ಷಪ್ರದನು ಗೋವಿಂದ.

2) ಇಶು-ಬಾಣಗಳು ಣಾಃ ಏಂದತೀತಿ ಗೋವಿಂದಃ ಬಾಣಗಳನ್ನು ಹೊಂದಿದವನು.

ಷೋಡಶಾಯುಧ ಪರಿಪೂರ್ಣನಾದ ದೇವನಿಗೆ ಹೊಸದಾಗಿ ಬಾಣಗಳನ್ನು ಹೊಂದ ಬೇಕಾದ್ದು ಏನಿದೆ? ಅಂದರೆ ರಾಮಾವತಾರದಲ್ಲಿ ಆಲಿಂಗನವನ್ನು ಅಪೇಕ್ಷಿಸಿದ ದಂಡಕಾರಣ್ಯವಾಸಿಗಳಾದ ಋಷಿಗಳಿಗೆ ಕೃಷ್ಣಾವತಾರದಲ್ಲಿ ವಿಶ್ವಾಮಿತ್ರನಿಂದ ಜೃಂಬಕ ಮೊದಲಾದ ಐನೂರು ಅಸ್ತ್ರಗಳನ್ನೂ ಐನೂರು ಉಪಸಂಹಾರಾಸ್ತ್ರಗಳನ್ನೂ ಪಡೆದಿದ್ದರಿಂದ ರಾಮಾವತಾರವು ಈ ಗೋವಿಂದ ಶಬ್ದದಲ್ಲಿ ಅಡಕವಾಗಿದೆ.

3) ಪಶು 'ಗಾ' ವಿಂದತೇತಿ ಗೋವಿಂದ ಪಶುಗಳಿಗೆ ಸತ್ತೆಯನ್ನು ಉಂಟು ಮಾಡಿದವನು. ಅಂದರೆ ರಾಮಾವತಾರದಲ್ಲಿ ನಿಮಗೆ ನನ್ನ ಆಲಿಂಗನವು ದೊರೆಯುವುದೆಂದು ಶ್ರೀರಾಮನು ಹೇಳಿದನು. ಇದರಿಂದ ಋಷಿಗಳೇ ಗೋ ರೂಪವನ್ನು ಧರಿಸಿದರು, ಕೃಷ್ಣನು ಇವುಗಳ ಮೇಲೆ ಕೈ ಹಾಕಿಕೊಂಡು ಮೇಯಿಸುವನು. ಆದ್ದರಿಂದ ಗೋಪಾಲಕನು ಋಷಿಪಾಲಕನು ಆದನು, ಇದು ಬಲರಾಮನೊಡನೆ ಸೇರಿ ನಡೆದ ಕೆಲಸವಾದ್ದರಿಂದ ಕೃಷ್ಣ-ಬಲ ರಾಮಾವ ತಾರಗಳು ಇದರಲ್ಲಿ ಅಡಕವಾಗಿವೆ.

4) ವಾಕ್-ವೇದಗಳು ಗೋಭಿಃ ವೇದ್ಯತೇ ಇತಿ ಗೋವಿಂದಃ ವೇದಗಳಿಂದ ರಿಯಲ್ಪಡತಕ್ಕ 'ವೇದೈಶ್ಚ ಸರ್ವೈಃ ಅಹಮೇವವೇದ್ಯಃ' ಎಂದು ಕೃಷ್ಣನು ತಾನು ಹೇಳಿದ್ದಾನೆ ಆದ್ದರಿಂದ 'ವೇದವೇದ್ಯನು' ಎಂಬ ಅರ್ಥ ಗೋವಿಂದ ಶಬ್ದದಲ್ಲಿದೆ.

5) ವಜ್ರ-ವಜ್ರಾಯುಧ ಗಾಂ ವಿಂದತೀತಿ ಗೋವಿಂದಃ ಇಂದ್ರನಿಗೆ ವಜ್ರಾಯುಧವನ್ನು ದೊರಕಿಸಿಕೊಟ್ಟವನು. ಈ ಕತೆಯು ಪುರಾಣದಲ್ಲಿದೆ. ಒಮ್ಮೆ ಇಂದ್ರನು ಬ್ರಹ್ಮದೇವನನ್ನು ನೋಡಿ ಅಸುರಸಂಹಾರಕ್ಕೆ ನಮಗೆ ಉಪಾಯವನ್ನು ಹೇಳಬೇಕೆಂದು ಕೇಳಿದನು. ಆಗ ಬ್ರಹ್ಮದೇವನು ಕ್ಷೀರಸಮುದ್ರಶಾಯಿಯಾದ ದೇವರನ್ನು ಕೇಳು, ಎಂದು ಕಳುಹಿಸಿಬಿಟ್ಟನು. ಈ ಸಮಯಕ್ಕೆ ಸರಿಯಾಗಿ ತ್ರಿಲೋಕ ಸಂಚಾರಿ ನಾರದರು ಕ್ಷೀರ ಸಮುದ್ರಕ್ಕೆ ಹೋದರು. ಅಲ್ಲಿ ದೇವರನ್ನು ನಮಸ್ಕರಿಸಿ ನಿಂತಾಗ ದೇವರು ನಾರದರನ್ನು ಕುರಿತು ಈ ರೀತಿ ಹೇಳಿದರು: ನಾರದಾ; ನೀನು ಸ್ವರ್ಗಕ್ಕೆ ಹೋಗು. ನಾನು ಹೇಳಿದನೆಂದು ಹೇಳಿ ಇಂದ್ರನನ್ನು ದಧೀಚಿ ಮಹರ್ಷಿಗಳಿಂದ ಅವರ ಶರೀರದ ಮೂಳೆಗಳನ್ನು ಯಾಚಿಸುವಂತೆ ಹೇಳು. ಆ ತ್ರಿಕಾಲ ಜ್ಞಾನಿಗಳಾದ ಋಷಿಗಳು ಇಂದ್ರನು ಬಂದಿದ್ದನ್ನು ಅರಿತು,ತನ್ನ ಯೋಗ ಶಕ್ತಿಯಿಂದಲೂ ಪ್ರಾಣಾಯಾಮದಿಂದಲೂ ಪ್ರಾಣವನ್ನು ತೊರೆದು ಇಂದ್ರನ ಇಷ್ಟಾರ್ಥವನ್ನು ನೆರವೇರಿಸುವರು. ಇಂದ್ರನು ಅವರ ಮೂಳೆಗಳನ್ನು ಕಡೆದು ವಿಶ್ವಕರ್ಮನ ಮೂಲಕ ವಜ್ರಾಯುಧವನ್ನು ಮಾಡಿಸಿದನು. ದಧೀಚಿಯ ಮೂಳೆಗಳು ವಜ್ರಗಳಾದ್ದರಿಂದ ಇದರ ಮೂಲಕ ಇಂದ್ರನಿಗೆ ವಜ್ರಾಯುಧ ಪ್ರಾಪ್ತಿಯಾಯಿತು. ಈ ಕಥೆಯು ಗೋವಿಂದ ಶಬ್ದದಲ್ಲಿ ಅಡಗಿದೆ.

6) ದೃಕ್-ದೃಷ್ಟಿ ಗಾವೌ ವಿಂದತೀತಿ ಇತಿ ಗೋವಿಂದಃ

ಎರಡು ವಿಧವಾದ ದೃಷ್ಟಿಗಳನ್ನು ಉಳ್ಳವನು. ಒಂದು ಶೀತಲ ದೃಷ್ಟಿ, ಮತ್ತೊಂದು ಕ್ರೂರದೃಷ್ಟಿ ಆಶ್ರಿತರು-ಭಕ್ತರುಗಳ ಮೇಲೆ ಶೀತಲ ದೃಷ್ಟಿಯನ್ನೂ ವಿರೋಧಿಗಳ ಮತ್ತು ಭಕ್ತ ವಿರೋಧಿಗಳ ಮೇಲೆ ಕ್ರೂರ ದೃಷ್ಟಿಯನ್ನೂ ಬೀರುವನು. ಇದರಿಂದ ದುಷ್ಟ ಶಿಕ್ಷಣ ಶಿಷ್ಟ ಪರಿಪಾಲನ, ಎಂಬ ಅವನ ಕೆಲಸ ಎಂಬುದು ಗೋವಿಂದ ಶಬ್ದದಲ್ಲಿದೆ.

7) **ನೇತ್ರ-ಕಣ್ಣುಗಳು** ''ಸಹಾಸ್ರಾಕ್ಷಃ ಸಹಸ್ರಪಾತ್'' ಎಂಬ ಉಪನಿಷತ್ ವಾಕ್ಯಗಳಂತೆ **ಸಾವಿರಾರು** ಕಣ್ಣುಗಳುಳ್ಳವನು. ಇದನ್ನು ಕೃಷ್ಣಾವತಾರದಲ್ಲಿ ಮೂರು ನಾಲ್ಕು ಸಲ **ವಿಶ್ವರೂಪವನ್ನು ಯಶೋದೆಗೂ, ಉದ್ಧವನಿಗೂ, ಧೃತರಾಷ್ಟ್ರನಿಗೂ, ಅರ್ಜುನನಿಗೂ ಮತ್ತು ಉದಂಕ ಋಷಿಗೂ ತೋರಿಸಿರುವ ಉದಾಹರಣೆಗಳಿಂದ ಭಾರತ, ಭಾಗವತಗಳಲ್ಲಿ ಕಾಣುತ್ತೇವೆ.** ಇದರಿಂದ ವಿಶ್ವರೂಪ ಮಹಿಮೆ ಗೋವಿಂದ ಶಬ್ದದಲ್ಲಿದೆ.

8) ಘೃಣಿ-ಕಿರಣ ಮತ್ತು ಜ್ವಾಲೆ, ಸೂರ್ಯನಾರಾಯಣ ''ಗಾಃ ವಿಂದತೀತಿ ಗೋವಿಂದಃ'' ಕಿರಣಗಳನ್ನು ಹೊಂದಿದವನು ಗೋವಿಂದ, ಸೃಷ್ಟಿಯನ್ನು ಬ್ರಹ್ಮನಿಗೆ ಕೊಟ್ಟು, ಸಂಹಾರವನ್ನು ಶಿವನಿಗೆ ಕೊಟ್ಟು ರಕ್ಷಕತ್ವವನ್ನು ತಾನು ಕೈಗೊಂಡಿದ್ದಾನೆ. ಇದಕ್ಕಾಗಿ ತಾನು ಸೂರ್ಯನಾರಾಯಣ ರೂಪವನ್ನು ತಾಳಿ ಕಿರಣಗಳಿಂದ ಸಮುದ್ರದ ನೀರನ್ನು ಆಕರ್ಷಿಸಿ, ಮೇಘಗಳನ್ನು ಕಲ್ಪಿಸಿ, ಮಳೆಯನ್ನು ಸುರಿಸಿ, ಸಸ್ಯವೇ ಮೊದಲಾದ ಎಲ್ಲಾ ಪ್ರಾಣಿಗಳನ್ನೂ ಕಾಪಾಡುತ್ತಿದ್ದಾನೆ, ಮತ್ತು ಎಲ್ಲ ಪುಣ್ಯನದಿಗಳನ್ನೂ ಸಾರ್ಥಕಗೊಳಿಸಿರುತ್ತಾನೆ. ಈ ಅರ್ಥವು ಗೋವಿಂದ ಶಬ್ದದಲ್ಲಿದೆ.

**ಜ್ವಾಲೆ-ಗಾಃವಿಂದತೀತಿ ಗೋವಿಂದಃ!** ಜ್ವಾಲೆಗಳನ್ನು ತಾಳಿದವನು, ಯಜಮಾನನಾದ **ಹಿರಣ್ಯಕಶಿಪುವನ್ನು** ಸಂಹಾರ ಮಾಡಿದ ಮೇಲೆ ಅವನ ಅನುಯಾಯಿಗಳಾದ ನೂರು **ಕೋಟಿ ಸೈನ್ಯಗಳನ್ನು** ತನ್ನ ಜ್ವಾಲೆಯಿಂದ ಭಸ್ಮ ಮಾಡಿದನು. ಇದರಿಂದ ನರಸಿಂಹಾವತಾರವು ಗೋವಿಂದ ಶಬ್ದದಲ್ಲಿದೆ.

9) ಭೂ-ಗಾಂವಿಂದತೀತಿ ಗೋವಿಂದಃ! ಭೂಮಿಯನ್ನು ಪುನಃ ಪಡೆದವನು. ಹಿರಣ್ಯಾಕ್ಷನನ್ನು ಸಂಹಾರ ಮಾಡಿ, ಅವನಿಂದ ಪಾತಾಳಕ್ಕೆ ಒಯ್ಯಲ್ಪಟ್ಟ ಭೂಮಿಯನ್ನು ಮತ್ತೆ ತಂದು ಯಥಾ ಪೂರ್ವಮಕಲ್ಪಯತ್ ಎಂಬ ಮಾತಿನಂತೆ, ಭೂಮಿಯನ್ನು ಸ್ಥಿರಗೊಳಿಸಿದನು. ಇದರಿಂದ ಭೂಮಿಗೆ 'ಸ್ಥಿರಾ' ಎಂಬ ಹೆಸರು ಬಂದಿದೆ. ಇದರಿಂದ ವರಾಹತಾರವು ಈ ಗೋವಿಂದ ಶಬ್ದದಲ್ಲಿ ಅಡಕವಾಗಿದೆ. 'ಗವಿ ವಿಂದಂತೇ ಇತಿ ಗೋವಿಂದಃ' ಭೂಮಿಯಲ್ಲಿ ಮೂರು ಹೆಜ್ಜೆಗಳನ್ನು ಬಲಿಯಿಂದ ತೆಗೆಯಬೇಕೆಂದು ವಿಚಾರ ಮಾಡಿದನು. ಇದರಿಂದ ವಾಮನಾವತಾರವು ಗೋವಿಂದ ಶಬ್ದದಲ್ಲಿದೆ.

10) ಜಲ-''ಗವಿ ವಿದಂತೇ ಇತಿ ಗೋವಿಂದಃ'' ನೀರಿನಲ್ಲಿ ಪ್ರವೇಶ ಮಾಡಬೇಕೆಂದು

ವಿಚಾರ ಮಾಡಿದನು. ವೇದಗಳನ್ನು ಅಪಹರಿಸಿದ ಸೋಮಕಾಸುರನನ್ನು ಕೊಂದು ಪುನಃ ವೇದಗಳನ್ನು ಬ್ರಹ್ಮನಿಗೆ ಒಪ್ಪಿಸಿದನು. ಇದರಿಂದ ಮತ್ಸ್ಯಾವತಾರವು ಗೋವಿಂದ ಶಬ್ದದಲ್ಲಿದೆ.

ಗವಿ ವಿಂದತೇ ಇತಿ ಗೋವಿಂದಃ ಪುನಃ ನೀರಿನಲ್ಲಿ ಪ್ರವೇಶಿಸಬೇಕೆಂದು ವಿಚಾರ ಮಾಡಿದನು. ಸಮುದ್ರ ಮಥನ ಕಾಲದಲ್ಲಿ ಮಂದರ ಪರ್ವತವನ್ನು ತನ್ನ ಪೃಷ್ಠ ಭಾಗದಲ್ಲಿ ಹೊತ್ತು ದೇವತೆಗಳ ಕೆಲಸವನ್ನು ನೆರವೇರಿಸಿದನು. ಇದರಿಂದ ಕೂರ್ಮಾವತಾರವು ಗೋವಿಂದ ಶಬ್ದದಲ್ಲಿದೆ.

ಈ ರೀತಿ ಗೋವಿಂದ ಶಬ್ದದಲ್ಲಿ ಭಗವನಂತನ ದಶಾವತಾರದ ಮಹಿಮೆ ಸ್ಪಷ್ಟವಾಗಿರುವುದರಿಂದಲೇ ಆಳ್ವಾರ್ರುಗಳು ತಮ್ಮ ದಿವ್ಯ ಪ್ರಬೇಧ ಪಾಶುರಗಳಲ್ಲಿ ದಶಾವತಾರ ಗಳನ್ನು ವರ್ಣಿಸಿ ಆನಂದಿಸುತ್ತಾರೆ.

✡ ✡ ✡

# ಶ್ರೀ ಕೃಷ್ಣನು ಗೀತೆಯನ್ನು ಹೇಳುವ ಮೊದಲು ಏನೇನು ಮಾಡಿದನು ?

ಶ್ರೀ ಕೃಷ್ಣನು ಮಧುರೆಯಲ್ಲಿ ಜನಿಸಿದನು. ಹುಟ್ಟಿದ ತಕ್ಷಣ ಶಂಖ-ಚಕ್ರಧಾರಿಯಾಗಿ ದೇವಕೀ ವಸುದೇವರೆಗೆ ದರ್ಶನವನ್ನು ನೀಡಿದನು.

ಅನಂತರ ಅದೇ ದಿನ ನವಜಾತ ಶಿಶುವನ್ನು ವಸುದೇವನು ವೃಂದಾವನಕ್ಕೆ ಎತ್ತಿಕೊಂಡು ಹೋಗಿ ನಂದಗೋಪ-ಯಶೋದೆಯರ ಹತ್ತಿರ ಬಿಟ್ಟನು. ಅಲ್ಲಿ ಹುಟ್ಟಿದ ಹೆಣ್ಣು ಮಗುವನ್ನು ದೇವಕಿಯ ಹತ್ತಿರ ತಂದು ಬಿಟ್ಟನು.

ಕಂಸನು ಈ ಸಮಾಚಾರದಿಂದ ಭಯಭೀತನಾಗಿ ಅನೇಕ ರಾಕ್ಷಸರನ್ನು ವಿವಿದೆಡೆಗಳಿಗೆ ಕಳುಹಿಸಿ ಈ ವರ್ಷ ಹುಟ್ಟಿದ ಮಕ್ಕಳನ್ನೆಲ್ಲಾ ಕೊಲ್ಲಿಸಿದನು.

ಇವರಲ್ಲಿ ಪ್ರಮುಖಳಾದವಳು, ಪೂತನಿ. ಅವಳು ಸುಂದರ ರೂಪವನ್ನು ಧರಿಸಿ ಮಗುವಿಗೆ ಸ್ತನ್ಯಪಾನವನ್ನು ಮಾಡಿಸಿದಳು. ಆದರೆ ಶ್ರೀಕೃಷ್ಣ ಶಿಶುವು ಹಾಲುಣ್ಣುವುದಕ್ಕೆ ಬದಲಾಗಿ ಅವಳ ಪ್ರಾಣವನ್ನೇ ಹೀರಿಬಿಟ್ಟನು. ಈ ಸಂಗತಿಯಿಂದ ನಂಗಗೋಪ ಯಶೋಧೆ ಮತ್ತು ಗೋಪ-ಗೋಪಿಯರು ಗಾಬರಿಗೊಂಡರು.

ಒಂದು ದಿನ ಯಶೋಧೆ ಮಗುವನ್ನು ಗಾಡಿಯ ಕೆಳಗೆ ಮಲಗಿಸಿ ಸ್ನಾನ ಮಾಡಲು ಯಮುನಾ ನದಿಗೆ ಹೋದಳು. ಕಂಸ ಪ್ರೇರಿತನಾದ 'ಶಕಟಾಸುರ'ನು ಮಗುವನ್ನು ಕೊಲ್ಲಲು ಪ್ರಯತ್ನಿಸಿದನು. ಶ್ರೀಕೃಷ್ಣ ಶಿಶುವು ರೋಧಿಸುವ ನೆಪದಲ್ಲಿ ಕೈಕಾಲು ಬಡಿದು ಬಂಡಿಯನ್ನೇ ಪುಡಿ ಪುಡಿಯಾಗಿ ಮಾಡಿ ರಾಕ್ಷಸನ ವಧೆ ಮಾಡಿಬಿಟ್ಟನು.

ಶ್ರೀ ಕೃಷ್ಣನು ಸ್ವಲ್ಪ ದೊಡ್ಡವನಾದ ನಂತರ ಅಕ್ಕ-ಪಕ್ಕದ ಮನೆಗಳಿಗೆ ಹೋಗಿ ಹಾಲು-ಮೊಸರು ಮತ್ತು ಬೆಣ್ಣೆಯನ್ನು ತಿನ್ನುತ್ತಿದ್ದನು. ಇವನ ತುಂಟತನವನ್ನು ಸಹಿಸಲಾರದೆ ಗೋಪಿಯರೆಲ್ಲರೂ ಸೇರಿ, ಯಶೋಧೆಯ ಬಳಿ ದೂರು ಸಲ್ಲಿಸಲು ಬಂದರು. ಆದರೆ ಈ ಮಾಯಾ ಮೋಹನನು ತನ್ನ ತಾಯಿಯ ಮಡಲಿನಲ್ಲಿ ಏನೂ ಅರಿಯದವನಂತೆ ವಿರಾಜಿಸುತ್ತಿದ್ದನು. ಇದನ್ನು ಕಂಡ ಗೋಪಿಯರು ಹಿಂದಕ್ಕೆ ಹೋದರು.

ಇನ್ನು ಸ್ವಲ್ಪ ದೊಡ್ಡವನಾದ ನಂತರ ಯೊಶೋದೆಯು ಕಂಬಳಿ ಮತ್ತು ಕೋಲನ್ನು ನೀಡಿ ಕರುಗಳನ್ನು ಮೇಯಿಸಲು ಕಾಡಿಗೆ ಕಳುಹಿಸಿದಳು. ತನ್ನ ಸಂಗಡಿಗರೊಡನೆ ಕೊಳಲನ್ನೂದುತ್ತಾ ಸಂತೋಷದಿಂದ ಇವನು ಕಾಡಿನಲ್ಲಿ ಓಡಾಡುತ್ತಿದ್ದನು. ಹೀಗಿರುವಾಗ ಕಂಸನಿಂದ ಪ್ರೇರಿತನಾದ ತೃಣಾಸುರ ವೃಕಾಸುರ ಬಕಾಸುರ ಮತ್ತು ಕೇಶಿ ಎಂಬ ರಾಕ್ಷಸರು ಕೃಷ್ಣವಧಕ್ಕಾಗಿ ಬಂದವರು ಹೇಳ ಹೆಸರಿಲ್ಲದೆ ಸತ್ತರು. ಕೃಷ್ಣನಾದರೋ ಬಲರಾಮನೊಂದಿಗೆ ದನಕರುಗಳನ್ನು ಮೇಯಿಸುತ್ತಾ ಕಾಲ ಕಳೆಯುತ್ತಿದ್ದನು.



ಕಾಳಿಂಗ ಮರ್ದನ

ಸುಂಟರಗಾಳಿ ಬಂದು ಗೋಪ ಬಾಲಕರೆಲ್ಲಾ ಗಾಬರಿಗೊಂಡರು ಮತ್ತೊಂದು ದಿನ ಕಾಳ್ಗಿಚ್ಚು ಹಬ್ಬಿತು. ಹೀಗೆ ಏನಾದರೂ ಒಂದು ಕಷ್ಟ ಎದುರಾಗುತ್ತಿತ್ತು. ಹಿರಿಯ ಗೋಪಕುಲವೆಲ್ಲಾ ಗಾಬರಿಗೊಳ್ಳುತ್ತಿದ್ದರು. ಹೀಗಿರುವಾಗ ಒಂದು ದಿನ ಯಮುನಾ ನದಿಯಲ್ಲಿ ಕಾಳಿಂಗನೆಂಬ ವಿಷ ಸರ್ಪ ನೀರನ್ನೆಲ್ಲಾ ಕಲುಷಿತ ಮಾಡಿತು. ಕುಪಿತನಾದ ಶ್ರೀ ಕೃಷ್ಣನು ಆ ಸರ್ಪದ ಮೇಲೆ ನೃತ್ಯ ಮಾಡಿ ಅದನ್ನು ಬೇರೆಡೆಗೆ ಕಳುಹಿಸಿದನು.

ಕಂಸನ ಉಪಟಳವನ್ನು ಸಹಿಸಲಾರದೆ ಗೋಪವೃದ್ಧರು ವೃಂದಾವನವನ್ನು ಬಿಟ್ಟು ಗೋಕುಲದಲ್ಲಿ ವಾಸಮಾಡಲು ನಿರ್ಧರಿಸಿದರು.

ಶ್ರೀ ಕೃಷ್ಣನು ಬಹಳ ತುಂಟನಾಗಿ ಅಕ್ಕಪಕ್ಕದ ಮನೆಗಳಲ್ಲಿ ಹಾಲು ಮೊಸರು ಬೆಣ್ಣೆಯನ್ನು ಸಂಗಡಿಗರೊಂದಿಗೆ ಸೇರಿ ಕದ್ದು ತಿನ್ನುತ್ತಿದ್ದನು. ಹೀಗಿರುವಾಗ ಯಶೋದೆಯು ಒಂದು ದಿನ ಅವನನ್ನು ಒರಳಿನಲ್ಲಿ ಕಟ್ಟಿ ಹಾಕಿದಳು. ಅಲ್ಲಿ ಎರಡು ಮರಗಳು ಇದ್ದವು. ಶ್ರೀಕೃಷ್ಣನು ಆ ಒರಳನ್ನು ಎಳೆದುಕೊಂಡು ಆ ಮರದ ಮಧ್ಯೆ ಬಂದನು. ಮರುವು ಉರುಳಿ ಬಿಟ್ಟಿತು. ಆ ಶಬ್ದವನ್ನು ಕೇಳಿ ಭಯಪಟ್ಟ ನಂದಗೋಪ-ಯಶೋದೆಯು ಓಡೋಡಿ ಬಂದರು. ಆದರೆ ಶಾಪಗ್ರಸ್ಥರಾಗಿದ್ದ ನಳ-ಕೂಬರರು ಕೃಷ್ಣನಿಗೆ ನಮಸ್ಕರಿಸಿ ಹೊರಟು ಹೋದರು. ಇನ್ನೊಂದು ದಿನ ಯಶೋದೆಗೆ ಸಿಟ್ಟು ತಡೆಯಲಾಗದೆ ಕುಡಗೋಲನ್ನು ಕೈಲಿ ಹಿಡಿದು ಕೃಷ್ಣನ ಹಿಂದೆ ಹಿಡಿಯಲು ಹೋದಳು. ಆ ತುಂಟ ಓಡೋಡುತ್ತಾ ಇದ್ದಾಗ. ಮಕರಂದ ಮೊಸರು ಮಾರಿ ಖಾಲಿ ಮಡಕೆ ಇಟ್ಟುಕೊಂಡು ಹಣವನ್ನು ಎಣಿಸುತ್ತಿದ್ದನು. ಆಗ ಇವನು ಕಾಡಿಬೇಡಿ ಆ ಮಡಕೆಯಲ್ಲಿ ಬಚ್ಚಿಟ್ಟುಕೊಂಡನು. ಯಶೋದೆಯು ಅಲ್ಲಿ ಇಲ್ಲಿ ಹುಡುಕಿ ಮಗನನ್ನು ಕಾಣದೆ ಮಕರಂದನನ್ನು ಕೇಳಿದಳು. ಅವನೋ ನಾ ಕಾಣೆನೆಂದು ಬಿಟ್ಟನು. ಅಷ್ಟರಲ್ಲಿ ಗಾಳಿ ಇಲ್ಲದೆ ಕೃಷ್ಣನಿಗೆ ಉಸಿರುಕಟ್ಟತೊಡಗಿತು. ಕೃಷ್ಣನು-ಅಪ್ಪಾ! ಮಡಕೆಯನ್ನು ತೆಗೆಯಪ್ಪಾ ಎಂದನು. ಮಕರಂದನು ಹೇಳಿದನು-ನನಗೆ ಮೋಕ್ಷಕೊಡುವುದಾದರೆ ತೆಗೆಯುತ್ತೇನೆ. ಅಯ್ಯೋ ಗಾಳಿ ಇಲ್ಲವಲ್ಲ ಎಂದು ಕೃಷ್ಣ ಕಿರುಚಾಡ ತೊಡಗಿದನು. ಇದ್ಯಾವುದಕ್ಕೂ ಹೆದರದ ಮಕರಂದನು ಮೋಕ್ಷವನ್ನು ಪಡೆದೇ ಮಡಕೆಯನ್ನು ತೆಗೆದನು, ಜೊತೆಯಲ್ಲಿ ತನ್ನ ಮೊಸರು ಮಡಕೆಗಳಿಗೂ ಮೋಕ್ಷವನ್ನು ಗಿಟ್ಟಿಸಿದನು.

ವಸುದೇವನು ಗರ್ಗ್ಯಾಚಾರ್ಯರನ್ನು ಕಳುಹಿಸಿ ''ಬಲರಾಮ'' ''ಶ್ರೀಕೃಷ್ಣರಿಗೆ'' ಉಪನಯನ ಸಂಸ್ಕಾರ ಮಾಡಿಸಿದನು. ನಂದಗೋಪರು ಅವರಿಬ್ಬರಿಗೂ ವಿದ್ಯಾಭ್ಯಾಸಕ್ಕೆ ಏರ್ಪಾಡು ಮಾಡಿದರು. ಶ್ರೀಕೃಷ್ಣನು ನಗರದಲ್ಲಿ ಜನಿಸಿದರೂ ಗ್ರಾಮ ಜೀವನಕ್ಕೆ ಹೊಂದಿ


ಕೊಂಡು, ಬಡವರು ಬಲ್ಲಿದರು ಎಂಬ ಭೇದ ಭಾವವಿಲ್ಲದೆ ಗೊಲ್ಲ ಬಾಲಕರೊಂದಿಗೆ ಸರಿ ಸಮನಾಗಿ ಆಡುತ್ತಿದ್ದನು.

## ಮಣ್ಣು ತಿಂದ ಮಾಧವ

ಯಶೋಧೆಗೆ ಅವಳ ಸಖಿಯರು ಬಂದು ನಿನ್ನ ಮಗ ಮಣ್ಣು ತಿನ್ನುತ್ತಿದ್ದಾನೆ, ನೋಡು ಎಂದು ತಿಳಿಸಿದರು. ಯಶೋಧೆ ಮುದ್ದು ಕಂದ ಕೃಷ್ಣನನ್ನು ಹತ್ತಿರ ಕರೆದು ಮಣ್ಣು ತಿಂದೆಯಾ ಬಾಯಿ ತೆಗೆ ಎಂದು ಕೇಳಿದಳು. ಅದಕ್ಕೆ ಕೃಷ್ಣನು ಇಲ್ಲ ಎಂದು ಹೇಳಿ ಬಾಯನ್ನು ದೊಡ್ಡದಾಗಿ ತೆರೆದನು. ಅವನ ಬಾಯಲ್ಲಿ ಯಶೋಧೆ ಬ್ರಹ್ಮಾಂಡವನ್ನೇ ನೋಡಿದಳು. ಮತ್ತು ಆಶ್ಚರ್ಯದಿಂದ ನೋಡುತ್ತಿರಲು ಅವನ ಬಾಯಲ್ಲಿ ಸೂರ್ಯ, ಚಂದ್ರ, ಅಗ್ನಿ ಶಿವ ಮತ್ತು ಕೋಟ್ಯಾಂತರ ದೇವತೆಗಳು ಮತ್ತು ತನ್ನನ್ನು ಸಹ ಕಂಡು ಪರಮಾಶ್ಚರ್ಯದಿಂದ ತನ್ನನ್ನೇ ತಾನು ಮರೆತಳು ಮತ್ತು ಪುಟ್ಟ ಕೃಷ್ಣನ ಬಗ್ಗೆ ಬಹಳಷ್ಟು ಆಶ್ಚರ್ಯ ಭಕ್ತಿ ಅವಳಲ್ಲಿ ಹೆಚ್ಚಿದವು. ಈತನೇ ನನ್ನ ಗೋವಿಂದ ಎಂದು ಅಪ್ಪಿ ಮುದ್ದಾಡಿದಳು.

ಹೀಗಿರುವಲ್ಲಿ ಶ್ರೀಕೃಷ್ಣ ಮತ್ತು ಗೋಪಕನ್ನಿಕೆಯರು ಬೆಳೆದು ದೊಡ್ಡವರಾದರು. ಗೋಪಬಾಲೆಯರಿಗೆ ಕೃಷ್ಣನೆಂದರೆ ಪಂಚಪ್ರಾಣ. ಇವರಲ್ಲಿ ರಾಧಾ ಎಲ್ಲರಿಗೂ ಮುಖಂಡಳಾಗಿ ಕೃಷ್ಣನನ್ನು ಬಹಳವಾಗಿ ಪ್ರೀತಿಸುತ್ತಿದ್ದಳು. ಇವರುಗಳು ನಾನಾವಿಧ ಆಟ-ಪಾಟಗಳಲ್ಲಿ ಮಗ್ನರಾಗಿ-ರಾಸಕ್ರೀಡೆ, ಜಲಕ್ರೀಡೆ, ಕುಂಭನರ್ತನದಲ್ಲಿ ಸ್ವೇಚ್ಛೆಯಾಗಿ ವಿಹರಿಸುತ್ತಿದ್ದರು. ಹಿರಿಯರಿಗೆ ಇದು ಸರಿಬರಲಿಲ್ಲ. ಅವರು ಗೋಪಬಾಲೆಯರನ್ನು ನೆಲಮಾಳಿಗೆಯಲ್ಲಿ ಕೂಡಿ ಹಾಕಿದರು. ಆದರೆ ಧನುರ್ಮಾಸ ಬಂದಿತು. ಕಾತ್ಯಾಯಿನೀ ವ್ರತ ಮಾಡಲು ಹೆಣ್ಣುಮಕ್ಕಳನ್ನು ಹೊರಗೆ ಬಿಟ್ಟರು.

ಆಗ ಇವರುಗಳು ಬೆಳಗಿನ ಜಾವ ಬೇಗ ಎದ್ದು ಸರೋವರದಲ್ಲಿ ಜಲಕ್ರೀಡೆ ಆಡತೊಡಗಿದರು. ಮಾಯಾಮೋಹನನಿಗೆ ಈ ವಿಷಯ ತಿಳಿಯಿತು. ಸರಿ ನಡೆದನು.ವಸ್ತ್ರಗಳನ್ನೆಲ್ಲಾ ಕಳಚಿ ದಡದಲ್ಲಿ ಇಟ್ಟು ಸ್ನಾನ ಮಾಡತೊಡಗಿದರು. ಆಗ ಕೃಷ್ಣನು ಗೋಪಿಯರ ವಸ್ತ್ರಾಪಹಾರ ಮಾಡಿ ಮರದ ಮೇಲೆ ಅಡಗಿ ಕುಳಿತನು. ಸ್ನಾನದ ನಂತರ ವಸ್ತ್ರವನ್ನು ಕಾಣದೆ ಗೋಪಿಯರು ಗಾಬರಿಯಾದರು. ಆಗ ಕೃಷ್ಣನಿಗೆ ಹೆಚ್ಚಿನ ವಯಸ್ಸೇನೂ ಆಗಿರಲಿಲ್ಲ. ಆದರೆ ಸ್ತ್ರೀಯರು ನಗ್ನರಾಗಿ ಸ್ನಾನ ಮಾಡಬಾರದೆಂಬ ನೀತಿಗೆ ವಿರುದ್ಧ ನಡೆವಳಿಕೆಯಾದ್ದರಿಂದ ವಸ್ತ್ರವನ್ನು ಬಚ್ಚಿಟ್ಟನು. ಸೂರ್ಯನ ಮತ್ತು ಜಲ ದೇವತೆಗಳ ಎದುರಿಗೆ ವಿವಸ್ತ್ರಳಾಗಿ ಹೋಗಬಾರದು. ಆದರೆ ಎರಡು ಕೈಗಳನ್ನು ಮೇಲಕ್ಕೆತ್ತಿ ಕೈಮುಗಿಯುವಂತೆ ಶ್ರೀಕೃಷ್ಣನು ಹೇಳಿದನಲ್ಲಾ ಎಂದರೆ ಜೀವಾತ್ಮನಿಗೂ-ಪರಮಾತ್ಮನಿಗೂ



ಬ್ರಹ್ಮನ ಗೋವುಗಳನ್ನು ಮತ್ತು ಗೋಪ ಬಾಲಕರನ್ನು ಬಚ್ಚಿಟ್ಟಿದ್ದನು.
ಗರ್ವಭಂಗ ಆದ ನಂತರ ಭಗವಂತರನ್ನು ಸ್ತುತಿಸುತ್ತಿರುವುದು.

ತನ್ನನು ನಂಬಿಕಸ್ಥನಾದ ಅಕ್ರೂರ ನನ್ನು ಗೋಕುಲಕ್ಕೆ ಕಳುಹಿಸಿದನು. ಅಕ್ರೂರನು, ನಂದಗೋಪನಿಗೆ ಕಂಸನ ಸಂದೇಶವನ್ನು ತಿಳಿಸಿದನು. ಆಗ ಯಶೋದೆ ನಂದಗೋಪರು ಚಿಂತಾಕ್ರಾಂತರಾದರು. ಸಿಂಹದ ಗುಹೆಗೆ ತಮ್ಮ ಮುದ್ದಿನ ಮಗನನ್ನು ಹೇಗೆ ಕಳುಹಿಸುವುದೆಂದು, ಗೋಪ-ಗೋಪಿಯರು ಅಳುತ್ತಾ ನಿಂತಿದ್ದರು. ಹಸು-ಕರುಗಳು ತಮ್ಮ ಮೂಕ ವೇದನೆಯನ್ನು ಅದುಮಿ ಇಟ್ಟುಕೊಂಡಿತ್ತು. ಶ್ರೀಕೃಷ್ಣನಾದರೋ ಈವರೆವಿಗೂ ಆಟವಾಡುತ್ತಿದ್ದ ಸಂಗಡಿಗರನ್ನು ಬಿಟ್ಟು, ದುಷ್ಟರನ್ನು ಶಿಕ್ಷಿಸಲು, ಶಿಷ್ಟರನ್ನು ರಕ್ಷಿಸಲು ಸನ್ನದ್ಧನಾದನು. ಅಕ್ರೂರನ ಜೊತೆ ಹೊರಟೇಬಿಟ್ಟನು.

ಮಧ್ಯಮಾರ್ಗದಲ್ಲಿ ಒಂದು ಸರೋವರ ಸಿಕ್ಕಿತು. ಅಕ್ರೂರನು ಸ್ನಾನ ಸಂಧ್ಯಾವಂದನೆ ಮಾಡಲು ಹೋದನು. ಆಗ ಅವನು ನೀರಿನಲ್ಲಿ ಮುಳುಗಿದಾಗ ಶ್ರೀಕೃಷ್ಣನು ಶಂಖ-ಚಕ್ರಗದಾಧಾರಿಯಾಗಿ ಕಾಣಿಸುತ್ತಿದ್ದನು. ನೀರಿನಿಂದ ಮೇಲೆದ್ದಾಗ ನಂದಕುಮಾರ ನಾಗಿ ಕಂಡು ಬಂದನು. ಅಕ್ರೂರನಿಗೆ ಶ್ರೀಕೃಷ್ಣನು ಪರತತ್ವವೆಂಬುದು ದೃಢವಾಯಿತು. ಇವರುಗಳು ಮಥುರಾ ನಗರವನ್ನು ತಲುಪಿದರು. ಬಲರಾಮ-ಶ್ರೀಕೃಷ್ಣನು ಅಗಸನ ಅಂಗಡಿಯಲ್ಲಿ ಸುಂದರವಾದ ವಸ್ತ್ರವನ್ನು ತೆಗೆದು ಧರಿಸಿಕೊಂಡರು. ಮುಂದೆ ಮಾಲಾ ಕರನು ಕೊಟ್ಟ ಹಾರವನ್ನು ಹಾಕಿಕೊಂಡು ಹೊರಟರು. ಆಗ ಕುಬ್ಜೆಯು ದಾರಿಗಡ್ಡಲಾಗಿ ಬಂದು ತಾನು ತಯಾರಿಸಿದ ಸುಗಂಧಭರಿತವಾದ ಗಂಧವನ್ನು ಕೃಷ್ಣನಿಗೆ ಪ್ರೀತಿಯಿಂದ ಹಚ್ಚಿದಳು. ಶ್ರೀಕೃಷ್ಣನು ಅವಳಿಗೊಂದು ಉಪಕಾರ ಮಾಡಲು ಅವಳ ಗಡ್ಡವನ್ನು ಹಿಡಿದು ಮೇಲೆತ್ತಿದನು. ಅವಳ ಬಗ್ಗಿದ ಬೆನ್ನು ಸರಿಹೋಗಿ ಅವಳು ಅತೀ ಸುಂದರಿಯಾಗಿ ಕಂಡಳು. ಕುಬ್ಜೆಯ ಸಂತೋಷಕ್ಕೆ ಪಾರವೇ ಇರಲಿಲ್ಲ. ನಗರದ ಬೀದಿಬೀದಿಗಳಲ್ಲಿ ಸಂಚರಿಸಿ ತನ್ನ ಸೌಂದರ್ಯವನ್ನು ತೋರಿಸಿಕೊಂಡಳು.

ಕಂಸನು ಕೃಷ್ಣನನ್ನು ಕೊಲ್ಲಲು ಮಹಾದ್ವಾರದಲ್ಲಿ ''ಕುವಲಯಾಪೀಡ''ವೆಂಬ ಮದ ಗಜವನ್ನು ನಿಲ್ಲಿಸಿದ್ದನು. ಶ್ರೀಕೃಷ್ಣ -ಬಲರಾಮರು ಬಂದ ತಕ್ಷಣ ಆನೆಯು ಇವರ ಮೇಲೆ ಧಾಳಿ ಮಾಡಲು ಪ್ರಾರಂಭಿಸಿತು. ಸ್ವಲ್ಪ ಹೊತ್ತು ಸೆಣೆಸಾಟ ಮಾಡಿದ ನಂತರ ಅದಕ್ಕೆ ಕೃಷ್ಣನ ಸ್ಪರ್ಶದಿಂದ ಪೂರ್ವ ಜನ್ಮದ ಪ್ರಜ್ಞೆ ಉಂಟಾಯಿತು: ತನ್ನ ಪೂರ್ವಜನಾದ ಗಜೇಂದ್ರನು ಮೊಸಳೆಯ ಕೈಗೆ ಸಿಕ್ಕಿಕೊಂಡಾಗ ಶ್ರೀಮನ್ನಾರಾಯಣನಾದ, ಇವನು ತಾನೇ ಬಿಡಿಸಿದನು. ದುಷ್ಟನಾದ ಕಂಸನ ಕೈಯಿಂದ ಸಾಯುವ ಬದಲು ಇವನಿಂದ ಹತನಾಗಿ ಮೋಕ್ಷ ಪಡೆಯಲು ಸಿದ್ಧವಾಯಿತು.

ಬಲರಾಮ-ಕೃಷ್ಣರು ಯಾಗ ಶಾಲೆಯ ಬಳಿ ಬಂದರು. ಅಲ್ಲಿ ಅನೇಕರು ತಮ್ಮ ರಕ್ಷಕ



ಅಷ್ಟ ಮಹಿಷಿಯರೊಂದಿಗೆ ಶ್ರೀ ಕೃಷ್ಣ

ದೈವವೇ ಬಂದಿರುವನೆಂದು ನಂಬಿದ್ದರು. ಮದಗಜದ ಮೃತ್ಯುವಿನಿಂದ ದುಃಖಿತನಾದ ಕಂಸನು, ಚಾಣೂರ, ಮುಷ್ಟಿಕರೆಂಬ ಜಟ್ಟಿಗಳನ್ನು ಇವರೊಡನೆ ಸೆಣೆಸಲು ಸಿದ್ಧಪಡಿಸಿದ್ದನು. ಇವರಿಬ್ಬರೂ ಕೃಷ್ಣನೊಂದಿಗೆ ಮಲ್ಲ ಯುದ್ಧ ಮಾಡಿ ಸೋತು ಸುಣ್ಣವಾದರು. ಕಂಸನು ಭಯಭೀತನಾದನು. ಅದೇ ಸಮಯದಲ್ಲಿ ಶ್ರೀಕೃಷ್ಣನು ಸಿಂಹಾಸನದ ಮೇಲೆ ಕುಳಿತಿದ್ದ ಸೋದರ ಮಾವನಾದ ಕಂಸನನ್ನು ಹಿಡಿದೆಳೆದು ವಧಿಸಿದನು!

ಶ್ರೀಕೃಷ್ಣನು ಉಗ್ರಸೇನ ಮಹಾರಾಜನಿಗೆ ಪಟ್ಟ ಕಟ್ಟಿದನು. ತನ್ನ ತಂದೆ ತಾಯಿಯರಾದ ವಸುದೇವ ದೇವಕಿಯರಿಗೆ ಪರಮಾನಂದವನ್ನು ಉಂಟುಮಾಡಿದನು. ತಾನು ರಾಜನಾಗದಿದ್ದರೂ, ಪ್ರಜೆಗಳಿಗೆ ಸುಖ ಸಂತೋಷವನ್ನುಂಟು ಮಾಡಿದನು. ಅಷ್ಟರಲ್ಲಿ ರುಕ್ಮಿಣಿಯ ಕಡೆಯಿಂದ ಪತ್ರ ತಲುಪಿತು. ಅಲ್ಲಿಗೆ ಹೋಗಿ ಆವಳನ್ನು ರಥದಲ್ಲಿ ಕೂಡಿಸಿಕೊಂಡು ಬಂದನು. ರುಕ್ಮಿಣಿಯ ಅಣ್ಣ ಯುದ್ಧಕ್ಕೆ ಬಂದಾಗ ಅವನನ್ನು ಸೋಲಿಸಿದನು. ಶಿಶುಪಾಲನು ರುಕ್ಮಿಣಿ ದೊರೆಯದೆ ನಿರಾಶನಾಗಿ ಹಿಂದಿರುಗಿದನು. ಜಾಂಭವಂತನೊಂದಿಗೆ ಸೆಣೆಸಿ ಜಾಂಬವತಿಯನ್ನು ಮತ್ತು ಶಮಂತಕ ಮಣಿಯನ್ನು ತಂದನು. ಅನಂತರಸತ್ಯಭಾಮೆಯನ್ನು ಮದುವೆಯಾದನು. ಆಕೆಯ ಆಸೆಗಾಗಿ ಪಾರಿಜಾತವನ್ನು ಧರೆಗೆ ತಂದನು. ನರಕಾಸುರನನ್ನು ಸಂಹಾರ ಮಾಡಿ ೧೬೦೦೦ ಕನ್ಯೆಯರನ್ನು ಪಾಣಿಗ್ರಹಣ ಮಾಡಿದನು. ಸುಭದ್ರೆಯನ್ನು ಅಪಹರಿಸಲು ಅರ್ಜುನನಿಗೆ ಸಹಾಯ ಮಾಡಿದನು.

ಕೃಷ್ಣನ ಸಖ ಸುಧಾಮನಿಗೆ ಕಡು ಬಡತನ, ಅವನ ಹೆಂಡತಿ ಪ್ರತಿದಿನ ಗಂಡನನ್ನು ಕೇಳಿಕೊಳ್ಳುತ್ತಿದ್ದಳು. ''ನಿಮ್ಮ ಸ್ನೇಹಿತ ಶ್ರೀಕೃಷ್ಣ ಎಷ್ಟು ಒಳ್ಳೆಯವನು'' ಗುರುಗಳಾದ ಸಾಂದೀಪಿನಿಯ ಸತ್ತ ಮಕ್ಕಳನ್ನು ತಂದುಕೊಟ್ಟನು. ಹಾಗಿರುವಲ್ಲಿ ನಮ್ಮ ಬಡತನವನ್ನು ದೂರಗೊಳಿಸದಿರುವನೇ? ಎಂದು ಮೂರು ಹಿಡಿ ಅವಲಕ್ಕಿಯನ್ನು ಗಂಟುಕಟ್ಟಿ ಸುಧಾಮನನ್ನು ಶ್ರೀಕೃಷ್ಣನ ಬಳಿ [illegible]ಮನಿಗೋ ಸಂಕೋಚ ಆದರೂ ಸ್ನೇಹಿತನನ್ನಾದರೂ ನೋಡಬಹುದೆಂದು ಬಂದನು. ಅರಮನೆಯ ಕಾವಲುಗಾರರ ಕೈಲಿ ತನ್ನ ಪರಿಚಯವನ್ನು ಹೇಳಿಕಳುಹಿಸಿದನು. ಆ ಸಮಯದಲ್ಲಿ ಶ್ರೀಕೃಷ್ಣ ಮತ್ತು ರುಕ್ಮಿಣಿ ಪಗಡೆ ಆಟ ಆಡುತ್ತಿದ್ದರು. ಕಾವಲುಗಾರರಿಂದ ಕುಚೇಲನ ಆಗಮನ ತಿಳಿದು ಕೃಷ್ಣನು ಓಡೋಡಿ ಬಂದು ಕುಚೇಲನನ್ನು ಆಲಂಗಿಸಿಕೊಂಡು ಕರೆದೊಯ್ದನು. ಅಲ್ಲಿ ತನ್ನ ಸಿಂಹಾಸನದ ಮೇಲೆ ಕುಳ್ಳಿರಿಸಿ ಅರ್ಘ್ಯ, ಪಾದ್ಯಗಳಿಂದ ಸತ್ಕರಿಸಿ ಮಾರ್ಗಾಯಾಸವನ್ನು ಪರಿಹರಿಸಿದನು. ಇಬ್ಬರೂ ಗುರುಕುಲದ ಸಮಾಚಾರಗಳನ್ನು ಹೇಳಿಕೊಂಡರು. ಕೃಷ್ಣನು ಕುಚೇಲನನ್ನು ಕೇಳಿದನು ಅತ್ತಿಗೆಯು ನನಗೇನು ಕಳುಹಿಸಿರುವಳು? ಎಂದು ಕುಚೇಲನ

ಅಂಗವಸ್ತ್ರದಲ್ಲಿ ಕಟ್ಟಿದ್ದ ಅವಲಕ್ಕಿಯನ್ನು ತೆಗೆದುಕೊಂಡು ಎರಡು ಹಿಡಿಯನ್ನು ತಿಂದನು ಮೂರನೆಯ ಹಿಡಿಯನ್ನು ರುಕ್ಮಿಣಿ ತಡೆದು ಬಿಟ್ಟಳು. ಅವಲಕ್ಕಿಯನ್ನೇ ಏಕೆ ತಿಂದನು? ಎಂದರೆ ಕೃಷ್ಣ-ಸುಧಾಮರು ಗುರುಕುಲದಲ್ಲಿದ್ದಾಗ ಸೌದೆಯನ್ನು ಕಡಿಯಲು ಕಾಡಿಗೆ ಹೊರಡುವಾಗ, ಗುರು ಪತ್ನಿಯು ಇಬ್ಬರಿಗೂ ಹಸಿವಾದಾಗ ತಿನ್ನಲು ಅವಲಕ್ಕಿಯನ್ನು ಕೊಟ್ಟಿದ್ದಳು. ಆಗ ಕಾಡಿನಲ್ಲಿ ಜೋರಾದ ಮಳೆ ಬಂದಿತು. ಒಬ್ಬೊಬ್ಬರು ಒಂದೊಂದು ಮರವನ್ನು ಹತ್ತಿದರು. ಕುಚೇಲನಿಗೆ ಹಸಿವಾಯಿತು ಅವಲಕ್ಕಿಯನ್ನು ತಿಂದನು. ಹಸಿವು ಇಂಗಲಿಲ್ಲ. ಕೃಷ್ಣನ ಭಾಗವನ್ನೂ ತಿಂದನು ಇತರರ ವಸ್ತುವನ್ನು ತಿನ್ನಬಾರದು. ಆದ್ದರಿಂದಲೇ ಕುಚೇಲನಿಗೆ ಕಡು ಬಡತನ ಬಂದಿತು. ಈಗ ಕೃಷ್ಣನ ಅನುಗ್ರಹದಿಂದ ಅಪಾರ ಸಂಪತ್ತು ದೊರೆಯಿತು.

ಇನ್ನೊಂದು ಸಂಗತಿ ಶ್ರೀಕೃಷ್ಣ ಮತ್ತು ಸುಧಾಮರ ಗೆಳೆತನ ಆತ್ಮೀಯವಾದದ್ದು ಗುರುಕುಲದಿಂದ ಹೊರಾಡುವಾಗ ಅಗಲಿಕೆಗಾಗಿ ದುಃಖಿಸುತ್ತಿದ್ದರು. ಅದೇ ಸಮಯಕ್ಕೆ ಸಾಂದೀಪಿನಿ ಜೊತೆ ಪರಶುರಾಮರು ಬಂದರು. ನಾರಾಯಣನಾದ ಶ್ರೀಕೃಷ್ಣನು ಅವರಿಗೆ ಕ್ಷತ್ರಿಯರನ್ನು ಸಂಹರಿಸಲು ತನ್ನ ಚಕ್ರಾಯುಧವನ್ನು ನೀಡಿದ್ದನು. ಈಗ ಪರಶುರಾಮರು ಆ ಚಕ್ರಾಯುಧವನ್ನು ಹಿಂತಿರುಗಿಸುತ್ತ ಹೇಳಿದರು ಹೇ ಕೃಷ್ಣ! ನೀನು ಗೋಕುಲ, ವೃಂದಾನವನಗಳಲ್ಲಿ ನುಂಗಿರುವ ನವನೀತವು ಕರಗಬೇಕಾದರೆ ಮಥುರೆಗೆ ಹೋಗು ಅಲ್ಲಿ ಕಂಸ, ಶಿಶುಪಾಲಾದಿ ದುಷ್ಟರನ್ನು ಸಂಹರಿಸಿ ಶಿಷ್ಟರನ್ನು ಸಂರಕ್ಷಿಸು ಎಂದರು. ಶ್ರೀಕೃಷ್ಣನೂ ಸಮ್ಮತಿಸಿದನು.

ಒಂದು ದಿನ ನಾರದರು ಶ್ರೀಕೃಷ್ಣನ ಗೃಹಾಸ್ಥಾಶ್ರಮವನ್ನು ಕಂಡು ಆಸಕ್ತರಾದರು. ಅವರು ಕೃಷ್ಣನನ್ನು ಕೋರಿದರು. ನನಗೂ ಆ ಆಶ್ರಮದ ಸುಖವನ್ನು ಅನುಭವಿಸಬೇಕೆಂದು ಆಸೆ ಎಂದರು. ಆಗ ಕೃಷ್ಣನು ಎದುರು ಇರುವ ಸರೋವರದಲ್ಲಿ ಸ್ನಾನ ಮಾಡಿ ಏಳಿ ಎಂದನು. ನಾರದರು ಸ್ತ್ರೀರೂಪವನ್ನು ಧರಿಸಿ ೬೦ ಮಕ್ಕಳನ್ನು ಹೆತ್ತರು. ಅವರಿಗೆ ಸಾಕು-ಸಾಕಾಯಿತು. ಪುನಃ ಭಗವಂತನನ್ನು ಪ್ರಾರ್ಥಿಸಿ ದೇವಋಷಿಯಾದರು. ಅವರಿಗೆ ಜನಿಸಿದ ಮಕ್ಕಳೇ ೬೦ ಸಂವತ್ಸರಗಳ ಹೆಸರಿನಿಂದ ಪ್ರಸಿದ್ಧರಾದರು. ಒಂದು ದಿನ ಕೃಷ್ಣಾರ್ಜುನರು ಖಾಂಡವ ವನ ದಹನ ಮಾಡಿದರು.

ಕೆಲವಾರು ದಿನಗಳು ಕಳೆಯಿತು. ದುರ್ಯೋಧನನ ತಂತ್ರದಿಂದ ಪಾಂಡವರು ಅರಗಿನ ಮನೆಯಲ್ಲಿ ಸಿಕ್ಕಿಕೊಂಡರು. ಅವರು ಅಲ್ಲಿಂದ ತಪ್ಪಿಸಿಕೊಂಡು ಹೋಗಿ ದ್ರೌಪದಿಯನ್ನು ವಿವಾಹವಾದರು. ಧೃತರಾಷ್ಟ್ರನು ಇಂದ್ರಪ್ರಸ್ಥವೆಂಬ ರಾಜ್ಯವನ್ನು ನೀಡಿದನು.

ಧರ್ಮರಾಜನು ರಾಜಸೂಯಯಾಗವನ್ನು ಮಾಡಿದನು. ಆಗ ಶ್ರೀಕೃಷ್ಣನು ಕುದುರೆಗಳಿಗೆ ಹುಲ್ಲು ಹಾಕಿ ಪಾಲಿಸಿದನು. ಮತ್ತು ಭೋಜನಾನಂತರ ಎಂಜಲು ಎಲೆಗಳನ್ನು ಎತ್ತಿ ತನ್ನ ಸೌಜನ್ಯವನ್ನು ತೋರಿದನು. ಭೀಷ್ಮ ಪಿತಾಮಹರು ಶ್ರೀಕೃಷ್ಣನಿಗೆ ಅಗ್ರಪೂಜೆಯನ್ನು ಮಾಡಿಸಿದರು. ಆಗ ದುರ್ಯೋಧನ ಮತ್ತು ಶಿಶುಪಾಲರಿಗೆ ಅಪಾರ ಕೋಪವುಂಟಾಯಿತು. ಶಿಶುಪಾಲನು ಶ್ರೀಕೃಷ್ಣನನ್ನು ಬಹುವಾಗಿ ನಿಂದಿಸಿ ಆತನಿಂದ ಹತನಾಗಿ ಮುಕ್ತಿಯನ್ನು ಪಡೆದನು.

ದುರ್ಯೋಧನನು- ಧರ್ಮರಾಜನನ್ನು ದ್ಯೂತಕ್ಕೆ ಕರೆದು ಕುತಂತ್ರದಿಂದ ಅವನನ್ನು ಸೋಲಿಸಿದನು. ಕೊನೆಗೆ ದ್ರೌಪದಿಯನ್ನು ಸೋತನು. ದುರ್ಯೋಧನನು ದ್ರೌಪದಿಯನ್ನು ರಾಜಸಭೆಗೆ ಕರೆಸಿ ಅವಮಾನ ಮಾಡಬೇಕೆಂದು ಅವಳನ್ನು ವಿವಸ್ತ್ರಳನ್ನಾಗಿ ಮಾಡಲು ದುಶ್ಯಾಸನನಿಗೆ ತಿಳಿಸಿದನು. ದ್ರೌಪದಿ ದುಃಖ ತಪ್ತಳಾಗಿ ಆಪದ್ಬಾಂಧವನಾದ ಶ್ರೀಕೃಷ್ಣನನ್ನು ಧ್ಯಾನ ಮಾಡಿದಳು.

*''ಶಂಖ ಚಕ್ರ ಗದಾ ಪಾಣೇ*
*ದ್ವಾರಕಾ ನಿಲಯಾ ಅಚ್ಯುತ*
*ಗೋವಿಂದ ಪುಂಡರೀಕಾಕ್ಷ*
*ರಕ್ಷ ಮಾಂ ಶರಣಾಗತಾಂ!!*

ಎಂದು, ಆಗ ಅವಳ ವಸ್ತ್ರ ವೃದ್ಧಿಯಾಯಿತು. ದುಶ್ಯಾಸನನು ಸೋತು ಬಿದ್ದನು. ಅನಂತರ ಪಾಂಡವರು ೧೨ ವರ್ಷ ವನವಾಸ ಮತ್ತೊಂದು ವರ್ಷ ಅಜ್ಞಾತವಾಸದಲ್ಲಿದ್ದಾಗ ಕೌರವರು ದೂರ್ವಾಸರನ್ನು ಕಳುಹಿಸಿ ತೊಂದರೆ ಕೊಟ್ಟರು. ಆಗಲೂ ಶ್ರೀಕೃಷ್ಣನು ಅಕ್ಷಯ ಪಾತ್ರೆಯಲ್ಲಿ ಉಳಿದಿದ್ದ ಒಂದು ಅಗಳನ್ನು ಭುಜಿಸಿ ದೂರ್ವಾಸರ ಶಾಪವನ್ನು ತಪ್ಪಿಸಿದನು.

ಶ್ರೀಕೃಷ್ಣನು ಪಾಂಡವ ದೂತನಾಗಿ ಹಸ್ತಿನಾವತಿಗೆ ಬಂದಾಗ ವಿದುರನ ಅರಮನೆಯಲ್ಲಿ ಊಟಮಾಡಿದನು. ಕೋಪಗೊಂಡ ದುರ್ಯೋಧನನು ರಾಜ ಸಭೆಯಲ್ಲಿ ಎಲ್ಲರಿಗೂ ಹೇಳಿದ್ದನು ಆ ಗೊಲ್ಲನು ಬಂದಾಗ ಯಾರೂ ಏಳಬಾರದು ಮತ್ತು ಅವನನ್ನು ಕಟ್ಟಿ ಹಾಕಬೇಕೆಂದು. ಕೃಷ್ಣನು ರಾಜಸಭೆಗೆ ಬಂದಾಗ ಮೊದಲು ಎದ್ದು ನಿಂತವನೇ ದುರ್ಯೋಧನ. ಕೃಷ್ಣನು ಅಂಗುಷ್ಟವನ್ನು ಭೂಮಿಯಲ್ಲಿ ಒತ್ತಿದಾಗ ಕೌರವನು ಮುಗ್ಗರಿಸಿ ಅವನ ಪದತಲದಲ್ಲಿ ಬಿದ್ದನು, ದರ್ಬಾರಿಗಳು ಕೃಷ್ಣನನ್ನು ಕಟ್ಟಿ ಹಾಕಲು ಪ್ರಯತ್ನಿಸಿದಾಗ ಎಲ್ಲರೂ

ಕೃಷ್ಣರೂಪಿನಲ್ಲೇ ಕಂಡುಬಂದರು ಸೇವಕರಿಗೆ ಯಾರನ್ನು ಕಟ್ಟಬೇಕೆಂದು ತಿಳಿಯಲಿಲ್ಲ. ಧೃತರಾಷ್ಟ್ರನು ಕೃಷ್ಣನ ಅನುಗ್ರಹದಿಂದ ದಿವ್ಯ ಚಕ್ಷುಸ್ಸನ್ನು ಪಡೆದು ಅವನ ದರ್ಶನವನ್ನು ಮಾಡಿದನು. ದೌತ್ಯ ಸಫಲವಾಗಲಿಲ್ಲ.

ಒಂದು ದಿನ ಕೃಷ್ಣನು ಮಲಗಿದ್ದಾಗ ಅರ್ಜುನ-ಸುಯೋಧನರಿಬ್ಬರು ಕೃಷ್ಣನಲ್ಲಿಗೆ ಬಂದರು. ಕೃಷ್ಣನು ಎದ್ದ ತಕ್ಷಣ ಅರ್ಜುನನ್ನು ಕಂಡನು. ಇತ್ತ ಕಡೆ ದುರ್ಯೋಧನನೂ ಇದ್ದನು. ಕೃಷ್ಣನು ಕುಶಲ ಪ್ರಶ್ನೆಯನ್ನು ಮಾಡಿ ಕೇಳಿದನು, ಏನು? ಇಬ್ಬರೂ ಏಕ ಕಾಲದಲ್ಲಿ ಬಂದಿರುವರಲ್ಲ! ಆಗ ಅವರು ಯುದ್ಧದಲ್ಲಿ ಸಹಾಯ ಕೋರಲು ಬಂದಿದ್ದೇವೆ ಎಂದರು. ಕೃಷ್ಣನು ತಾನು ಒಂದು ಕಡೆ ನಿರಾಯುಧನಾಗಿರುವುದಾಗಿಯೂ ಮತ್ತು ಅಕ್ಷೌಹಿಣೀ ಸೈನ್ಯ ಒಂದು ಕಡೆ ಯುದ್ಧಮಾಡುವುದಾಗಿಯೂ, ಆಗ ಅರ್ಜುನನು ಶ್ರೀಕೃಷ್ಣನೊಬ್ಬನೇ ಸಾಕೆಂದನು. ದುರ್ಯೋಧನನು ಅಕ್ಷೌಹಿಣಿ ಸೈನ್ಯವನ್ನು ಒಪ್ಪಿ ಸಂತೋಷದಿಂದ ಹಿಂತಿರುಗಿದನು. ಇನ್ನು ಕೇಳಿ ಗೋವಿಂದನ-ಭಗವದ್ಗೀತೆಯನ್ನು.

***

# ಗೀತೆಯಲ್ಲಿನ ವಿಷಯಗಳು

ಅರ್ಜುನನ ವಿಷಾದ ಯೋಗ ೧ನೇ ಅಧ್ಯಾಯ ಶ್ಲೋಕ ೧ ರಿಂದ ೧೧ರವರೆಗೆ ಎರಡು ಕಡೆಗಳ ಸೈನ್ಯದ ಸಂಖ್ಯೆ ಮತ್ತು ಪ್ರತಿಷ್ಠಿತ ವೀರರ ವರ್ಣನೆ.

ಶ್ಲೋಕ ೧೨ ರಿಂದ ೧೯ ವರೆಗೆ ಎರಡು ಕಡೆ ಸೈನ್ಯದವರ ಶಂಖಧ್ವನಿಯ ವಿವರ.

ಶ್ಲೋಕ ೨೦-೨೭ ಅರ್ಜುನನಿಂದ ಸೈನ್ಯವನ್ನು ಪರಿಶೀಲಿಸುವ ವಿಚಾರ,

ಶ್ಲೋಕ ೨೮-೪೭ ವ್ಯಾಮೋಹದಿಂದ ಅರ್ಜುನನ ಹೇಡಿತನ ಮತ್ತು ಬಂಧು ಪ್ರೇಮ ವ್ಯಥೆ.

**ಸಾಂಖ್ಯಯೋಗವೆಂಬ ಎರಡನೇ ಅಧ್ಯಾಯ**

ಶ್ಲೋಕ ೧-೧೦ ಅರ್ಜುನನ ಹೇಡಿತನದ ಬಗ್ಗೆ ಶ್ರೀಕೃಷ್ಣಾರ್ಜುನರ ಸಂವಾದ.

ಶ್ಲೋಕ ೧೧-೩೮ ಕ್ಷಾತ್ರಧರ್ಮದ ಅನುಸಾರ ಯುದ್ಧಮಾಡಬೇಕಾದ ಅವಶ್ಯಕತೆಯ ನಿರೂಪಣೆ.

ಶ್ಲೋಕ ೩೯-೫೩ ನಿಷ್ಕಾಮ ಕರ್ಮಯೋಗದ ವಿಚಾರ

ಶ್ಲೋಕ ೫೪-೭೨ ಸ್ಥಿರ ಬುದ್ಧಿಯುಳ್ಳ ಪುರುಷನ ಲಕ್ಷಣ ಮತ್ತು ಅದರ ಮಹಿಮೆ

**ಕರ್ಮಯೋಗವೆಂಬ, ಮೂರನೇ ಅದ್ಯಾಯ**

ಶ್ಲೋಕ ೧-೮ ಕರ್ಮಯೋಗ ಮತ್ತು ನಿಷ್ಕಾಮ ಕರ್ಮಯೋಗದ ಅನುಸಾರ ಅನಾಸಕ್ತಭಾವದಿಂದ ನಿಶ್ಚಿತಕಾರ್ಯವನ್ನು ಮಾಡುವ ಶ್ರೇಷ್ಠತೆಯ ಬಗ್ಗೆ ವಿವರಣೆ.

ಶ್ಲೋಕ ೯-೧೬ ಯಾಗ-ಯಜ್ಞ ಮಾಡುವ ಆವಶ್ಯಕತೆಯ ನಿರೂಪಣೆ

ಶ್ಲೋಕ ೧೭-೨೪ ಜ್ಞಾನಿಗಳೂ ಮತ್ತು ಭಗವಂತನೂ ಸಹ ಲೋಕಸಂಗ್ರಹಕ್ಕಾಗಿ ಕರ್ಮಮಾಡಬೇಕಾದ ಆವಶ್ಯಕತೆ

ಶ್ಲೋಕ ೨೫-೩೫ ಅಜ್ಞಾನಿಗಳ ಮತ್ತು ಜ್ಞಾನಿಗಳ ಲಕ್ಷಣ ಮತ್ತು ರಾಗ-ದ್ವೇಷ ರಹಿತರಾಗಿ ಕರ್ಮಮಾಡುವಂತೆ ಪ್ರೇರಣೆ.

ಶ್ಲೋಕ ೩೬-೪೩ ಕಾಮೇಚ್ಛೆಯನ್ನು ತಡೆಯುವ ವಿಚಾರ.

**ಜ್ಞಾನ - ಕರ್ಮ ಸಂನ್ಯಾಸ ಯೋಗವೆಂಬ ನಾಲ್ಕನೇ ಅಧ್ಯಾಯ**

ಶ್ಲೋಕ ೧-೧೮ ಸಗುಣಬ್ರಹ್ಮನ ಪ್ರಭಾವ ಮತ್ತು ನಿಷ್ಕಾಮ ಕರ್ಮಯೋಗದ ವಿಷಯ

ಶ್ಲೋಕ ೧೯-೩೩ ಫಲಪ್ರಾಪ್ತಿಯೊಂದಿಗೆ ಬೇರೆ-ಬೇರೆ ಯಜ್ಞಗಳ ವಿಚಾರ.

ಶ್ಲೋಕ ೩೩-೪೨ ಜ್ಞಾನದ ಮಹಿಮೆ.

## ಕರ್ಮಸಂನ್ಯಾಸಯೋಗವೆಂಬ ೫ನೇ ಅಧ್ಯಾಯ

ಶ್ಲೋಕ ೧-೬ ಸಾಂಖ್ಯಯೋಗ ಮತ್ತು ನಿಷ್ಕಾಮ ಕರ್ಮಯೋಗದ ನಿರ್ಣಯ.

ಶ್ಲೋಕ ೭-೧೨ ಸಾಂಖ್ಯಯೋಗಿ ಮತ್ತು ನಿಷ್ಕಾಮ ಕರ್ಮಯೋಗಿಯ ಲಕ್ಷಣ ಮತ್ತು ಅವರ ಮಹಿಮೆ

## ಜ್ಞಾನಯೋಗದ ವಿಷಯ

ಶ್ಲೋಕ ೧೩-೨೬ ಭಕ್ತಿ ಸಹಿತ ಧ್ಯಾನಯೋಗದ ವರ್ಣನೆ

## ಆತ್ಮಸಂಯಮ ಯೋಗವೆಂಬ ೬ನೇ ಅಧ್ಯಾಯ

ಶ್ಲೋಕ ೨೭-೨೯ ನಿಷ್ಕಾಮ ಕರ್ಮಯೋಗದ ವಿಷಯ ಮತ್ತು ಯೋಗಾರೂಢ ಪುರಷನ ಲಕ್ಷಣ

ಶ್ಲೋಕ ೧-೪ ಆತ್ಮದ ಉದ್ಧಾರಕ್ಕೆ ಪ್ರೇರಣೆ ಮತ್ತು ಭಗವಂತನನ್ನು ಪಡೆದಿರುವ ಪುರುಷನ ಲಕ್ಷಣ

ಶ್ಲೋಕ ೫-೧೦ ಧ್ಯಾನಯೋಗದ ವಿಷಯ ವಿಸ್ತಾರವಾಗಿ ತಿಳಿಸಿದೆ.

ಶ್ಲೋಕ ೧೧-೩೨ ಮನಸ್ಸನ್ನು ನಿಗ್ರಹಿಸಿಕೊಳ್ಳುವ ವಿಚಾರ

ಶ್ಲೋಕ ೩೩-೩೬ ಯೋಗಭ್ರಷ್ಟ ಪುರುಷನ ಚಲನೆಯ ವಿಚಾರ ಮತ್ತು ಧ್ಯಾನಯೋಗಿಯ ಮಹಿಮೆ.

## ಜ್ಞಾನ- ವಿಜ್ಞಾನ ಯೋಗ ಎಂಬ ೭ನೇ ಅಧ್ಯಾಯ

ಶ್ಲೋಕ ೩೭-೪೭ ವಿಜ್ಞಾನದೊಂದಿಗೆ ಜ್ಞಾನದ ವಿಷಯ

ಶ್ಲೋಕ ೧-೭ ಸಮಸ್ತ ವಸ್ತುಗಳಲ್ಲಿಯೂ ಕಾರಣರೂಪದಿಂದ ಭಗವಂತನ ವ್ಯಾಪಕತೆಯ ವರ್ಣನೆ.

ಶ್ಲೋಕ ೮-೧೨ ಆಸುರೀ ಸ್ವಭಾವದಿಂದ ನಿಂದೆ ಮತ್ತು ಭಗವದ್ಭಕ್ತರ

| | |
|---|---|
| | ಪ್ರಶಂಸೆ.ಶ್ಲೋಕ ೧೩-೧೯ ಅನ್ಯದೇವತಾ ಉಪಾಸನೆಯ ವಿಚಾರ. |
| ಶ್ಲೋಕ ೨೦-೨೩ | ಭಗವಂತನ ಪ್ರಭಾವ ಮತ್ತು ಸ್ವರೂಪವನ್ನು ತಿಳಿಯದಿದ್ದವರ ನಿಂದೆ |
| ಶ್ಲೋಕ ೨೪-೩೦ | ಮತ್ತು ತಿಳಿವಳಿಕೆ ಉಳ್ಳವರ ಮಹಿಮೆ. |

## ಅಕ್ಷರ ಬ್ರಹ್ಮಯೋಗ ಎಂಬ ೮ನೇ ಅಧ್ಯಾಯ

| | |
|---|---|
| ಶ್ಲೋಕ ೧-೭ | ಬ್ರಹ್ಮ ಅಧ್ಯಾತ್ಮ ಮತ್ತು ಕರ್ಮಾದಿಗಳ ವಿಷಯದಲ್ಲಿ ಅರ್ಜುನನಿಗೆ ೭ ಪ್ರಶ್ನೆಗಳು ಮತ್ತು ಅದರ ಉತ್ತರಗಳು. |
| ಶ್ಲೋಕ ೮-೨೨ | ಭಕ್ತಿಯೋಗದ ವಿಷಯ |
| | ಶುಕ್ಲ ಮತ್ತು ಕೃಷ್ಣಮಾರ್ಗಗಳ ವಿಚಾರ |

## ರಾಜವಿದ್ಯಾರಾಜಗುಹ್ಯಯೋಗ ಎಂಬ ೯ನೇ ಅಧ್ಯಾಯ

| | |
|---|---|
| ಶ್ಲೋಕ ೧-೬ | ಪ್ರಭಾವಯುತವಾಗಿ ಜ್ಞಾನದ ವಿಷಯ |
| ಶ್ಲೋಕ ೭-೧೦ | ಜಗತ್ತಿನ ಉತ್ಪತ್ತಿಯ ವಿಷಯ |
| ಶ್ಲೋಕ ೧೧-೧೫ | ಬಗವಂತನು ತಿರಸ್ಕರಿಸುವ ಆಸುರೀ ಪ್ರಕೃತಿಯವರನ್ನು ನಿಂದಿಸುವುದು ಮತ್ತು ದೈವೀ ಪ್ರಕೃತಿಯವರ ಭಗವದ್ಭಜನದ ಪ್ರಕಾರಗಳು |
| ಶ್ಲೋಕ ೧೬-೧೯ | ಸರ್ವಾತ್ಮರೂಪವಾಗಿ ಪ್ರಭಾವಿತರಾಗುವಂತೆ ಭವಂಗತನ ಸ್ವರೂಪವನ್ನು ವರ್ಣಿಸುವುದು. |
| ಶ್ಲೋಕ ೨೦-೨೫ | ಸಕಾಮ ಮತ್ತು ನಿಷ್ಕಾಮ ಉಪಾಸನೆಗಳ ಫಲ |
| ಶ್ಲೋಕ ೨೬-೩೪ | ನಿಷ್ಕಾಮ ಭಗವದ್ಭಕ್ತಿಯ ಮಹಿಮೆ. |

## ವಿಭೂತಿ ಯೋಗ ಎಂಬ ೧೦ನೇ ಅಧ್ಯಾಯ

| | |
|---|---|
| ಶ್ಲೋಕ ೧-೭ | ಭಗವಂತನ ವಿಭೂತಿ ಮತ್ತು ಯೋಗ ಶಕ್ತಿಯ ವಿವರಣೆ ಮತ್ತು ಅದನ್ನು ತಿಳಿಯುವುದರ ಫಲ. |
| ಶ್ಲೋಕ ೧೨-೧೮ | ಅರ್ಜುನನಿಂದ- ಭಗವಂತನ ಸ್ತುತಿ, ವಿಭೂತಿ ಮತ್ತು ಯೋಗ ಶಕ್ತಿಯನ್ನು ತಿಳಿಸುವಂತೆ ಪ್ರಾರ್ಥನೆ. |

| | | |
|---|---|---|
| ಶ್ಲೋಕ | ೧೯-೪೨ | ಭಗವಂತನಿಂ ದ ತನ್ನ ವಿಭೂತಿಗಳ ಮತ್ತು ಯೋಗಶಕ್ತಿಯ ವಿವರಣೆ |

## ವಿಶ್ವರೂಪ ದರ್ಶನ ಯೋಗವೆಂಬ ೧೧ನೇ ಅಧ್ಯಾಯ

| | | |
|---|---|---|
| ಶ್ಲೋಕ | ೧-೪ | ವಿಶ್ವರೂಪ ದರ್ಶನ ನೀಡುವಂತೆ ಅರ್ಜುನನಿಂದ ಪ್ರಾರ್ಥನೆ. |
| ಶ್ಲೋಕ | ೫-೮ | ಭಗವಂತನಿಂದ ತನ್ನ ವಿಶ್ವರೂಪದರ್ಶನದ ವಿವರಣೆ |
| ಶ್ಲೋಕ | ೯-೧೪ | ಸಂಜಯನಿಂದ ಧೃತರಾಷ್ಟ್ರನಿಗೆ ಭಗವಂತನ ವಿಶ್ವರೂಪದ ವರ್ಣನೆ: |
| ಶ್ಲೋಕ | ೧೫-೩೧ | ಅರ್ಜುನನು ಭಗವಂತನ ವಿಶ್ವರೂಪವನ್ನು ದರ್ಶನ ಮಾಡಿದನು ಮತ್ತು ಅವನನ್ನು ಸ್ತುತಿಸಿದನು. |
| ಶ್ಲೋಕ | ೩೨-೩೪ | ಭಗವಂತನಿಂದ ತನ್ನ ಪ್ರಭಾವ ಮತ್ತು ಅರ್ಜುನನ್ನು ಯುದ್ಧಕ್ಕೆ ಪ್ರೋತ್ಸಾಹಿಸಿದ್ದು. |
| ಶ್ಲೋಕ | ೧೫-೪೬ | ಭಯಭೀತನಾದ, ಅರ್ಜುನನ ಮುಖಾಂತರ ಭಗವಂತನ ಸ್ತುತಿ ಮತ್ತು ಚತುರ್ಭುಜ ರೂಪವನ್ನು ತೋರಿಸುವಂತೆ ಪ್ರಾರ್ಥನೆ. |
| ಶ್ಲೋಕ | ೪೭-೫೦ | ಭಗವಂತನಿಂದ ತನ್ನ ವಿಶ್ವರೂಪದರ್ಶನದ ಮಹಿಮೆಗಳ ಪ್ರಕಟನೆ ಮತ್ತು ಸೌಮ್ಯ ರೂಪವನ್ನು ತೋರಿಸುವುದು. |
| ಶ್ಲೋಕ | ೫೧-೫೫ | ಅನನ್ಯ ಭಕ್ತಿಯ ಹೊರತು ಚತುರ್ಭುಜ ದರ್ಶನ ದುರ್ಲಭ, ಮತ್ತು ಫಲಪ್ರಾಪ್ತಿಯೊಂದಿಗೆ ಅನನ್ಯ ಭಕ್ತಿಯ ವಿವರಣೆ |

## ಭಕ್ತಿಯೋಗವೆಂಬ ೧೨ನೇ ಅಧ್ಯಾಯ

| | | |
|---|---|---|
| ಶ್ಲೋಕ | ೧-೧೨ | ಸಾಕಾರ ಮತ್ತು ನಿರಾಕಾರ ಉಪಾಸಕರ ಶ್ರೇಷ್ಠತೆಯ ನಿರ್ಣಯ ಮತ್ತು ಭಗವತ್ಪ್ರಾಪ್ತಿಯ ವಿಷಯ |
| ಶ್ಲೋಕ | ೧೩-೨೦ | ಭಗವಂತನನ್ನು ಪಡೆದಿರುವ ಪುರುಷನ ಲಕ್ಷಣ |

## ಕ್ಷೇತ್ರ-ಕ್ಷೇತ್ರಜ್ಞವಿಭಾಗಯೋಗ ಎಂಬ ೧೩ನೇ ಅಧ್ಯಾಯ

| | | |
|---|---|---|
| ಶ್ಲೋಕ | ೧-೧೮ | ಜ್ಞಾನ ಪ್ರಾಪ್ತಿಯೊಡನೆ ಕ್ಷೇತ್ರ-ಕ್ಷೇತ್ರಜ್ಞರ ವಿಚಾರ |
| ಶ್ಲೋಕ | ೧೯-೩೪ | ಜ್ಞಾನಪ್ರಾಪ್ತಿಯೊಂದಿಗೆ ಪ್ರಕೃತಿ ಪುರುಷರ ವಿಷಯ |

## ಗುಣತ್ರಯ ವಿಭಾಗಯೋಗ ಎಂಬ ೧೪ನೇ ಅಧ್ಯಾಯ

| | | |
|---|---|---|
| ಶ್ಲೋಕ | ೧-೬ | ಜ್ಞಾನದ ಮಹಿಮೆ ಮತ್ತು ಪ್ರಕೃತಿ-ಪುರುಷರಿಂದ ಜಗತ್ತಿನ ಉತ್ಪತ್ತಿ. |
| ಶ್ಲೋಕ | ೫-೧೮ | ಸತ್ವ ರಜಸ್ಸು ಮತ್ತು ತಮಸ್ಸೆಂಬ ಮೂರು ಗುಣಗಳ ವಿಚಾರ. |
| ಶ್ಲೋಕ | ೧೯-೨೭ | ಭಗವಂತನನ್ನು ಪಡೆಯುವ ಉಪಾಯ (ಸಾಧನೆ) ಮತ್ತು ಗುಣಾತೀತ ಪುರುಷನ ಲಕ್ಷಣಗಳು. |

## ಪುರುಷೋತ್ತಮ ಯೋಗವೆಂಬ ೧೫ನೇ ಅಧ್ಯಾಯ

| | | |
|---|---|---|
| ಶ್ಲೋಕ | ೧-೬ | ಸಂಸಾರವೆಂಬ ವೃಕ್ಷದ ವಿವರಣೆ ಮತ್ತು ಭಗವತ್ಪ್ರಾಪ್ತಿಯ ಉಪಾಯ |
| ಶ್ಲೋಕ | ೭-೧೧ | ಜೀವಾತ್ಮನ ವಿಷಯ |
| ಶ್ಲೋಕ | ೧೨-೧೫ | ಪರಮೇಶ್ವರನ ಸ್ವರೂಪ ವಿಚಾರವನ್ನು ಸ್ಪಷ್ಟವಾಗಿ ವರ್ಣಿಸಿದೆ. |
| ಶ್ಲೋಕ | ೧೬-೨೦ | ಅಕ್ಷರ ಅಕ್ಷರ ಪುರುಷೋತ್ತಮನ ವಿಚಾರ |

## ದೈವಾಸುರ ಸಂಪದ್ವಿಭಾಗಯೋಗ ೧೬ನೇ ಅಧ್ಯಾಯ

| | | |
|---|---|---|
| ಶ್ಲೋಕ | ೧-೫ | ಫಲ ಸಹಿತ ದೈವಿ ವಿಪತ್ತುಗಳು ಮತ್ತು ಆಸುರೀ ಸಂಪತ್ತಿನ ವಿಚಾರ. |
| ಶ್ಲೋಕ | ೬-೨೦ | ಅಸುರೀ ಸ್ವಭಾವದವರ ಲಕ್ಷಣ ಮತ್ತು ಶಾಸ್ತ್ರಕ್ಕೆ ಅನುಕೂಲ ವಾಗಿ ಆಚರಿಸಲು ಪ್ರೇರಣೆ. |

## ಶ್ರದ್ಧಾತ್ರಯ ವಿಭಾಗಯೋಗ

| | | |
|---|---|---|
| ಶ್ಲೋಕ | ೧-೬ | ಶ್ರದ್ಧೆಯ ಮತ್ತು ಶಾಸ್ತ್ರ ವಿಪರೀತವಾಗಿ ಭಯಂಕರ ತಪಸ್ಸನ್ನು ಮಾಡುವವರ ವಿಚಾರ |
| ಶ್ಲೋಕ | ೭-೨೨ | ಆಹಾರ, ಯಜ್ಞ, ತಪಸ್ಸು ಮತ್ತು ದಾನಗಳ ಬೇರೆ ಬೇರೆ ವಿಧಾನಗಳು. |
| ಶ್ಲೋಕ | ೨೩-೨೮ | ೧೭ನೇ ಅಧ್ಯಾಯ |

ತತ್ಸತ್ ಎಂಬ ಪ್ರಯೋಗದ ವ್ಯಾಖ್ಯಾನ

## ಮೋಕ್ಷ, ಸಂನ್ಯಾಸ ಯೋಗವೆಂಬ ೧೮ನೇ ಅಧ್ಯಾಯ

| | |
|---|---|
| ಶ್ಲೋಕ ೧-೧೨ | ತ್ಯಾಗದ ವಿಷಯ |
| ಶ್ಲೋಕ ೧೩-೧೮ | ಕರ್ಮವುಂಟಾಗಲು ಸಾಂಖ್ಯ ಸಿದ್ಧಾಂತ ವರ್ಣನೆ. |
| ಶ್ಲೋಕ ೧೯-೪೦ | ಮೂರು ಗುಣಗಳ ಅನುಸಾರ, ಜ್ಞಾನ - ಕರ್ಮ, ತರ್ಕ ಬುದ್ಧಿ, ಧೃತಿ ಮತ್ತು ಸುಖಗಳು ಬೇರೆ-ಬೇರೆ |
| ಶ್ಲೋಕ ೪೧-೪೮ | ವರ್ಣಾಶ್ರಮಧರ್ಮ-ಫಲಸಹಿತ |
| ಶ್ಲೋಕ ೪೯-೫೫ | ಜ್ಞಾನ ನಿಷ್ಠನ ವಿಚಾರ |
| ಶ್ಲೋಕ ೫೭-೬೬ | ಭಕ್ತಿಯೊಂದಿಗೆ ನಿಷ್ಕಾಮ ಕರ್ಮಯೋಗ ವಿಷಯ |
| ಶ್ಲೋಕ ೬೭-೭೮ | ಶ್ರೀಗೀತೆಯ ಮಹಾತ್ಮೆ. |

✡✡✡

# ಭಗವದ್ಗೀತೆ

*''ಏಷ ನಾರಾಯಣಃ ಶ್ರೀಮಾನ್ ಕ್ಷೀರಾರ್ಣವ ನಿಕೇತನಃ*
*ನಾಗಪರ್ಯಂಕ ಮುತ್ಸೃಜ್ಯ ಹ್ಯಾಗತೋ ಮಧುರಾಪುರೀಂ''*

ಈ ಶ್ಲೋಕದಲ್ಲಿ ಶ್ರೀ ಕೃಷ್ಣನನ್ನು ನಾರಾಯಣ, ಶ್ರೀಮಾನ್ ಎಂದು ಹೇಳಿದ. ಅದು ಅತ್ಯಂತ ಮುಖ್ಯ ವಿಷಯವಾಗಿದೆ. ಆದ್ದರಿಂದ ಗೀತಾಚಾರ್ಯನು ನಾರಾಯಣ ಮತ್ತು ಶ್ರೀಮಾನ್ ಎಲ್ಲಾ ಅವನೇ ಆಗಿರುತ್ತಾನೆ.

ಶ್ರೀಕೃಷ್ಣನ ಸುಂದರವಾದ ಹೆಸರುಗಳಲ್ಲಿ ಒಂದು ''ಉತ್ತಮ ಶ್ಲೋಕ'' ಎಂದು ''ಬಿಭೇತ್ಯಲ್ಪ ಶ್ರುತಾತ್ ವೇದಃ ಮಾವಯಂ ಪ್ರಹರಿಷ್ಯತಿ''ವೇದಾಂತದ ಅರ್ಥವನ್ನು ತಿಳಿಯುವುದು ಬಹಳ ಕಷ್ಟ. ವೇದರಾಶಿಗಳು ಅನೇಕ ಭೂಮಿಕೆಗಳಿಂದ ಆವೃತ್ತವಾಗಿರುವ ಎತ್ತರವಾದ ಅಟ್ಟಾಲಿಕೆಗೆ ಸಮಾನವಾಗಿದೆ. ಬೆಳಕಿಲ್ಲದೆ ಆ ಮೆಟ್ಟಲುಗಳನ್ನು ಹತ್ತುವುದು ದುಸ್ಸಾಧ್ಯ. ಅದರ ಮೇಲೆ ಏರಲು ದೇದೀಪ್ಯಮಾನವಾದಜ್ಯೋತಿಯು ಬೇಕು. ಭಗವದ್ಗೀತೆಯೇ ಆ ಪ್ರಕಾಶವಾಗಿದೆ. ಈ ಗೀತೆ ಎಂಬ ಭಾಸುರದೀಪದ ಸಹಾಯದಿಂದ ರಹಸ್ಯವಾದ ಮತ್ತು ಕಷ್ಟಸಾಧ್ಯವಾದ ಶ್ರುತಭಿಪ್ರಾಯವನ್ನು ತಿಳಿಯದಿರಬಹುದು. ಆದ್ದರಿಂದ ಗೀತೆಯನ್ನು

''ನಿಗಮಸೌಧ ದೀಪಶ್ರೀ ''ಎಂದಿರುತ್ತಾರೆ.

ನಿಗಮ ಎಂದರೆ ವೇದ ಎಂದು ''ದೀಪಶ್ರೀ'' ಎಂದರೆ ದೀಪ ಪ್ರಕಾಶ. ಇದರಂತಹ ಬೇರೆ ದೀಪ ಇಲ್ಲ ಇದು ಹೃದಯದೊಳಗೆ ಪ್ರವೇಶ ಮಾಡಿ ಅಂಧಕಾರವನ್ನು ಹೊಡೆದೋಡಿಸುತ್ತದೆ. ಗೀತೆಯಲ್ಲಿ ಪ್ರತಿಪಾದಿತವಾದ ಅರ್ಥದಲ್ಲಿ ಯಾವಾಗಲೂ ಯಾವ ಮನಪರಿವರ್ತನೆಯೂ ಆಗುವುದಿಲ್ಲ.

*''ಗೀತಾ ಸುಗೀತಾ ಕರ್ತವ್ಯಾ''*

ಅನ್ಯಮತೀಯರೂ ಸಹ ಜಗತೀಗೀತಯಾ ಎನ್ನುತ್ತಾರೆ. ಇಲ್ಲಿ ಜಗತೀ ಶಬ್ದವು ಕಾಲ ದೇಶಾತೀತತೆ. ಉಪಲಕ್ಷಣ, ಗೀತೆಯು ವಿಶ್ವ ವೈಶಾಲ್ಯದ ಹೆಗ್ಗುರುತಾಗಿದೆ. ಕೇವಲ ಕುರುಕ್ಷೇತ್ರಕ್ಕೆ ಮಾತ್ರವಲ್ಲ, ಯಾವಾಗಲೂ, ಎಲ್ಲೆಡೆಗೂ ಅನ್ವಯಿಸುವಂತಹ ಗೇಯಗೀತವಾಗಿದೆ.

*''ಇದಂತೇ ನಾತಪಸ್ಕಾಯ ನಾಭಕ್ತಾಯ ಕದಾಚನ*
*ನ ಚಾಶುಶ್ರೂಷವೇ ವಾಚ್ಯಂ ನಚ ಮಾಂ ಯೋಭ್ಯಸೂಯತಿ''*

ಈ ರೀತಿ ನಿಷೇಧವಿದ್ದರೂ ಸಹ ಒಂದು ವೇಳೆ ಸರ್ವೇಂದ್ರಿಯಗಳನ್ನೂ ಶೋಷಣೆ ಮಾಡುವ ಅಜ್ಞಾನಿಗಳನ್ನು ದುಃಖದಿಂದ ದೂರ ಮಾಡುವುದಕ್ಕಾಗಿ ಕಾರ್ಪಣ್ಯ ದೋಷೋಪಹತ ಸ್ವಭಾವಃ ಪೃಚ್ಛಾಮಿತ್ವಾಂ

ಧರ್ಮ ಸಮೂಢ ಚೇತಾಃ

ಯಚ್ಛ್ರೇಯಃ ಸ್ಯಾನ್ನಿಶ್ಚಿತಂ ಬ್ರೂಹಿ ತನ್ಮೇಶಿಷ್ಯಸ್ತೇಹಂಶಾಧಿಮಾಂ ಮಾಂ ಪ್ರಸನ್ನಂ

ಈ ರೀತಿ ಭಕ್ತಿಬಾವದಿಂದ ಇರುವ ಪ್ರಪನ್ನನಾದ ಅರ್ಜುನನ ನೆಪದಿಂದಆದ್ಯಾತ್ಮ ಶಾಸ್ತ್ರವನ್ನು ಕೇಳಲು ಯಾರು ಇಚ್ಛಿಸುತ್ತಾರೋ ಅವರನ್ನು ಶಿಷ್ಯರೆನ್ನುತ್ತಾರೆ.

*''ಸಂತಪ್ತಾಯಸಿ ಸಂಸ್ಥಿ ಕಸ್ಯ ಪಯಸೋ ನಾಮಾಪಿ ನಶ್ರೂಯತೇ''*

ಸಂಜಯನು ಧೃತರಾಷ್ಟ್ರನಿಗೆ ಮಾಡಿದ ಉಪದೇಶವು ಬಿಸಿಯಾಗಿ ಕಾದಿರುವ ಕಬ್ಬಿಣದ ಮೇಲೆ ಬಿದ್ದ ನೀರಿನ ಹಾಗೆ ಏನೂ ಪ್ರಯೋಜನವಾಗಲಿಲ್ಲ. ''ಸಂಜಯ''ನಲ್ಲಿಯದರೋ ಅದು ಅಭಿವೃದ್ಧಿ ಹೊಂದಿತು.

*''ಅಂತಃ ಸಾಗರ ಮಧ್ಯ ಪತಿತಂ ತನ್ಮೌಕ್ತಿಕಂ ಜಾಯತೇ*
*ನಷ್ಟೋಮೋಹಃ ಸ್ಮೃತಿರ್ಲಬ್ಧಾ*
*ತ್ವತ್ ಪ್ರಸಾದಾನ್ಮ ಯಾಚ್ಯುತ*
*ಸ್ಥಿತೋಸ್ಮಿ ಗತ ಸಂದೇಹಃ ಕರಿಷ್ಯೇ ವಚನಂ ತವ*

ಈ ರೀತಿ ಅರ್ಜುನನು ಬಂಧು ಬಾಂಧವರ ಮತ್ತು ಆಚಾರ್ಯರುಗಳ ವ್ಯಾಮೋಹದಿಂದ ಮುಕ್ತನಾಗಿ ಕರ್ತವ್ಯತತ್ಪರನಾದನು.

*ಮದ್ಭಕ್ತ ಜನ ವಾತ್ಸಲ್ಯಂ ಪುಜಾಯಾಂಚಾನುಮೋದನಮ್*
*ಮತ್ಕಥಾಶ್ರವಣೇ ಭಕ್ತಿಃ ಸ್ವರನೇತ್ರಾಂಗವಿಕ್ರಿಯಾ*

೭ನೇ ಮತ್ತು ೯ನೇ ಅಧ್ಯಾಯದಲ್ಲಿ ಕಾರಣತ್ವ, ಶೇಷಿತ್ವ ಸರ್ವಾಂತರಾತ್ಮತ್ವ ಸರ್ವಸಾರ್ತ್ಥ ಪರತ್ವ ಮುಂತಾದ ಮಹತ್ವದ ವಿಚಾರಗಳಿವೆ.

*''ಪತ್ರಂ ಪುಷ್ಪಂ ಫಲಂ ತೋಯಂ''*
*ಅಂತಹ ಸೌಲಭ್ಯವನ್ನು*
*ಸಮೋಹಂ ಸರ್ವಭೂತೇಷು*

ಇಂತಹ ಸಾಮ್ಯವನ್ನು ಅನುಗ್ರಹಿಸಿರುತ್ತಾನೆ. ಆದ್ದರಿಂದ ಪರತ್ವ ಪೂರ್ಣನೂ, ಪರಾವರ ಶಬ್ದವಾಚ್ಯನೂ ಆದಂತಹ ನಾರಾಯಣನೇ ಭಕ್ತಿಗೆ ವಿಷಯವಾಗಿದ್ದಾನೆ. ಮತ್ತು ಭಕ್ತಿಗೆ ಲಭ್ಯನಾಗಿದ್ದಾನೆ. ಇವೆಲ್ಲ ಗೀತೆಯಲ್ಲಿ ನಿರೂಪಿತವಾಗಿದೆ.

✡ ✡ ✡

# ಗೀತೆಯ ವಿಶೇಷತೆ

ಭಗವದ್ಗೀತೆಯು ಯುಗ ಯುಗದ ಜೀವನ ಗ್ರಂಥವಾಗಿದೆ. ಮಾನವ ಜೀವನದ ಎಲ್ಲಾ ಸಮಸ್ಯೆಗಳಿಗೂ ಗೀತೆಯಲ್ಲಿ ಸಮಾಧಾನ ದೊರೆಯುತ್ತದೆ. ಗೀತೆಯು ಗುರು ಗ್ರಂಥ, ಜ್ಞಾನಗ್ರಂಥ, ವಿಜಯಗ್ರಂಥ ಮತ್ತು ಸ್ವಾಭಾವಿಕವಾಗಿ ಪೂರ್ಣ ಮತ್ತು ಸಿದ್ಧವಾದ ಒಂದು ಜೀವನ ಗ್ರಂಥವಾಗಿದೆ. ರಚನಾತ್ಮಕವಾದ ಒಂದು ವಿಶ್ವಶಾಸ್ತ್ರವಾಗಿದೆ.

ಗೀತೆಯನ್ನು ವಿಜಯದ ಸಾಮಗಾನ ಮತ್ತು ಯುದ್ಧೋಪನಿಷದ್ ಎಂದೂ ಹೇಳುತ್ತಾರೆ. ಗೀತೆಯು ತನ್ನ ಕಾವ್ಯಮಯವಾದ ಸರಸ ಮತ್ತು ಬಹುಮುಖೀ, ಪ್ರತಿಭಾ ಸಂಪನ್ನ, ಓಜಸ್ವಿನೀ ಭಾಷೆಯಲ್ಲಿ ತನ್ನ ವಿಲಕ್ಷಣ ಶೈಲಿಯಿಂದ; ಆಧ್ಯಾತ್ಮಿಕ ಸಂದೇಶವನ್ನು ಮತ್ತು ಜ್ಞಾನ ಉಪದೇಶವನ್ನು ನೀಡಿದೆ. ಗೀತೆಯಲ್ಲಿ ಕಲಾಕುಶಲತೆ ಮತ್ತು ವಿಜ್ಞಾನದಿಂದ ಸುಸಜ್ಜಿತವಾದ ಯೋಗ ಶಕ್ತಿಯಿಂದ ಕೂಡಿದ ವಿಭೂತಿಯ ಮತ್ತು ಅಪಾರ ಐಶ್ವರ್ಯದ ಭಂಡಾರ ತುಂಬಿದೆ.

ಗೀತೆಯು ಸನಾತನ ಮತ್ತು ಅನಂತ ವಿಶ್ವ ಪುರುಷನ ಗಂಭೀರ ಜ್ಞಾನದ ಮಹಾ ಸಾಗರವಾಗಿದೆ. ಗೀತೆಯಲ್ಲಿ ಮೌಲಿಕ ಅರ್ಥಗಳ ದರ್ಶನ ತುಂಬಿದೆ. ಅದು ಕ್ಷಣ ಕ್ಷಣಕ್ಕೂ ಹೊಸ ಹೊಸ ಅಭಿಪ್ರಾಯಗಳನ್ನು ಉಂಟುಮಾಡುತ್ತದೆ.

ಗೀತೆಯ ಯೋಗವು ಅವ್ಯಯವಾದದ್ದು ಗೀತೆಯ ಜ್ಞಾನವು ಕೈವಲ್ಯದಲ್ಲಿ ನೆಲಸುವಂತಹದ್ದು. ಗೀತೆಯ ವಾಣಿಯಿಂದ ದಿವ್ಯ ಜೀವನದ ಸ್ತೋತ್ರವು ಉಕ್ಕಿ ಬರುತ್ತದೆ. ಗೀತೆಯನ್ನು ಪಠಿಸುವುದರಿಂದ ಪ್ರತಿದಿನ ಹೊಸಹೊಸ ವ್ಯಾವಹಾರಿಕ ದರ್ಶನ ದೊರೆಯುತ್ತದೆ. ಗೀತಾ ಪ್ರೇಮದಿಂದ ಜೀವನದಲ್ಲಿ ಪ್ರತಿದಿನ ಯೋಗವು ಜಾಗೃತವಾಗುತ್ತದೆ. ಇದು ಪ್ರತಿ ಒಂದು ಮನಃಸ್ಥಿತಿಯನ್ನೂ ಸುಧಾರಿಸಿ ಪ್ರಭುವಿನೊಂದಿಗೆ ಸೇರಿಸುತ್ತದೆ.

ಕರ್ಮ ಜ್ಞಾನ ಭಕ್ತಿಯ ಸಂಗಮವೇ ಜೀವನದ ತೀರ್ಥರಾಜ ಶ್ರೀಭಗವದ್ಗೀತೆಯ ಭಾಷೆಯು ಸರಳ ಮತ್ತು ಸಾಹಿತ್ಯಿಕವಾಗಿದೆ. ಗೀತಾ ದೃಷ್ಟಿಕೋನವು ಸೌಮ್ಯಸ್ವಸ್ಥ ಸಂಯಮಗಳಿಂದ ಕೂಡಿದೆ. ಕರ್ಮದಲ್ಲಿ ಅಕರ್ಮದ ದರ್ಶನ, ಕರ್ಮ ಮಾಡುತ್ತಾ ಮಾಡುತ್ತಾ ಮನುಷ್ಯನಿಗೆ ತಾನು ಏನನ್ನೂ ಮಾಡಿಲ್ಲ ಅನ್ನಿಸಬೇಕು, ಎಂದರೆ ನಿರ್ಲಿಪ್ತನಾಗಿರಬೇಕು. ತಾನು ಮಾಡಿರುವೆನೆಂಬ ಅಹಂಭಾವ ಉಂಟಾಗಬಾರದು. ಕರ್ಮದ ಹೊರೆ ಅವನ ಮನಸ್ಸನ್ನು ಮುದುಡಲಾರದು.

ಆತ್ಮ ಯಾವಾಗಲೂ ಆನಂದದಿಂದ ನಲಿದು ನರ್ತಿಸುತ್ತಿರಬೇಕು; ಮತ್ತು ಎಲ್ಲೆಡೆ

ಯಲ್ಲೂ ಆನಂದಮಯನಾದ ಬ್ರಹ್ಮನ ದರ್ಶನ ಮಾಡಬೇಕು.

ಗೀತೆಯ ಪರಮ ಧ್ಯೇಯ ಒಂದೇ ಆಗಿದ್ದರೂ ಕೂಡ ಸಂತರೂ, ಮಹಾತ್ಮರೂ, ವಿದ್ವಾಂಸರೂ, ಕವಿಗಳೂ, ಸಾಧಕರೂ, ಯೋಗಿಗಳೂ ಮತ್ತು ಭಕ್ತವೃಂದವೂ ತಮ್ಮ-ತಮ್ಮ ತಿಳುವಳಿಕೆಗಳಿಗೆ ಅನುಸಾರ ಅರ್ಥವನ್ನು ತಿಳಿದು ತಮ್ಮ-ತಮ್ಮ ಮಾರ್ಗದಲ್ಲಿ ನಡೆಯುತ್ತಾರೆ. ಗೀತೆಯು ಸನಾತನ ಗ್ರಂಥ, ವಿಶ್ವ ಪುರುಷನ ವಾಣಿ! ಶಬ್ದಶಕ್ತಿ ಮತ್ತು ಪ್ರಕಾಶದ ದೀವಟಿಗೆ! ಯಾರು ಆ ಗ್ರಂಥದಲ್ಲಿ ಎಷ್ಟೆಷ್ಟು ಆಳವಾಗಿ ಪ್ರವೇಶಿಸುತ್ತಾರೋ ಅಷ್ಟಷ್ಟು ಸಿದ್ಧಿ ಖಂಡಿತವಾಗಿ ಪಡೆಯುತ್ತಾರೆ. ಗೀತೆಯ ಅರ್ಥಕ್ಕೆ ಇತಿಶ್ರೀ ಇಲ್ಲವೇ ಇಲ್ಲ. ಆದ್ದರಿಂದಲೇ ಆ ಕೃತಿಯ ವಿಚಾರವಾಗಿ ಎಷ್ಟು ಭಾಷ್ಯ ಬರೆದರೂ, ಎಷ್ಟು ವ್ಯಾಖ್ಯಾನಗಳನ್ನು ಬರೆದರೂ, ಕಡಿಮೆಯೇ ಆಗಿರುತ್ತದೆ

ಯುಗ-ಯುಗದಲ್ಲಿ ಸಮಯಕ್ಕೆ ಅನುಸಾರವಾಗಿ ಗೀತೆಯ ವಿಚಾರವಾಗಿ ಭಾಷ್ಯವನ್ನು ರಚಿಸುತ್ತಲೇ ಇದ್ದಾರೆ. ವ್ಯಾಖ್ಯಾನಗಳನ್ನು, ಟೀಕೆಗಳನ್ನು ರಚಿಸುತ್ತಲೇ ಇದ್ದಾರೆ. ಮುಂದೆಯೂ ರಚಿಸುತ್ತಾರೆ. ಮನುಷ್ಯನು ಯಾವಾಗ ಯಾವ ಮಾರ್ಗವನ್ನು ಅಪೇಕ್ಷಿಸುತ್ತಾನೋ ಆಗ ಗೀತೆಯು ಅವನಿಗೆ ಮಾರ್ಗದರ್ಶನವನ್ನು ನೀಡುತ್ತದೆ; ಯಾವಾಗ ಯಾವ ಸಾಧನೆಯ ಆವಶ್ಯಕತೆಯ ಅನುಭವ ಉಂಟಾಗುತ್ತದೋ ಆಗ ಅದೇ ಯೋಗವನ್ನು ಸಂಗ್ರಹಿಸಿಕೊಡುತ್ತದೆ.

ಶ್ರೀ ಆದಿಶಂಕರಾಚಾರ್ಯರು ಗೀತೆಯಲ್ಲಿ ಜ್ಞಾನದ ಉತ್ಕೃಷ್ಟ ದರ್ಶನವನ್ನು ಮಾಡಿದರು, ಅವರು ಆ ಗ್ರಂಥವನ್ನು ಸಂನ್ಯಾಸ ಪ್ರಧಾನವಾದ ಗ್ರಂಥವೆಂದು ಪರಿಗಣಿಸಿದರು. ಶ್ರೀರಾಮಾನುಜಾಚಾರ್ಯರು ಗೀತೆಯಲ್ಲಿ ಬ್ರಹ್ಮ ಮತ್ತು ಜೀವದ ಸಂಬಂಧವನ್ನುಂಟು ಮಾಡುವ ಪರಾಭಕ್ತಿಯ ದರ್ಶನವನ್ನು ಪಡೆದರು. ಆದ್ದರಿಂದ ಅವರು ಗೀತೆಯನ್ನು ಭಕ್ತಿ ಪ್ರಧಾನವಾದ ಗ್ರಂಥವೆಂದು ನಿರೂಪಿಸಿದರು. ಸಂತ ಜ್ಞಾನೇಶ್ವರರು ಗೀತೆಯಲ್ಲಿ ಪ್ರೇಮ-ಭಕ್ತಿಯ ಅನಂತ ಧಾರೆಗಳು ಉಕ್ಕಿ ಬರುತ್ತಿರುವುದನ್ನು ಕಂಡರು. ರಾಷ್ಟ್ರ ತಪಸ್ವಿ ಲೋಕಮಾನ್ಯ ತಿಲಕರು ಗೀತೆಯಲ್ಲಿ ಕರ್ಮದ ಸಾಕ್ಷಾತ್ಕಾರವನ್ನು ಕಂಡರು. ಆದ್ದರಿಂದ ಅವರು ಗೀತೆಯನ್ನು ಕರ್ಮಯೋಗ ಪ್ರಧಾನವಾದ ಗ್ರಂಥವೆಂದರು. ಈ ಯುಗದ ಪರಮಯೋಗಿ ''ಅರವಿಂದರು'' ಗೀತೆಯಲ್ಲಿ ಕರ್ಮ-ಭಕ್ತಿ-ಜ್ಞಾನದ ಸಮನ್ವಯವನ್ನು ಪಡೆದರು. ಆದ್ದರಿಂದ ಅವರು ಗೀತೆಯನ್ನು ಮಾನವ ಮಾತ್ರ ಜೀವನಕ್ಕೆ ಸರ್ವೋಪರಿ ಗ್ರಂಥವೆಂದು ನಿಕ್ಷರ್ಷಿಸಿದರು.

ಈ ರೀತಿ ಗೀತೆಯು ಒಮ್ಮೆ ಸಂನ್ಯಾಸಿಗಳ ಗ್ರಂಥವೆಂದೂ, ಮತ್ತೊಮ್ಮೆ ಜ್ಞಾನಿಗಳ ಗ್ರಂಥವೆಂದೂ ಇನ್ನೊಮ್ಮೆ ಭಕ್ತವೃಂದದವರ ಗ್ರಂಥವೆಂದೂ ಮತ್ತು ಕರ್ಮಯೋಗಿಗಳ

ಗ್ರಂಥವೆಂದು ಪರಿಗಣಿಸಲ್ಪಟ್ಟಿದೆ. ಗೀತೆಯ ಯೋಗವನ್ನು ಜ್ಞಾನದ ಜೊತೆ ಜೋಡಿಸಿದರೆ ಜ್ಞಾನ ಯೋಗವು ದೊರೆಯುತ್ತದೆ. ಭಕ್ತಿಯೊಂದಿಗೆ ಸೇರಿಸಿದರೆ ಭಕ್ತಿಯ ಅನಂತ ಆನಂದ ಮತ್ತು ಅನನ್ಯ ಭಾವವುಂಟಾಗುತ್ತದೆ, ಕರ್ಮದೊಂದಿಗೆ ಸೇರಿಸಿದರೆ ಕರ್ಮದ ಕಲಾ ಕುಶಲತೆಯ ಭಂಡಾರ ದೊರೆಯುತ್ತದೆ.

ಗೀತೆಯನ್ನು ಸಿದ್ಧ-ಪ್ರಸಿದ್ಧ ಭಾಷ್ಯಾಕಾರರು, ಟೀಕಾಕಾರರು ಮತ್ತು ವಿಮರ್ಶಕರು ತಮ್ಮ-ತಮ್ಮ ಭಾಷೆಗಳಲ್ಲೂ ಸತ್ಯಂ, ಶಿವಂ ಮತ್ತು ಸುಂದರಂ ಎಂದು ನಿರೂಪಿಸುತ್ತಾರೆ. ಈ ಗೀತಾ ಶಾಸ್ತ್ರದ ಅರ್ಥವನ್ನು ತಿಳಿದುಕೊಂಡರೆ ಸಮಸ್ತ ಪುರುಷಾರ್ಥಗಳ ಸಿದ್ಧಿ ಉಂಟಾಗುತ್ತದೆ.

ಶ್ರೋತೃಗಳು ತಮ್ಮ ಮನಸ್ಸನ್ನು ಕೋಮಲವಾಗಿಟ್ಟುಕೊಂಡು ಈ ಕಥೆಯ ಚಕೋರ ಮಾಧುರ್ಯವನ್ನು ಅನುಭವಿಸಬೇಕು. ಹೇಗೆಂದರೇ ಪಕ್ಷಿ ಮನೋಯೋಗ ಪೂರ್ವಕ ವಾಗಿ ಶರದೃತುವಿನ ಕೋಮಲಚಂದ್ರ ಕಲೆಗಳ ಸುಧಾರಸವನ್ನು ಆರಿಸಿಕೊಳ್ಳುತ್ತದೆಯೋ ಹಾಗೆಯೇ ಇದರ ತಾತ್ಪರ್ಯವನ್ನು ಗ್ರಹಿಸಬೇಕು.

ಭ್ರಮರವು ಹೇಗೆ ಪುಷ್ಪದ ಪರಾಗವನ್ನು ತೆಗೆದುಕೊಳ್ಳುತ್ತದೆಯೋ ಹಾಗೆ, ಆದರೆ ಇದರಿಂದ ಕಮಲದಳಕ್ಕೆ ಏನೂ ಸಂವೇದನೆ ಆಗುವುದಿಲ್ಲ. ಹಾಗೆಯೇ ಈ ಗ್ರಂಥದ ಅಸ್ವಾದನೆಯಿಂದ. ಗೀತೆಯ ವೈಶಿಷ್ಟ್ಯಕ್ಕೆ ಏನೂ ತೊಂದರೆ ಆಗುವುದಿಲ್ಲ. ಹೇಗೆ ತನ್ನಸ್ಥಾನವನ್ನು ಬಿಟ್ಟು ಚಂದ್ರೋದಯವು ಆಗುತ್ತಲೇ ಆಲಿಂಗನ ಪ್ರೇಮದ ಅನುಭವವು ಕೇವಲ ಕುಮುದಿನೀ ಪುಷ್ಪಕ್ಕೆ ಅರಿವಾಗುತ್ತದೋ ಹಾಗೆಯೇ ಯಾರ ಅಂತಃಕರಣವು ಗಾಂಭೀರ್ಯದಿಂದ ಸ್ಥಿರವಾಗಿದೆಯೋ ಅವರಿಗೆ ಮಾತ್ರ ಆ ಗ್ರಂಥದ ಅರ್ಥ ತಿಳಿಯುತ್ತದೆ.

ಬೇರೆ-ಬೇರೆ ಆಚಾರ್ಯರುಗಳು ಭಿನ್ನ-ಭಿನ್ನ ಭಾಷ್ಯಗಳನ್ನು ರಚಿಸಿರುತ್ತಾರೆ. ಅವರೆಲ್ಲರೂ ವಿದ್ವಾಂಸರು ಮತ್ತು ಧಾರ್ಮಿಕರು ಆಗಿದ್ದರೂ ಶಂಕರ,ರಾಮಾನುಜರಂತಹ ತತ್ವಜ್ಞಾನಿಗಳು ಲೋಕದಲ್ಲಿ ಈವರೆವಿಗೂ ಜನಿಸಿಲ್ಲ, ಆದರೂ ಗೀತೆಯ ಅತಿಶಯ ದಿನೇ ದಿನೇ ಪ್ರಕಾಶಿಸುತ್ತದೆ.

ಇಂತಹ ಅಪೂರ್ವ ಧರ್ಮ, ಇಂತಹ ಅಪೂರ್ವ ಐಕಮತ್ಯ, ಕೇವಲ ಗೀತೆಯಲ್ಲಿ ಮಾತ್ರ ಲಭ್ಯ ಮತ್ತು ದೃಷ್ಟಿಗೋಚರವಾಗುತ್ತದೆ. ಅಂತಹ ಅದ್ಭುತ ಧರ್ಮದ ವ್ಯಾಖ್ಯಾನ ಮತ್ತು ವಿಮರ್ಶೆಯು ಯಾವ ದೇಶದಲ್ಲಿಯೂ, ಯಾವ ಕಾಲದಲ್ಲಿಯೂ ಯಾರೊಬ್ಬರಿಂದಲೂ ಕಂಡು ಬಂದಿಲ್ಲ.

ಅಂತಹ ಅಪೂರ್ವ ಧರ್ಮ; ಇಂತಹ ಅಪೂರ್ವ ಐಕಮತ್ಯ, ಕೇವಲ ಗೀತೆಯಲ್ಲಿ ಮಾತ್ರ

ಲಭ್ಯ ಮತ್ತು ದೃಷ್ಟಿಗೋಚರವಾಗುತ್ತದೆ. ಅಂತಹ ಅದ್ಭುತ ಧರ್ಮದ ವ್ಯಾಖ್ಯಾನ ಮತ್ತು ವಿಮರ್ಶೆಯು ಏನೆಂದರೆ ಯಾವ ದೇಶದಲ್ಲಿಯೂ, ಯಾವ ಕಾಲದಲ್ಲಿಯೂ ಯಾರೊಬ್ಬರಿಂದಲೂ ಕಂಡು ಬಂದಿಲ್ಲ.

ಅಂತಹ ಉದಾರ ಭಕ್ತಿ 'ಭಾವವು ಜಗತ್ತಿನಲ್ಲಿ ಮತ್ತೆಲ್ಲಿಯೂ ಇಲ್ಲ, ನನ್ನ ಮೊದಲನೆ ಶ್ರದ್ಧೆ ಏಕೆಂದರೆ ಮನುಷ್ಯ ಜಾತಿಯ ಚರಿತ್ರೆಯಲ್ಲಿಎಲ್ಲಕ್ಕಿಂತ ಉತ್ಕೃಷ್ಠ ಜ್ಞಾನ ಮತ್ತು ಅಲೌಕಿಕ ಶಕ್ತಿ ಸಂಪನ್ನ ಪುರಷನ್ ಭಗವಾನ್ ಶ್ರೀಕೃಷ್ಣನು ಹೇಳಿರುವಂತಹ ಭಗವದ್ಗೀತೆ ಎಂತಹ ಗ್ರಂಥ !

ಆದ್ದರಿಂದಲೇ ೧೮ ಚಿಕ್ಕ ಅಧ್ಯಾಯಗಳಲ್ಲಿ ಇಷ್ಟೊಂದು ಸತ್ಯ ಇಷ್ಟೊಂದು ಜ್ಞಾನ, ಇಷ್ಟೊಂದು ಶ್ರೇಷ್ಠ, ಗಂಭೀರ ಸಾತ್ವಿಕ ಉಪದೇಶ ತುಂಬಿದೆ. ಮನುಷ್ಯ ಮಾತ್ರನನ್ನು ಅತ್ಯಂತ ಕೆಳಮಟ್ಟದ ಸ್ಥಿತಿಯಿಂದ ಮೇಲತ್ತಿ ದೇವತೆಗಳ ಸ್ಥಾನದಲ್ಲಿ ಕೂರಿಸುವ ಶಕ್ತಿಯನ್ನು ಅದು ನೀಡುತ್ತದೆ. ನನ್ನ ತಿಳುವಳಿಕೆಯಲ್ಲಿ ಭೂಮಂಡಲದಲ್ಲೇ ಇಂತಹ ಮತ್ತೊಂದು ಗ್ರಂಥವಿಲ್ಲ; ಎಂದರೆ ಭಗವದ್ಗೀತೆ ಎಂತಹ ಗ್ರಂಥ !

ಗೀತೆಯುವಿಶ್ವಧರ್ಮದ ಏಕಮಾತ್ರ ಗ್ರಂಥವಾಗಿದೆ, ವಿಶ್ವದಲ್ಲೆಲ್ಲಾ ಗೀತೆಯ ಪ್ರಚಾರ ವಾಗಬೇಕು. ಗೀತೆಯಲ್ಲಿ ಯಾವ ವಸ್ತುವು ಬುದ್ಧಿಗಿಂತ ಹೆಚ್ಚಾಗಿ ಇದೆಯೋ ಅದು ಶ್ರದ್ಧೆ, ಬುದ್ಧಿಯ ಉತ್ಪತ್ತಿ ಸ್ಥಾನ ಮೆದುಳು, ಆದರೆ ಶ್ರದ್ಧೆಯ ಸ್ಥಾನ ಹೃದಯ; ಬುದ್ದಿ ಬಲಕ್ಕಿಂತ ಹೃದಯಬಲವು ಸಹಸ್ರಾಂಶ ಹೆಚ್ಚು ಶ್ರದ್ಧಾವಂತನನ್ನು ಯಾರು ಸೋಲಿಸಲಾರರು, ಬುದ್ದಿವಂತನಿಗೆ ನಿರಂತರ ಸೋಲಿನ ಭಯವಿರುತ್ತದೆ. ಭಕ್ತಿಯಿಂದ, ಸತ್ಸಂಗದಿಂದ ಶ್ರದ್ಧೆಯನ್ನು ಪಡೆಯಬಹುದು.

ಯಾವಾಗ ತೊಂದರೆ, ಸಂಕಟಗಳುಂಟಾಗುತ್ತದೆಯೋ ಆಗೆಲ್ಲಾ ನಾವು ಸಂಕಟವನ್ನು ದೂರಗೊಳಿಸಲು ಗೀತೆಯು ನಮಗೆ ಸದ್ಗುರುವಿನ ರೂಪದಲ್ಲಿದೆ, ಮಾತೃಸ್ಥಾನದಲ್ಲಿದೆ. ಆದರೆ ನಂಬಿಕೆಯನ್ನು ಇಟ್ಟು ಅದರ ಮಡಲಿನಲ್ಲಿ ತಲೆಯನಿಟ್ಟರೆ ನಾವು ಖಂಡಿತ ಸಂರಕ್ಷಿಸಲ್ಪಡುತ್ತೇವೆ. ಇದು ಪರಮ ಸತ್ಯವಾಗಿದೆ! ನಿರಾಶೆ, ಸಂದೇಹ ಮತ್ತು ಅವಸಾನದ ಕಾರಣ ಅರ್ಜುನನು ನಮಗೆ ಕೇವಲ ಒಬ್ಬ ''ಮಾನವ'' ನ ಹಾಗೆ ಕಂಡು ಬರುತ್ತಾನೆ. ಆದರೆ ಅದೇ ಶ್ರೀಕೃಷ್ಣನು ತನ್ನ ಗೌರವ ಪೂರ್ಣ ಸುದೃಢ ಪ್ರಭಾವಶಾಲೀ ವ್ಯಕ್ತಿತ್ವದಿಂದ ಅಲೌಕಿಕವಾಗಿ ಕಂಡು ಬರುತ್ತಾನೆ. ಈ ಎರಡು ಪ್ರಕಾರದ ವ್ಯಕ್ತಿತ್ವ ಎಷ್ಟು ಸುಸ್ಪಷ್ಟ. ಸಜೀವ ಮತ್ತು ವಿಶ್ವದ ಸನಾತನ ಸತ್ಯದ ಅಮರ ಪ್ರತೀಕವಾಗಿದೆ !

ಗೀತೆಯ ಈಶ್ವರೀಯ ಪ್ರೇರಣೆ, ಭಾವಭರಿತ ಮಾನವ ಹೃದಯವನ್ನು ಪರಿಶೀಲಿಸುವ ಸೂಕ್ಷ್ಮ ಅಂತರ್ ದೃಷ್ಟಿಯಿಂದ ಓತ-ಪ್ರೋತವಾಗಿದೆ. ನಮ್ಮ ಕರ್ಮ ಸಂಪಾದನೆಯಿಂದ ಪರಸ್ಪರ ವಿರೋಧಿ ಭಾವನೆಗಳುಂಟಾಗಿ ನಮಗೆ ಚಾಂಚಲ್ಯವುಂಟಾಗುತ್ತದೆ. ಸ್ವಾರ್ಥದ ಬೇಡಿಕೆಯಿಂದ ಬಂಧಿತವಾದ ನಾವು ಪರಮಾತ್ಮನ ಮಾರ್ಗದವರಿಗೆ ಮುಂದುವರಿಯಲಾರೆವು, ಹೃದಯದ ಸೂಕ್ಷ್ಮ ಪ್ರೇರಣೆ ಮತ್ತು ಸಂಕೇತಗಳನ್ನು ತಿರಸ್ಕರಿಸಿ ಮನಸ್ವೀ ಕೆಲಸ ಕಾರ್ಯಗಳನ್ನು ಮಾಡುವ ಸ್ವಭಾವ ನಮಗುಂಟಾಗಿದೆ. ಗೀತೆಯಲ್ಲಿ ಈ ಎಲ್ಲಾ ವಿಭಾಗಗಳಿಗೂ ಸವಿಸ್ತಾರವಾದ ವಿವೇಚನೆ ನಮಗೆದೊರೆಯುತ್ತದೆ, ಮತ್ತು ಈ ಎಲ್ಲಾ ಸಮಸ್ಯೆಗಳಿಗೆ ವ್ಯಾವಹಾರಿಕವಾದ ಉಪಾಯ ದೊರೆತು ಸನ್ಮಾರ್ಗದಲ್ಲಿ ಮುಂದುವರಿಯುತ್ತೇವೆ.

✡ ✡ ✡

# ಗೀತೆಯ ಮಹಿಮೆ

ಗೀತೆಯ ಮಹಿಮೆಯು ಅದ್ಭುತವಾದದ್ದು,

*'ಗೀತಾಶಾಸ್ತ್ರಮಿದಂ ಪುಣ್ಯಂಯ ! ಪದೇತ್ರ ಯತಃ ಪುಮಾನ್ !*
*ವಿಷ್ಣೋಃ ಪದಮವಾಪ್ನೋತಿ ಭಯ ಶೋಕಾದಿ ವರ್ಜಿತಃ !*
*ಗೀತಾ ಸುಗೀತಾ ಕರ್ತವ್ಯಾ ಮನ್ಯೈಃಶಾಸ್ತ್ರ ವಿಸ್ತರೈತಿಃ !*
*ಯಾ ಸ್ವಯಂ ಪದ್ಮನಾಭಸ್ಯ ಮುಖ ಪದ್ಮಾದ್ವಿನಿಃಸ್ತತಾಮ್!*
*ಭಾರತಾಮೃತಸರ್ವಸ್ವಂ ವಿಷ್ಣೋರ್ವಕ್ತ್ರಾದ್ವಿನಿಃಸೃತಮ್!*
*ಗೀತಾಗಂಗೋಧಕಂ ಪೀತ್ವಾಪುನರ್ಜನ್ಮವಿದ್ಯತೇ !*
*ಏಕಂ ಶಾಸ್ತ್ರಂ ದೇವಕೀ ಪುತ್ರ, ಗೀತಮೇಕೋ ದೇವೋ ದೇವಕೀ ಪುತ್ರಏವ!*

ಏಕೋ ಮಂತ್ರಸ್ತಸ್ಯ ನಾಮಾನಿ ಯಾನಿ ಕರ್ಮಾಪ್ಯೇಕಂ ತಸ್ಯ ದೇವಸ್ಯ ಸೇವಾ! ಎಂದು ಹೇಳಲ್ಪಡುತ್ತದೆ. ಏನೆಂದರೆ ಗೀತೆಯು ಉಪನಿಷತ್ತುಗಳ ಸಾರತತ್ವವೆಂದು. ಗೀತೆಯು ವೇದದ ಅವತಾರವೆಂದೂ ಅಥವಾ ಸಮ್ಯಕ್ ಜ್ಞಾನದ ಸಂಕ್ಷಿಪ್ತ ಸಂಸ್ಕರಣವೆಂದೂ ಹೇಳುತ್ತಾರೆ. ಜಗತ್ತಿನ ಸಮಸ್ತ ಧರ್ಮಗ್ರಂಥಗಳೂ, ಜ್ಞಾನಗ್ರಂಥಗಳೂ ಮತ್ತು ಯೋಗ ಗ್ರಂಥಗಳು ಸೇರಿದರೂ ಗೀತೆಯ ಮಹಿಮೆಗೆ ಸರಿಸಾಟಿಯಾಗಲಾರದು. ಯಾರ ದೃಷ್ಟಿಯು ಎಲ್ಲಿಯವರೆಗೂ ಹೋಗುತ್ತೋ ಅಲ್ಲಿಯವರೆಗೂ ಅವರಿಗೆ ಈ ದರ್ಶನದ ಅರಿವಾಗುತ್ತದೆ.

# ಗೀತೆಯಲ್ಲಿ ಯೋಗದರ್ಶನ

ಗೀತೆಯ ಯೋಗವು ಯಾವುದರ ಸಂಯೋಗವು ಅಲ್ಲ. ಗೀತೆಯು ಅಂತಹ ಯೋಗದ ವರ್ಣನೆ ಮಾಡುತ್ತದೆ. ಯಾವುದರಿಂದ ದುಃಖದ ಶಮನವಾಗುತ್ತದೋ, ಆ ದುಃಖವು ಅವರನ್ನು ತೊಂದರೆಗೊಳಪಡಿಸುವುದಿಲ್ಲವೋ ಅಂತಹ ಯೋಗ ಮತ್ತು ವಿಚಲಿತರನ್ನಾಗಿ ಮಾಡುವುದಿಲ್ಲ. ಯೋಗದ ಉದ್ದೇಶ್ಯವು ಜೀವನವನ್ನು ವ್ಯವಸ್ಥಿತವಾಗಿ ನಿಯಮಿತವಾಗಿ, ಸಂಯಮಿತ, ಸಂತುಲಿತ ಉಜ್ಜೀವನವನ್ನಾಗಿ ಮತ್ತು ಪ್ರಾರ್ಥನಾಮಯವಾದ ವ್ಯವಸ್ಥೆಯ ಉಳ್ಳದ್ದಾಗಿ ಮಾಡುವುದೇ ಆಗಿದೆ.

ಜೀವನವನ್ನು- ತನು-ಮನ-ಬುದ್ಧಿ, ಅಂತಃಕರಣ, ಹೃದಯ ಮತ್ತು ಆತ್ಮನ ನಿತ್ಯ ಯೋಗದಿಂದ ಮುಕ್ತವಾಗಿಡಲು ಮನುಷ್ಯನು ಯೋಗಮಯ ವ್ಯವಹಾರವುಳ್ಳವನಾಗಿರಬೇಕು. ಆಹಾರ , ವಿಹಾರ, ನಿದ್ರಿಸುವುದು, ಎಚ್ಚರಗೊಳ್ಳುವುದು ಮುಂತಾದ ಪ್ರತ್ಯೇಕ ವಿಚಾರದಲ್ಲಿಯೂ ಅವನ ಕ್ರಿಯೆ, ಕರ್ಮ, ಸಮತೋಲದಲ್ಲಿರಬೇಕು. ಶಿಸ್ತಿನಿಂದ ಕೂಡಿರಬೇಕು. ಆಗ ಗೀತೆಯ ಜೀವನ ಯೋಗದ ಸಾಧನೆ ಆಗುತ್ತದೆ. ಅದರಲ್ಲಿ ಯಾವಾಗಲೂ, ಯಾವ ದುಃಖವೂ ಇರುವುದಿಲ್ಲ. ನಿಶ್ಚಿತ ಕಾರ್ಯಕ್ರಮಕ್ಕೆ ಅನುಸಾರವಾಗಿ. ಸಮಯಕ್ಕೆ ಅನುಸಾರ ಕಾರ್ಯಕ್ರಮವನ್ನು ತನು-ಮನ ಮತ್ತು ಆತ್ಮನ ಸಹಯೋಗದಿಂದ ಸತ್ಯಸಂಧವಾಗಿ, ಪರಿಶ್ರಮದಿಂದ ಮತ್ತು ದೃಢವಾಗಿ ಮಾಡುವವನೇ ಗೀತೆಗೆ ಅನುಸಾರವಾದ ಯೋಗ ಸಾಧನೆಯ ಅಧಿಕಾರಿಯಾಗುತ್ತಾನೆ. ಸಮಯ ಸಾಧನೆ, ಎಚ್ಚರಿಕೆ, ಕೌಶಲ್ಯ, ತತ್ಪರತೆ ಮತ್ತು ಸಮತ್ವ ಬುದ್ಧಿಯುಳ್ಳವನೇ ಗೀತೆಯ ಯೋಗ ದರ್ಶನವನ್ನು ಪಡೆಯುತ್ತಾನೆ.

ಗೀತಾ ಚಾರ್ಯನ ಅಭಿಮತ ಕರ್ಮ-ಜ್ಞಾನ-ಭಕ್ತಿ ಎಂಬ ತ್ರಿವಿಧ ಸಾಧನೆಗಳಿಂದ ತಮ್ಮಲ್ಲಿ ತಾವು ತತ್ಪರತೆಯನ್ನು ಇಡಬೇಕು. ಸರ್ವದಾ, ಉದಾರವಾಗಿ, ವಿಶುದ್ಧವಾಗಿ ಬೋಧಮಯಾವಾದ ದೈವೀಶಕ್ತಿಗಳಿಂದ, ಆತ್ಮ ಚೈತನ್ಯದಿಂದ ಸಂಪರ್ಕವನ್ನು ಸ್ಥಾಪಿಸಿಕೊಂಡು ಚಿದಾನಂದ, ನಿಜಾನಂದ ಮತ್ತು ಆತ್ಮಸುಖದ ಅನುಭವವನ್ನು ಪಡೆಯಬೇಕು.

ಗೀತೆಯ ಸಂಪೂರ್ಣ ಯೋಗವನ್ನು ಮಾನವ ಮಾತ್ರ ಲಾಭಾರ್ಥವಾಗಿ ಮೂರು ಭಾಗಗಳಲ್ಲಿ ವಿಂಗಡಿಸಿಕೊಟ್ಟಿರುತ್ತದೆ.

೧. ಕರ್ಮಯೋಗ, ೨. ಜ್ಞಾನಯೋಗ ೩. ಮತ್ತು ಭಕ್ತಿಯೋಗ

ಪಾಪಗಳು ಮತ್ತು ವಿಕಾರಗಳನ್ನು ದೂರಗೊಳಿಸಲು, ಜ್ಞಾನವು ದಿವ್ಯ ಜ್ಯೋತಿಯಾಗಿದೆ! ಜ್ಞಾನವು ಕರ್ಮವನ್ನು ಭಾರ ರೂಪವಾಗಿಯೂ, ನೀರಸವಾಗಿಯೂ ಮತ್ತು ಸುಳ್ಳಾಗಿಯೂ ಆಗಲು ಬಿಡುವುದಿಲ್ಲ. ಜ್ಞಾನವು ಯಾವಾಗಲೂ ಕರ್ಮ ಮತ್ತು ಭಕ್ತಿಯಿಂದ ಸಂಪುಷ್ಟಿಯಾಗಿ ಸುಗಂಧಿತವಾಗಿರುತ್ತದೆ. ಅಂತಹ ಜ್ಞಾನವನ್ನು ಭಗವಂತನು ಯಾವಾಗಲೂ ಕೊಡುತ್ತಾನೆ.

**ಗೀತೆಯ ಭಕ್ತಿಯೋಗವೂ ಸಹ ಕರ್ಮಠ, ಚೇತನಾಮಯ, ಕರ್ಮದ ಹೊರತು ಭಕ್ತಿಯ ಸಾಧನೆಯನ್ನು ಒಪ್ಪುವುದಿಲ್ಲ. ಶುಭದಾಯಕವಾಗಿ ಮಂಗಳಮಯವಾದ ಅನಾಸಕ್ತ ಕರ್ಮದಿಂದ ಭಗವಂತನ ಅರ್ಚನೆ ಮಾಡಬಹುದು. ಈ ರೀತಿ ಗೀತೆಯಲ್ಲಿ ಕರ್ಮ, ಜ್ಞಾನ, ಮತ್ತು ಭಕ್ತಿಯ ತ್ರಿವೇಣಿ ಪ್ರವಹಿಸುತ್ತದೆ. ಗೀತೆಯ ಎಲ್ಲಾ ಯೋಗಗಳ ಸಂಗಮ! ಮುಕ್ತಿದಾತಾ ಪ್ರಯಾಗ ರಾಜ!**

****

## ಗೀತೆಯ ಸಾರತತ್ತ್ವ

ಶ್ರೀ ಕೃಷ್ಣನು ಕೇವಲ ಜಗದ್ಗುರು ಅಥವಾ ಮಾನವರಿಗೆ ಮಾತ್ರ ಗುರುವಾಗಿರಲಿಲ್ಲ. ಭಗವಂತನು ಆಚಾರ್ಯನಾಗಿದ್ದನು. ಅವನಲ್ಲಿ (ಗುರುತ್ವ) ಆಕರ್ಷಣೆಗಳು ಪರಮ ವಿಕಾಸವಿದ್ದಿತ್ತು. ಸಮಸ್ತ ಯೋಗದ ಪ್ರಕಾಶ, ತಪಸ್ಸಿನ ಮಹಾಶಕ್ತಿಗಳ ಅದ್ಭುತ ಪ್ರಭಾವ, ಲೀಲಾಮುಖಿ ಜೀವನದ ಪ್ರಭಾವ ಮತ್ತು ಅನಂದಮಯ ಜೀವನ ಐಶ್ವರ್ಯ, ರಸ, ಮಾಧುರ್ಯ ಮತ್ತು ಸಂತೋಷ ಚರಿತಾರ್ಥವಾಗಿತ್ತು.

ಭಗವಂತನು ಆಶ್ರಯ ಜೀವನದ ಅನಂತ ಸಂಪತ್ತು ! ಇದೇ ಜೀವನದ ಉಜ್ವಲವಾದ ಶಕ್ತಿಯಾಗಿದೆ. ಅದು ಮುಕ್ತಿ ಮತ್ತು ಶಾಂತಿಯ ಪ್ರಸಾದವನ್ನು ನೀಡುತ್ತದೆ. ಗೀತೆಯ ಸಾರ ತತ್ವವು ತತ್ವಮಸಿಯ ಸಾಧನೆಯಾಗಿದೆ. ಅವನೇ ಅದು ಪುರುಷನೇ ಪುರುಷೋತ್ತಮನು ನರನೇ ನಾರಾಯಣನು ! ದೇಹಗತವಾದ ಅಜ್ಞಾನ ಇಂದ್ರಿಯ ಜನ್ಯವಾದ ವಿಕಾರ, ಮನಸ್ಸು, ಬುದ್ಧಿ ಮತ್ತು ಚಿತ್ತದ ಸಂಸಾರ, ಅಹಂಭಾವದ ವ್ಯವಹಾರ ಮುಂತಾದವುಗಳಿಂದ ಬಿಡುಗಡೆ ಹೊಂದಿ ಕೊನೆಯಲ್ಲಿ ಒಂಡೇ ಒಂದು ವಸ್ತು ಉಳಿಯುತ್ತದೆ. ಅದನ್ನೇ ತತ್ವವೆಂದು ಹೇಳುತ್ತಾರೆ.

## ಕುರುಕ್ಷೇತ್ರ ಧರ್ಮಕ್ಷೇತ್ರ

ಗೀತೆಯ ಗೋವಿಂದನು, ಆ ಕರ್ಮದ ಮತದಾನವಾದ ಕುರುಕ್ಷೇತ್ರದಲ್ಲಿ ಜೀವನದ ಭೀಷಣ, ಘೋರ, ಕಠೋರ ಸಮರಾಂಗಣದಲ್ಲಿ ಧೈರ್ಯ, ಸಾಹಸ, ಉತ್ಸಾಹ ಮತ್ತು ಶೌರ್ಯದಿಂದ ಯುದ್ಧ ಮಾಡಲು ಮಾನವ ಯೋದ್ಧನಿಗೆ ಕರ್ಮದ ಜೊತೆಗೆ ಧರ್ಮವನ್ನು ಜೋಡಿಸುವ ಆದೇಶಗಳನ್ನು ನೀಡಿದನು, ಕರ್ಮದೊಂದಿಗೆ ಯಾವಾಗ ಧರ್ಮವು ಸೇರಿಕೊಳ್ಳುತ್ತದೆಯೋ ಆಗ ಎಲ್ಲಾ ಯೋಗಗಳೂ ಮುಂದೆ - ಮುಂದೆ ಬಂದು ಕರ್ತನಲ್ಲಿ ಸೇರಿಕೊಳ್ಳುತ್ತದೆ. ಆಗ ಮಾತ್ರ ಕುರುಕ್ಷೇತ್ರವು ಧರ್ಮದ ಕ್ಷೇತ್ರವಾಗುತ್ತದೆ. ಧರ್ಮ ಕ್ಷೇತ್ರವು ಎಲ್ಲೆಡೆಯೂ ಮುಕ್ತಿಯ ಕ್ಷೇತ್ರ ವಾಗಿರುತ್ತದೆ.

ಕರ್ಮ ಮತ್ತು ಧರ್ಮ ಹೇಗಿದೆ ಎಂದರೆ ನರ ಮತ್ತು ನಾರಾಯಣರಾಗಿರುತ್ತಾರೆ, ಯಾವಾಗ ಅರ್ಜುನನು ಕರ್ಮದ ರೂಪವನ್ನು ಪಡೆಯುತ್ತಾನೋ ಆಗ ಶ್ರೀಕೃಷ್ಣನು ಧರ್ಮ ಸ್ವರೂಪನಾಗಿ ಮಾರ್ಗದರ್ಶನ ನೀಡುತ್ತಾನೆ, ಕರ್ಮದಲ್ಲಿ ಧರ್ಮವಿಲ್ಲವಾದರೆ ಪೂರ್ಣ

ಗೊಳ್ಳದಿರುವುದು ಮಾತ್ರವಲ್ಲದೆ ಕುಂಟ, ಹೆಳವನಂತೆ ನಿಷ್ಕ್ರಿಯನಾಗಿರುತ್ತಾನೆ ಧರ್ಮದ ಮರ್ಮ ಇದೇ ಆಗಿರುತ್ತದೆ.

## ಧರ್ಮ

ಧರ್ಮವು ಧಾರಣ ಮಾಡುತ್ತದೆ. ಅದು ಆಶ್ರಯವನ್ನು ನೀಡುತ್ತದೆ. ಜೊತೆಯಲ್ಲಿ ಇರುತ್ತದೆ. ರಕ್ಷಣೆಯನ್ನು ನೀಡುತ್ತದೆ. ಸಂಘಟನೆಯನ್ನು ಉಂಟುಮಾಡುತ್ತದೆ.

*" ಶೌಚಂ ದಾನಂ ತಪಃ ಶ್ರದ್ಧಾ ಗುರುಸೇವಾ ಕ್ಷಮಾ ದಯಾ,*
*ವಿಜ್ಞಾನಂ, ವಿನಯಃ ಸತ್ಯಮಿತಿ ಧರ್ಮಸಮುಚ್ಚಯಃ ॥*

ವಿಜ್ಞಾನ, ವಿನಯ ಮತ್ತು ಸತ್ಯದ ಸಂಘಟನೆಯೇ ಧರ್ಮ, ಧರ್ಮವೇ ದೈವೀಪ್ರಾಣ, ಅದು ಕ್ಷಯಿಸುವುದಿಲ್ಲ ಅಥವಾ ಮರಣವನ್ನು ಹೊಂದುವುದಿಲ್ಲ ಧರ್ಮದಲ್ಲಿ ಎಲ್ಲಿಯೂ ಭಯ, ಸಂಶಯ ಅಥವಾ ಕ್ಷಯವು ಇರುವುದಿಲ್ಲ ಧರ್ಮವು ಅಮೃತವಾಗಿದೆ. ಭಗವಂತನು ಧರ್ಮವನ್ನು ನವನವೀನವಾಗಿ ಇಡಲು ಭಗವಂತನು ತನ್ನ ಅಮೃತಮಯವಾದ ಜೀವನದಿಂದ ಅದನ್ನು ತಂಪಾಗಿ ಇಡುತ್ತಾನೆ "

ಧರ್ಮ ಸಂಸ್ಥಾಪನೆಯ ಪ್ರತಿಜ್ಞೆ ಮಾಡಿರುವ ಪಾರ್ಥಸಾರಥಿಯು ಹೇಳಿದನು

ಯಾವುದು ಬ್ರಹ್ಮವೋ ಅದು ಅಮೃತವಾಗಿದೆ. ಅಖಂಡ ಸುಖವಾಗಿದೆ. ಅದೇ ಧರ್ಮ.

ಗೀತಾಚಾರ್ಯನು ಧರ್ಮಕ್ಕೆ ವಿಶ್ವವ್ಯಾಪಿಯಾದ ಜೀವನ ವ್ಯಾಪಿಯಾದ ಸಾರ್ವಭೌಮರೂಪವನ್ನು ನೀಡಿದನು, ಧರ್ಮ ಮಾಡುವುದೇ ಒಂದು ಯಜ್ಞವಾಗಿದೆ. ಭಕ್ತಿ ಮತ್ತು ಧರ್ಮವೇ ಜ್ಞಾನ, ಧರ್ಮದ ಸದುಪಯೋಗದಿಂದಲೇ ಜೀವನವು ಸಾರ್ಥಕವಾಗುತ್ತದೆ. ಅದರ ದುರುಪಯೋಗದಿಂದ ಮೃತ್ಯುವುಂಟಾಗುತ್ತದೆ. ಯಾವುದು ಪ್ರೇಮವೋ ಅದು ಕರ್ಮ, ಜ್ಞಾನ, ಭಕ್ತಿಗೆ ಜೀವನವನ್ನು ಪರಮಾತ್ಮನೊಂದಿಗೆ ವಿಲೀನಗೊಳಿಸುತ್ತದೆ. ಪವಿತ್ರ ಆಧ್ಯಾತ್ಮಿಕ ವಾತಾವರಣವನ್ನು ಉಂಟುಮಾಡುತ್ತದೆ.

ಗೀತೆಯ ಸಂದೇಶ - ಪೂರ್ಣತ್ವವನ್ನು ಆ ಪೂರ್ಣಪುರುಷನಲ್ಲಿ ಲೀನವಾಗಿ ಬಿಡು ಎಂಬುದೇ ಆಗಿದೆ.

✡ ✡ ✡

# ಗೀತೆಯಲ್ಲಿ ಯೋಗ

ಷೋಡಶ ಕಲಾಪೂರ್ಣವಾದ ಯೋಗೇಶ್ವರ ಶ್ರೀ ಕೃಷ್ಣನ ವಾಣೀ ವೈವಿಧ್ಯವು ಗೀತೆಯ ರೂಪವನ್ನು ಧರಿಸಿತು. ಗೀತೆಯು ಶ್ರೀ ಕೃಷ್ಣನ ವಾಣಿ ವಿಭೂತಿ, ಅನುಭವ ವಿಭೂತಿ ಮತ್ತು ಯೋಗ ವಿಭೂತಿಯಾಗಿದೆ.

ಗೀತಯ ಪ್ರತ್ಯೇಕ ಅಧ್ಯಾಯದಲ್ಲಿಯೂ ಶ್ರೀ ಕೃಷ್ಣ ವಿಭೂತಿ ಇದೆ. ಅವನ ನುಡಿ ಯೋಗ ಮತ್ತು ಯೋಗದ ಐಶ್ವರ್ಯವಾಗಿದೆ. ಹೇಗೆ ಶ್ರೀ ಕೃಷ್ಣನು ಸೀಮಾ ರಹಿತನೋ ಹಾಗೆಯೇ ಅವನ ವಾಣಿಯೂ ಕೂಡ ಸಿಮಾತೀತ ಇದೇ ಕಾರಣದಿಂದ ಗೀತೆಯ ಶಬ್ದ, ಮಂತ್ರ ಮತ್ತು ಆಧ್ಯಾಯಗಳಲ್ಲಿಯೂ ಅಸೀಮ ಮತ್ತು ಅನಂತ ಜ್ಞಾನ ಸಾಗರದ ಅಲೆಗಳು ನರ್ತಿಸುತ್ತವೆ.

ಗೀತೆಯ ಯೋಗವನ್ನು ಶಬ್ಧ, ಅರ್ಥ ಮತ್ತು ಪರಿಭಾಷೆಗಳಲ್ಲಿ ಬಂದಿಸಲು ಸಾಧ್ಯವಿಲ್ಲ. ಅಲ್ಲಲ್ಲಿಯೇ ಕರ್ಮಯೋಗದ ರೂಪದಲ್ಲಿ ದೊರೆಯುತ್ತದೆ. ಮತ್ತೊಂದೆಡೆ ಜ್ಞಾನ ಯೋಗದ ರೂಪದಲ್ಲಿ ಇನ್ನೊಂದೆಡೆ ಅದು ಭಕ್ತಿಯೋಗದ ರೂಪದಲ್ಲಿ. ಯಜ್ಞಯೋಗ ತಪೋಯೋಗ ಅಧ್ಯಾತ್ಮಯೋಗ, ಬುದ್ಧಿಯೋಗ, ಶಬ್ಧಯೋಗ, ಶಕ್ತಿಯೋಗ, ಜ್ಯೋತಿ ಯೋಗ, ಮುಂತಾದ ಅನೇಕ ಯೋಗಗಳ ಸಾಕ್ಷಾತ್ಕಾರ ಗೀತೆಯ ಮಂತ್ರದಲ್ಲಿ ದೊರೆಯುತ್ತದೆ. ಸಾಧಕನಿಗೆ ಯಾವಾಗ ಯಾವ ಯೋಗದ ಅವಶ್ಯಕತೆ ಉಂಟಾಗುತ್ತದೆಯೋ ಆಗ ಅವನಿಗೆ ಅದೇ ಯೋಗವನ್ನು ಗೀತೆ ಮತ್ತು ಗೀತೆಯ ಪರಮಾತ್ಮನು ಸುಲಭವಾಗಿ ಒದಗಿಸುತ್ತಾನೆ.

## ಯೋಗ ವಿಭಜನೆ

ಗುರುಜನರ ಮತ್ತು ಆಚಾರ್ಯರುಗಳ ಅಬಿಪ್ರಾಯ ಏನೆಂದರೆ ಗೀತೆಯ ಆರು ಅಧ್ಯಾಯಗಳಲ್ಲಿ ಕರ್ಮಯೋಗ ಇದ. ದ್ವಿತೀಯ ಷಟ್ಕದಲ್ಲಿ ಬಕ್ತಿಯೋಗ ದೊರೆಯುತ್ತದೆ. ಮತ್ತು ತೃತೀಯ ಷಟ್ಕದಲ್ಲಿ ಜ್ಞಾನಯೋಗವಿದ. ಹಾಗೆಂದರ ಪ್ರತಿ ಒಂದು ಮಂತ್ರದಲ್ಲಿಯೂ ಮತ್ತು ಪ್ರತಿ ಒಂದು ಅಧ್ಯಾಯದಲ್ಲಿಯೂ ಯಾವುದಾದರೊಂದು ವಿಶೇಷವಾದ ಯೋಗ ವಿಚಾರವಿಡೆ. ಆದರೆ ವಿಭಜನೆಯನ್ನು ಮಾಡಲಾಗುವುದಿಲ್ಲ. ಏಕೆಂದರೆ ಪ್ರಾಯಶಃ ಪ್ರತ್ಯೇಕ ಅಧ್ಯಾಯದಲ್ಲಿಯೂ ಸರ್ವಾಂಗೀಣ ಯೋಗ ವಿಚಾರವಿದೆ. ಬ್ರಹ್ಮಯೋಗ, ಕಲಾಯೋಗ, ಮತ್ತು ಪೂರ್ಣೋದಯ ಯೋಗವಿದೆ. ಇವೆಲ್ಲಕ್ಕಿಂತಲೂ ಹೆಚ್ಚಾಗಿ ಶ್ರೀ ಕೃಷ್ಣ ಯೋಗವಿದೆ.

# ಹತ್ತನೆಯ ಅಧ್ಯಾಯ

ಪಾಠ: ಯೋಗ ಮತ್ತು ಶಬ್ದ ಯೋಗದ ೯ ಅಧ್ಯಾಯಗಳನ್ನು ಕೇಳಿ ಅರ್ಜುನನ ಮನಸ್ಸು ಉದ್ವೇಗರಹಿತವಾಯಿತು. ಅವನಿಗೆ ಚಿತ್ತ ಶುದ್ಧಿಯಾಯಿತು. ಚಿತ್ತ ಶುದ್ಧಿ ಉಂಟಾದರೂ ಕೂಡ ಗುರು ಕೃಪೆಯಿಂದಲೇ ಶಾಂತಿಯೂ ಲಭಿಸುವುದು.

ಹೇಗೆ ಭೂಮಿಯನ್ನು ಶುದ್ಧಪಡಿಸಿ ಉತ್ತು ಅನಂತರ ಬೀಜವನ್ನು ಹಾಕುತ್ತೇವೆ. ಪುನಃ ನೀರು, ಗಾಳಿ, ಬೆಳಕು, ಮುಂತಾದವು ಸುಲಭವಾದರ, ಸಕ್ರಿಯ, ಶಾಂತವಾದ ಅಂಕುರವು ಪ್ರಸ್ಫುಟಸುತ್ತವೆಯೋ, ಹಾಗೆಯೇ ಶ್ರೀ ಕೃಷ್ಣನು ಅರ್ಜುನನು ಚಿತ್ತ ಭೂಮಿಯನ್ನು ಶುದ್ಧಗೊಳಿಸಿದನು, ಮನಸ್ಸಿನ ಉರ್ವರಾಶಕ್ತಿ ಮತ್ತು ಬುದ್ಧಿಯ ಗ್ರಹಣ ಶಕ್ತಿಯನ್ನು ಹೆಚ್ಚಿಸಿದನು. ಅನಂತರ ಅಲ್ಲಿ ಅಭ್ಯುದಯವೆಂಬ ಬೀಜವನ್ನು ಬಿತ್ತಿದನು.

ಸಾಮಾನ್ಯವಾಗಿ ಎಸದ ಕಾಳುಗಳು ನಷ್ಟವಾಗಿ ಬಿಡುತ್ತದೆ. ಮತ್ತು ಬಿತ್ತಿದ್ದ ಬೀಜವು ಅನಂತಾನಂತವಾದ ಫಲವನ್ನು ನೀಡುತ್ತದೆ. ಶುದ್ಧಿಯಿಂದ ಬುದ್ಧಿಯಿಂದ, ಶ್ರಮದಿಂದ ಭಗವಂತನ ಅನುಗ್ರಹದಿಂದ ಬಿತ್ತಿದ ಅಮೃತವು ಅನ್ನವನ್ನು ಕೊಡುತ್ತದೆ. ಪರಮೇಶ್ವರನಲ್ಲಿ ಮನಸ್ಸಿಟ್ಟು ಮಾಡಿರುವ ಸಣ್ಣ - ಸಣ್ಣ ಕರ್ಮಕ್ಕೂ ಅಕ್ಷಯ ಫಲವು ದೊರೆಯುತ್ತದೆ. ಕರ್ಮಕ್ಕೆ ಮಾತ್ರ ಇಷ್ಟು ಮಹತ್ವವಿರುವುದಿಲ್ಲ. ಅವರೆ ಪರಮೇಶ್ವರನ ಜೊತೆಯಲ್ಲಿದ್ದುಕೊಂಡು, ಪರಮೇಶ್ವರನ ಅನುಮತಿಯಿಂದವಾಡಿರುವ ಕರ್ಮಕ್ಕೆ ಸತ್ಫಲವುಂಟು.

೯ ನೇಯ ಅಧ್ಯಾಯದಲ್ಲಿ ಸ್ವತಃ ಶ್ರೀ ಕೃಷ್ಣನೇ ಆ ಸಾಧನವನ್ನು ತಿಳಿಸಿದನು, ಅದನ್ನು ಪಡೆದು ಸಾಧಕನು ಪರಮಾತ್ಮನನ್ನು ಸರ್ವದಾ ತನ್ನ ಸಂಗಡ ಇಟ್ಟುಕೊಳ್ಳುವ ಅಧಿಕಾರವನ್ನು ಪಡೆಯುವನೆಂದು, ತನ್ನ ಮಿಲನಯೋಗದ ಪೂರ್ಣ ಉಪದೇಶವನ್ನು ಮಾಡುತ್ತಾ ಶ್ರೀ ಕೃಷ್ಣನು ೯ ನೇಯ ಅಧ್ಯಾಯದ ಕೊನೆಯ ಮಂತ್ರದಲ್ಲಿ ತಿಳಿಸಿದನು.

"ಮನ್ಮನಾ ಭವ ಮದ್ ಭಕ್ತೋ ಮದ್ಯಾಜೀ ಮಾಂ ನಮಸ್ಕುರು ಮಾಮೇವೈಷ್ಯಸಿ ಯುಕ್ತ್ವೈವ ಮಾತ್ಮಾನಂ ಮತ್ಪರಾಯಣಃ"

ಗೀತಾ ೯, ೨೬, ೨೭, ೨೮

ಹೇ ನನ್ನ ಪ್ರೀತಿಯ ಪರಂತಪ ! ಕಠೋರ ಕರ್ಮದ ಅಭಿಶಾಪ ಪಾಪಗಳಿಂದ ಮತ್ತು ಶಾಪಗಳಿಂದ ಮುಕ್ತನಾಗಿ ನನ್ನೊಂದಿಗೆ ಸೇರಿ ಇರಲು ಅಥವಾ ನನ್ನನ್ನು ಯಾವಾಗಲೂ ಜೊತೆಯಲ್ಲಿ ಇಟ್ಟುಕೊಂಡಿರುವ ಸಾಧನೆಯನ್ನು ಕೇಳು - ನೀನು ಯಾವಾಗಲೂ ನನ್ನ ಧ್ಯಾನದಲ್ಲೇ ಇರುವವನಾಗು, ನಿನ್ನ ಧ್ಯೇಯವು ಸರ್ವದಾ ನನ್ನನ್ನು ಪಡೆಯುವುದರಲ್ಲೇ ಇರುವಾಗಿರಬೇಕು. ನೀನು ನನಗಾಗಿಯೇ ಕರ್ಮವನ್ನು ಮಾಡಬೇಕು ಮತ್ತು

ಸರ್ವಸ್ವವನ್ನೂ ನನಗೆ ಸಮರ್ಪಿಸಬೇಕು ಯಾವಾಗ ನೀನು ಹೀಗೇ ಆತ್ಮಯುಕ್ತನಾಗಿರುತ್ತೀಯೋ ಭಾವಯುಕ್ತನಾಗಿ ಎಲ್ಲಾ ರೀತಿಯಿಂದಲೂ ನೀನು ನನಗೆ ಯೋಗ್ಯನಾಗು. ತ್ತೀಯೋ ಮತ್ತು ಭಾವಯುಕ್ತನಾಗಿ ಮತ್ತು ನನ್ನ ಧ್ಯಾನದಲ್ಲಿರುವವನಾಗುತ್ತಿಯೋ ಆಗ ನಾನು ಸರ್ವದಾ ನಿನ್ನ ಹತ್ತಿರ ಇರುತ್ತೇನೆ, ಪ್ರತ್ಯಕ್ಷವಾಗಿ, ಅಪ್ರತ್ಯಕ್ಷವಾಗಿ, ಹಾಗೆ ಇರಲು ನೀನು ಸರ್ವದಾ ನನ್ನಲ್ಲಿ ಮನಸ್ಸನ್ನು ನೆಲೆಗೊಳಿಸು, ನನ್ನ ಭಕ್ತನಾಗಿರು, ನನ್ನನ್ನು ಪೂಜಿಸು, ಅರ್ಚಿಸು, ಮತ್ತು ನಮಸ್ಕರಿಸು, ನನ್ನನ್ನೇ ಸರ್ವಸ್ವವೆಂದು ತಿಳಿದು ನಮಸ್ಕರಿಸು, ಶ್ರೀ ಕೃಷ್ಣನ ಈ ವಿಚಾರವು ಅವನನ್ನು ಪಡೆಯಲು ಒಂದು ಸಾಧನೆಯ ಉಪದೇಶವಾಗಿದೆ. ಈಗ ಒಂದು ಪ್ರಶ್ನೆ ಏಳುತ್ತದೆ. ಏನೆಂದರೆ ಈ ಆದೇಶವನ್ನು ಹೇಗೆ ಆಚರಣೆಯಲ್ಲಿ ತರುವುದು? ಜಗತ್ತಿನಲ್ಲಿ ಅನಂತ ಜೀವರಾಶಿಗಳಿವೆ ಅಸಂಖ್ಯಾತ ವಸ್ತುಗಳಿವೆ, ಅನೇಕ ದರ್ಶನಗಳಿವೆ. ಇವುಗಳೆಲ್ಲದರಲ್ಲಿಯೂ ಪರಮಾತ್ಮನನ್ನು ನೋಡುವ ದೃಷ್ಟಿ ಹೇಗೆ ಉಂಟಾಗುತ್ತದೆ. ? ಶ್ರುತಿಗಳು ಮತ್ತು ಸ್ಮೃತಿಗಳು ನೇತಿ-ನೇತಿ ಎಂದು ಹೇಳಿ ಸುಮ್ಮನಾಗುತ್ತದೆ. ಪ್ರಯತ್ನಿಸಿದರೂ ಅವುಗಳ ಸ್ವರೂಪ ದರ್ಶನ ದೊರೆಯುವುದಿಲ್ಲ. ಉಪನಿಷತ್ತಿನ ಋಷಿಗಳ ಅನುಭವವು.

*'' ನ ತತ್ರ ಚಕ್ಷುರ್ಗಚ್ಛತಿ ನ ವಾಗ್ ಗಚ್ಛತಿ ನೋ*
*ಮನೋ ನ ವಿದ್ಮೋನ್ನ ವಿಜಾನೀಮೋ ॥ ''*

ಯಾವ ಆ ಪರಮ ತತ್ವದವರೆಗೆ ಮತ್ತು ಸತ್ವದವರೆಗೆ ನಮ್ಮ ದೃಷ್ಟಿಯು ತಲುಪಲಾರದೋ ಮತ್ತು ವಾಣಿಯಿಂದ ಪೂರ್ತಿ ವರ್ಣನೆ ಮಾಡಲಾರವೋ ಅದು ಇಂದ್ರಿಯಗಳಿಗೆ ಹೊರತಾದದ್ದು, ಮನಸ್ಸಿನ ವೇಗವೂ ತಲುಪಲಾರದು, ಬುದ್ಧಿಯಿಂದಲೂ ಹೋಗಲಾಗುವುದಿಲ್ಲ ಯಾರಾದರೂ ತಿಳಿಸಿದರೂ ತಿಳಿಯಲಾರೆವು, ಅದು ತಿಳುವಳಿಕೆಗೆ ಬರುವುದಕ್ಕಿಂತ ಶ್ರೇಷ್ಠ, ತಿಳುವಳಿಕೆಗೆ ಬರುವುದಕ್ಕಿಂತ ಬಹಳ ಎತ್ತರದಲ್ಲಿದೆ.

ಯಾವುದು ಅಗಮವೋ ಮತ್ತು ಅಗಾಧವೋ, ಅನಂತವೋ ಅದನ್ನು ಹೇಗೆ ತಾನೇ ಪಡೆಯುವುದು. ?

ಆ ಮಹಾ ಪ್ರಭುವಿನ ಚಿಂತನೆಯನ್ನು ಹೇಗೆ ಮಾಡುವುದು ? ಯಾವ ರೂಪಿನಲ್ಲಿ ಮಾಡುವುದು ? ಆ ಸರ್ವಸ್ವವನ್ನು ಹೇಗೆ ತಲುಪುವುದು ? ಇದು ಒಂದು ಮಹಾಪ್ರಶ್ನೆಯಾಗಿದೆ. ಅದರ ಉತ್ತರವು ಗೀತೆಯ ಹತ್ತನೆಯ ಅಧ್ಯಾಯದಲ್ಲಿ ಸಿಗುತ್ತದೆ. ಇದೇ ಹತ್ತನೆಯ ಅಧ್ಯಾಯದ ವಿಭೂತಿಯೋಗ

ಶ್ರೀ ಕೃಷ್ಣನು ತನ್ನ ಪರಮ ಸತ್ವ, ತತ್ವ, ಮತ್ತು ದರ್ಶನದ ರಹಸ್ಯೋದ್ಘಾಟನೆಯನ್ನು ಮಾಡುತ್ತಾ ಹೇಳಿದನು.

'' ಶೃಣು ಮೇ ಪರಮಂ ವಚಃ ''

ಹೇ ಮಹಾಬಾಹು ! ನೀನು ಶರೀರದಿಂದ ಮಹಾನ್ ಆಗಿರುತ್ತೀಯೆ ; ಮನಸ್ಸು ಬುದ್ಧಿ, ಅಂತಃಕರಣ ಮತ್ತು ಆತ್ಮನಿಂದ ಮಹಾನ್ ಆಗಲು ನನ್ನ ಶ್ರೇಷ್ಠವಾದ ವಚನಗಳನ್ನು ಕೇಳು !

✡ ✡ ✡

# ಗೀತೆಯಲ್ಲಿ ಜ್ಞಾನ

ಗೀತಾ ಜ್ಞಾನದ ಈ ವಿಭಾಗದಲ್ಲಿ ಭಗವಂತನ ಶ್ರೇಷ್ಠ ವಿಚಾರವಿದೆ. ಉತ್ತರಾರ್ಧದ ೯ನೇ ಅಧ್ಯಾಯದಲ್ಲಿ ಶ್ರೀ ಕೃಷ್ಣನ ದಿವ್ಯ ಶಬ್ದವಿದೆ. ದಿವ್ಯ ದರ್ಶನವೂ ಮತ್ತು ಅದರ ದಿವ್ಯ ಜ್ಞಾನವೂ ಇದೆ. ದಿವ್ಯ ಸಾಧನೆ ಮತ್ತು ಯೋಗದ ಐಶ್ವರ್ಯವಿದೆ. ಈ ಅಧ್ಯಾಯಗಳಲ್ಲಿ ಶಬ್ದವಿದೆ. ಜ್ಯೋತಿ ಇದೆ ಮತ್ತು ಶಕ್ತಿ ಇದೆ. ಈ ಅಧ್ಯಾಯಗಳಲ್ಲಿ ಅಮೃತ ಧರ್ಮವಿದೆ. ಅಮೃತ ತತ್ವವಿದೆ ಮತ್ತು ಅಮೃತವಿದೆ. ಅದನ್ನು ಜೀವನದ ಹವಾಮಾನ ಎನ್ನುತ್ತಾರೆ. ಈ ಅಧ್ಯಾಯಗಳನ್ನು ಭಗವಂತನಿಗೆ ಪ್ರಿಯನಾಗಿ ಓದಬೇಕು ಮತ್ತು ಕೇಳಬೇಕು. ಭಗವಂತನ ಪ್ರೇಮವನ್ನು ಪಡೆದ ನಂತರ ಜೀವನದ ಮನೋರಥವು ಪೂರ್ಣವಾಗುತ್ತದೆ. ಶ್ರೇಯಸ್ಸಿನ ಮಾರ್ಗ ದೊರೆಯುತ್ತದೆ. ಮತ್ತು ಆತ್ಮಾನಂದ ಎಂಬ ಸಾಗರದಲ್ಲಿ ಸಂತೋಷದ ಅಲೆಗಳು ಏಳುತ್ತವೆ.

## ವಿಭೂತಿಯೋಗ

ಭಗವಂತನೊಂದಿಗೆ ಮಿಲನ ಹೊಂದಿ ಕರ್ಮವನ್ನು ಮಾಡುವುದು ಮಾನವನ ಪವಿತ್ರ ಧರ್ಮ ! ಶಕ್ತಿಯುತ, ಕಾಂತಿಯುಕ್ತ, ಐಶ್ವರ್ಯಯುಕ್ತ, ತೇಜೋಮಯ, ರಸಮಯ ಮತ್ತು ಆನಂದಮಯ ಮುಂತಾದ ಪ್ರತ್ಯೇಕ ಪದಾರ್ಥದಲ್ಲಿ ಭಗವಂತನ ದರ್ಶನವಿದೆ. ಯಾವನೊಬ್ಬನು ಈ ಸತ್ಯವನ್ನು ನೋಡುವನೋ ಮತ್ತು ತಿಳಿದುಕೊಳ್ಳುತ್ತಾನೋ ಅವನು ಭಗವಂತನ ವಿಭೂತಿಯನ್ನು ಯೋಗಶಕ್ತಿಯನ್ನು ಸಂಪೂರ್ಣವಾಗಿ ತಿಳಿದುಕೊಳ್ಳುತ್ತಾನೆ.

ವಿಭೂತಿಗಳ ತತ್ವವನ್ನು ತಿಳಿದುಕೊಳ್ಳುವಂತಹವನು ಕರ್ಮವಾಡುವುದರಲ್ಲಿ ಬುದ್ಧಿಶಾಲಿಯಾಗಿರುತ್ತಾನೆ ಭಕ್ತಿಯಲ್ಲಿ ತೊಡಗಿರುತ್ತಾನೆ. ಪೂರ್ಣವಾಗಿ ಜ್ಞಾನವನ್ನು ಪಡೆದ ಏಕೀಭಾವದಿಂದ ನಿತ್ಯ ನಿರಂತರವಾಗಿ ಪರಮಾತ್ಮನಲ್ಲಿ ನೆಲೆಸಿರುತ್ತಾನೆ.

ತೇಜಸ್ಸು, ಬಲ, ವಿಶೇಷವಾದ ಉತ್ಕೃಷ್ಟವಾದ ದರ್ಶನ ಮತ್ತು ಪ್ರಭಾವ, ಮಾಧುರ್ಯ, ಐಶ್ವರ್ಯರಸ ಮತ್ತು ಆನಂದದ ಪ್ರಕಟಣೆಯನ್ನು ವಿಭೂತಿಯೋಗ ಎಂದು ಹೇಳುತ್ತಾರೆ. ಭಗವಂತನಲ್ಲಿ ಸರ್ವದಾ ಮನಸ್ಸನ್ನು ಸ್ಥಿರವಾಗಿಟ್ಟಿರುವವನು ತನ್ನ ಪ್ರಾಣಗಳನ್ನು ಪ್ರಭುವಿನಲ್ಲಿ ನೆಲೆಸಿರುವವನು, ತನ್ನ ನುಡಿಯಿಂದ ಯಾವಾಗಲೂ ಹರಿಚರ್ಚೆ ಮಾಡುವವನು ಶ್ರೀ ಹರಿಯ ಗುಣವನ್ನು ಮತ್ತು ಪ್ರಭಾವವನ್ನು ವರ್ಣಿಸುವನು, ಮತ್ತು ಪರಮಾತ್ಮಸ್ಮರಣೆ ಮಾಡುವವನು ಸಂತುಷ್ಟನಾಗಿಯೂ ಮತ್ತು ತೃಪ್ತನಾಗಿಯೂ ಇರುತ್ತಾನೆ, ಅಂತಹವನು ಯುಕ್ತ ಸಾಧಕ ಭಗವಂತನು ಸ್ವಯಂ ನಲಸುತ್ತಾನೆ ಮತ್ತು ಜ್ಞಾನವನ್ನು ಪ್ರಕಾಶ ಪಡಿಸುತ್ತಾನೆ, ಭಗವಂತನಿಂದ ಪಡೆದ ಪ್ರಕಾಶದಿಂದ ಎಲ್ಲೆಡೆಯೂ ಅದರ

ಸಾಕ್ಷಾತ್ಕಾರವಾಗುತ್ತದೆ. ಇದೇ ಗೀತೆಯ ವಿಭೂತಿಯೋಗವೆಂಬ ಹತ್ತನೇ ಅಧ್ಯಾಯದ ಸಾರಾಂಶ.

## ವಿಶ್ವ ದರ್ಶನ ಯೋಗ

ಭಗವಂತನು ಎಲ್ಲರಲ್ಲಿಯೂ ಇದ್ದಾನೆ, ಅವನು ತನ್ನ ಒಂದು ಅಂಶದಿಂದ ಸಂಪೂರ್ಣ ಜಗತ್ತನ್ನು ಧಾರಣ ಮಾಡಿರುತ್ತಾನೆ, ಈ ರೀತಿ ತಿಳಿದು ಯಾರು ಅವನ ವಿಶ್ವರೂಪ ದರ್ಶನ ಮಾಡಲು ಹೃತ್ಪೂರ್ವಕವಾಗಿ ಅಭಿಲಾಷೆ ಹೊಂದಿರುತ್ತಾರೋ, ಅವರಿಗೆ ಭಗವಂತನು ದಿವ್ಯದೃಷ್ಟಿಯನ್ನು ಕೊಡುತ್ತಾನೆ, ಅಂತಃಕರಣದ ಪವಿತ್ರ ತೇಜೋಮಯ ವ್ಯಾಪಕ, ಉದಾರ ಮತ್ತು ಸಂಪೂರ್ಣ ದೃಶ್ಯವನ್ನು ನೋಡುವ ಶಕ್ತಿಯನ್ನು ನೀಡುತ್ತಾನೆ.

ದಿವ್ಯ ದೃಷ್ಟಿಯಿಂದ ಪರಮಾತ್ಮನ ಮತ್ತು ಪರಮಾತ್ಮನ ಸೃಷ್ಟಿಯ ಪರಮಾತ್ಮನ ಎಲ್ಲಾ ಕಾರ್ಯಗಳ ಜ್ಞಾನ ಮತ್ತು ದರ್ಶನ ದೊರೆಯುತ್ತವೆ. ಅದನ್ನು ಕಂಡು ಯಾರು ಪವಿತ್ರವಾದ ಮನಸ್ಸಿನಿಂದ ಪ್ರಾಣಗಳ ಯೋಗದಿಂದ ಪ್ರಾರ್ಥನೆ ಮಾಡುತ್ತಾರೋ ಅವರು ಆ ಪ್ರಭುವಿನಲ್ಲಿ ಸೇರಿ ಹೋಗುತ್ತಾರೆ. ಅವನಿಗೆ ಈ ಪ್ರಪಂಚವೆಲ್ಲಾ ಪ್ರಭುಮಯವಾಗಿ ಬಿಡುತ್ತದೆ.

*'' ಸರ್ವಂ ವಿಷ್ಣುಮಯಂ ಜಗತ್ ''*

ಇದೇ ಗೀತೆಯ ೧೧ನೇಯ ಅಧ್ಯಾಯದ ವಿಶ್ವರೂಪ ದರ್ಶನ ಯೋಗ !.

## ಅಮೃತ ಧರ್ಮ

೧೨ನೇಯ ಅಧ್ಯಾಯದಲ್ಲಿ ಅಮೃತವಿದೆ, ಸೋಮರಸವಿದೆ. ಮಾನವ ಧರ್ಮದ ಶುದ್ಧ ಸಾರತತ್ವವಿದೆ. ಇದನ್ನೇ ಭಕ್ತಿಯೋಗವೆನ್ನುತ್ತಾರೆ, ಯಾವ ಆಚರಣೆಯಿಂದ ಅಮೃತ ಜೀವನವು ಮತ್ತು ಅಮೃತ ಧರ್ಮದ ಪ್ರಾಪ್ತಿಯಾಗುತ್ತದೆಯೋ ಅದರ ನಿರೂಪಣೆಯನ್ನು ಗೀತೆಯ ೧೨ನೇಯ ಅಧ್ಯಾಯದ ಭಕ್ತಿಯೋಗದಲ್ಲಿ ಹೇಳಿರುತ್ತದೆ.

ಉಳಿದ ೬ ಅಧ್ಯಾಯಗಳಲ್ಲಿ ( ೧೨ ರಿಂದ ೧೮ ರವರೆಗೆ) ಸಂಪೂರ್ಣ ಜ್ಞಾನಯೋಗದ ಜ್ಞಾನವಿದೆ. ಅದನ್ನು ತಿಳಿದು ಕರ್ಮದ ಪ್ರತ್ಯೇಕ ಕ್ಷೇತ್ರದಲ್ಲಿ ಸಫಲತೆ, ತುಷ್ಟಿ, ಪುಷ್ಟಿ ಮುಕ್ತಿಗಳು ದೊರೆಯುತ್ತದೆ.

## '' ಸರ್ವಯೋಗ ದರ್ಶನ ''

ಗೀತೆಯ ೧೮ನೇಯ ಅಧ್ಯಾಯವು ಸರ್ವ - ಯೋಗದರ್ಶನ ಅದರಲ್ಲಿ ಪೂರ್ಣ

ಯೋಗವಿದೆ. ಯಾವುದು ತನು, ಮನ, ಬುದ್ಧಿ ಮತ್ತು ಅಂತಃಕರಣದ ದಿವ್ಯ ರೂಪಾಂತರವನ್ನು ಮಾಡಿ ಸಾತ್ವಿಕ ಸುಖಕ್ಕಿಂತ ಮಿಗಿಲಾದ ಸಂತೋಷವನ್ನುಂಟು ಮಾಡುತ್ತದೆಯೋ ಅದು ತ್ರಿವಿಧ ಬುದ್ಧಿಯ ನಿರೂಪಣೆ, ತ್ರಿವಿಧ ಧೃತಿಯ ದಿಗ್ದರ್ಶನ, ತ್ರಿವಿಧಕರ್ತಾ ಮತ್ತು ತ್ರಿವಿಧ ಜ್ಞಾನದ ಮಹಾ ಸಾಗರವು ಗೀತೆಯ ೧೮ ನೇಯ ಅಧ್ಯಾಯದಲ್ಲಿ ಅಲೆ - ಅಲೆಯಾಗಿ ಏಳುತ್ತದೆ.

ಎಲ್ಲಕ್ಕಿಂತ ಎತ್ತರದಲ್ಲಿದೆ ಸಮರ್ಪಣಯೋಗವು ಭಗವಂತನಲ್ಲೇ ಮನಸ್ಸು ಬುದ್ಧಿಯನ್ನು ನೆಲೆಗೊಳಿಸಿದರೆ. ಅವನ ಇಚ್ಛೆಯಲ್ಲೇ ನಮ್ಮ ಇಚ್ಛೆಯನ್ನು ಸೇರಿಸಿದರೆ ಮನುಷ್ಯ ಮನುಷ್ಯ ರೂಪಿನಲ್ಲಿದ್ದರೂ ಭಗವತ್ಕಾರ್ಯವನ್ನು ಮಾಡುತ್ತಾ ಇರಬೇಕು, ಈ ವಿಶ್ವವು ಒಂದು ಯಂತ್ರದಂತೆ, ಕುಂಬಾರನಿಗೆ ಚಕ್ರವಿದೆ, ಕುಂಬಾರನು ಮಣ್ಣಿನ ಮುದ್ದೆಯನ್ನು ಚಕ್ರದ ಮೇಲೆ ಇಡುತ್ತಾನೆ, ತನ್ನ ಕೋಲಿನಿಂದ ಚಕ್ರವನ್ನು ತಿರುಗಿಸುತ್ತಾನೆ, ಅನಂತರ ತನ್ನ ಚತುರ ಹಸ್ತಗಳಿಂದ ತರಹ - ತರಹ ವಿವಿಧ ರೀತಿಯ ಪಾತ್ರೆಗಳನ್ನು ನಿರ್ಮಾಣ ಮಾಡುತ್ತಾನೆ, ತನ್ನ ಕುಶಲ ಕರಗಳಿಂದ ಅವನು ಮಾನವ ನಿರ್ಮಾಣದ ಕಾರ್ಯ ಮಾಡುತ್ತಾನೆ.

ಚೇತನದಲ್ಲಿ ಚೈತನ್ಯವನ್ನು, ಜೀವವನ್ನುಂಟು ಮಾಡುತ್ತಾನೆ, ಪ್ರತ್ಯೇಕ ಪ್ರಾಣಿಯಲ್ಲಿ ಪರಮೇಶ್ವರನು ನೆಲೆಸುತ್ತಾನೆ ಮತ್ತು ಅವನನ್ನು ಸುತ್ತಿಸುತ್ತಾನೆ, ಕುಣಿಸುತ್ತಾನೆ, ಅವನು ಕುಣಿಸಿದ ಹಾಗ ಮನುಷ್ಯನು ಕುಣಿಯಬೇಕಾಗುತ್ತದೆ. ಅವನು ಹೇಳಿದ್ದನ್ನು ಒಪ್ಪಿ ಕುಣಿದರೆ ಸಂತೋಷದಿಂದ ಪುರಸ್ಕಾರವನ್ನು ಪಡೆಯುತ್ತಾನೆ. ಕೆಲವರು ಅಳುತ್ತಾ ದುಃಖಿಸುತ್ತಾ ಮನಸ್ಸಿಲ್ಲದೆ ನಿರುಪಾಯವಾಗಿ ಕುಣಿಯುತ್ತಾರೆ. ಅವರ ಆಟವು ಕೆಡುತ್ತದೆ. ಸುಂದರವಾಗಿ ಇರುವುದಿಲ್ಲ. ಅವರ ಆಕರ್ಷಣೆ ಮತ್ತು ಮಾಧುರ್ಯ ಸೌಂದರ್ಯ ಮತ್ತು ಐಶ್ವರ್ಯ ಹಾಳಾಗುತ್ತದೆ.

ಯಾರು ಪರಮೇಶ್ವನ ಸ್ವರದಲ್ಲಿ ಸೇರಿಸುತ್ತಾರೋ, ಕೈಯಲ್ಲಿ ಕೈ ಇಡುತ್ತಾರೋ ಅವನ ಬುದ್ಧಿ ಮತ್ತು ಚಲನೆಯೊಂದಿಗೆ ತಾವೂ ನಡೆಯುತ್ತಾರೋ ಅವರೂ ಸಹ ಕುಣಿಯುತ್ತಾರೆ. ಆದರೆ ಅವರ ಜೊತೆಯಲ್ಲಿ ಪರಮೇಶ್ವರನನ್ನು ಕುಣಿಸುತ್ತಾರೆ. ಅವರ ಕುಣಿತ ಮಾಯಾ ದೀನವಾಗುವುದಿಲ್ಲ. ಯೋಗಯುಕ್ತ ಮುಕ್ತವಾಗಿರುತ್ತದೆ. ಅವನು ಈಶ್ವರೀಯ ಲೀಲೆಯಿಂದ ಜೀವನದ ಮಹದಾನಂದದಲ್ಲಿ (ಗೋಪಿಯರು)ಸೇರುವ ಅಧಿಕಾರವನ್ನು ಪಡೆಯುತ್ತಾನೆ. ಭಗವಂತನೊಂದಿಗೆ ಇರುವುದು ಅಥವಾ ಭಗವಂತನನ್ನು ನಮ್ಮ ಜೊತೆ

ಯಲ್ಲಿ ಇಟ್ಟುಕೊಳ್ಳುವುದು ನಮ್ಮ ಕಾರ್ಯವನ್ನು ಪವಿತ್ರವಾಗಿ ಮಾಡಿ ಜೀವನದ ಆನಂದವನ್ನು ದರ್ಶನ ಮಾಡುವುದು, ನಮ್ಮ ಆನಂದ ಮಾಧುರ್ಯ, ಸೌಂದರ್ಯ ಯೋಗ ಮತ್ತು ಐಶ್ವರ್ಯವನ್ನು ಪರಮೇಶ್ವರನೊಂದಿಗೆ ಆಕರ್ಷಿಸುವುದು, ಇದೇ ಗೀತೆಯ ಮಹಾಯೋಗವಾಗಿದೆ. ಇದನ್ನೇ ಸಮರ್ಪಣ ಯೋಗವೆನ್ನುತ್ತಾರೆ. ಎಲ್ಲಿ ಸಮರ್ಪಣ ಯೋಗ ಸಿದ್ಧವಾಗುತ್ತದೆಯೋ ಅಲ್ಲಿ ಮನುಷ್ಯನು ಪರಿಸ್ಥಿತಿಗಳ ತಾಪಗಳ ಮತ್ತು ಯಾವ ರೀತಿಯ ವಿಕಾರಗಳಿಗೂ ಅಧೀನನಾಗುವುದಿಲ್ಲ.

ಮುಕ್ತನಾಗಿ ದುಃಖ ರಹಿತ ಪ್ರಸಾದದಲ್ಲಿ ವಿಹರಿಸುತ್ತಾನೆ. ಎಲ್ಲಿ ಯೋಗ ಮತ್ತು ಐಶ್ವರ್ಯದ ಸ್ವಾಮಿ, ಸರ್ವೇಶ್ವರ, ಪರಮೇಶ್ವರ ಶ್ಯಾಮ ಸುಂದರ ಶ್ರೀ ಕೃಷ್ಣನು ವಾಸಿಸುತ್ತಾನೋ ಅಲ್ಲಿ ಭಕ್ತನು ಇರುತ್ತಾನೆ. ಅವನ ದಿವ್ಯ ನಾಮ ಸಂಕೀರ್ತನೆ ಅವನ ಕ್ರಿಯಾ ಶೀಲತೆಯನ್ನು ನೋಡುತ್ತಾನೆ. ಮತ್ತು ತಿಳಿಯುತ್ತಾನೆ. ಅವನ ಅಜ್ಞೆಯನ್ನು ಪಾಲಿಸುವವನು, ಕರ್ಮದ ಕಲಾಪೂರ್ಣ ಗಾಂಡೀವಕ್ಕಾಗಿ ನಿತ್ಯತತ್ಪರನಾದ ಅರ್ಜುನನಂತೆ ಶಿಷ್ಯನಿರುತ್ತಾನೆ. ಅಲ್ಲಿ ಭಗವಂತನಂತಹ ವಿಜಯ, ನೀತಿ ಮತ್ತು ವೈಭವವು ವಾಸಮಾಡುತ್ತದೆ. ಈ ಮಹಿಮೆಯನ್ನು ತಿಳಿಯುವುದಕ್ಕೋಸ್ಕರ ಗೀತಾ ಪಾರಾಯಣ, ಮನನ, ಅರ್ಚನೆ ಮತ್ತು ವಂದನೆಯೆ ಸಫಲ ಸಾಧನೆಯಾಗಿರುತ್ತದೆ. ಯಾರು ಗೀತೆಯನ್ನು ಓದುತ್ತಾರೋ ಅವರು ಹೆಜ್ಜೆ - ಹೆಜ್ಜೆಗೂ ಶ್ಯಾಮಸುಂದರನ ಕಡೆಗೆ ಧಾವಿಸುತ್ತಾರೆ. ಭಗವಂತನು ಅವರನ್ನು ತನ್ನ ಹೃದಯದೊಂದಿಗೆ ಅಲಂಗಿಸಿಕೊಳ್ಳುತ್ತಾನೆ ಮತ್ತು ತನ್ನ ಕುಶಲ ಹಸ್ತದಿಂದ ಅವರ ಜೀವನ ರಥವನ್ನು ನಡೆಸುತ್ತಾನೆ. ಪಾರ್ಥಸಾರಥಿ ! ಆಗಾಗ್ಗೆ ಅವರ ಭಯವನ್ನು ದೂರಮಾಡುತ್ತಾನೆ. ಪ್ರತಿಷ್ಠೆ, ಪವಿತ್ರತೆ, ಪುಣ್ಯ ಮತ್ತು ಯೋಗ ಐಶ್ವರ್ಯ ದೊರೆಯುತ್ತದೆ. ಜೀವನವು ಸಫಲ ಮತ್ತು ಕೃತ ಕೃತ್ಯವಾಗುತ್ತದೆ.

*'' ಯತ್ರಯೋಗೇಶ್ವರಃ ಕೃಷ್ಣೋ ಯತ್ರಪಾರ್ಥೋ ಧನುರ್ಧರಃತತ್ರ ಶ್ರೀರ್ವಿಜಯೋ ಭೂತಿರ್ಧ್ರುವಾನೀತಿರ್ಮತಿ ರ್ಮಮ ''*

ಎಲ್ಲಿ ಯೋಗೇಶ್ವರನಾದ ಶ್ರೀ ಕೃಷ್ಣನು ಮತ್ತು ಎಲ್ಲಿ ಧನುರ್ಧರನಾದ ಅರ್ಜುನನಿರುವನೋ, ಅಲ್ಲಿ ಶ್ರೀ ವಿಜಯ ವಿಭೂತಿ ಮತ್ತು ಸ್ಥಿರವಾದ ನೀತಿ ಇದೆ. ಎಂದು ನನ್ನ ಅಭಿಪ್ರಾಯ ಯೋಗ ಸಮಸ್ತ ಸಿದ್ಧಿಗಳ ಮೇಲೆ ಶಾಸನ ಮಾಡುವವನು ಯೋಗೇಶ್ವರನಾಗಿದ್ದಾನೆ. ಯೋಗದ ಅರ್ಥ ಅತ್ಯಂತ ವಿಶೇಷವಾದ ಶಕ್ತಿ ಮತ್ತು ಸಾಮರ್ಥ್ಯ ಯೋಗದ ಸ್ವಾಮಿಯನ್ನು ಯೋಗೇಶ್ವರನೆನ್ನುತ್ತಾರೆ.

ಶ್ರೀ ಕೃಷ್ಣನಲ್ಲಿ ಶಾರೀರಿಕ, ಮಾನಸಿಕ ಮತ್ತು ಆಧ್ಯಾತ್ಮಿಕ ಶಕ್ತಿಗಳ ವಿಲಕ್ಷಣವಾದ ವಿಕಾಸ ಉಂಟಾಗಿದೆ. ಅವನ ಪ್ರತ್ಯೇಕ ಲೀಲಾ ಕೃತ್ಯಗಳಲ್ಲಿ ಯೋಗ ಶಕ್ತಿಯ ಅದ್ಭುತ ದರ್ಶನವಿದೆ.

ಅತ್ಯಂತ ಕಷ್ಟ ಸಾಧ್ಯ ಕರ್ಮವನ್ನು ಸಹ ಅವನು ತನ್ನ ಯೋಗ ಶಕ್ತಿಯಿಂದ ಸರಳವಾಗಿ ಮಾಡುತ್ತಾನೆ.

*" ಯೋಗ ಕಾರ್ಯರಂಭ ಸಮಾಹೂತಃ ಸ್ಮೃತಃ*
*ಸಕಾರ್ಯ ನಿರ್ವಿಘ್ನ ಪೂರ್ತ್ಯನಿಧರ್ಮಿರಃ*
*ಸಮಾಹಿತ ಧನ ಸಮರ್ಥೋ ಯೋಗೇಶ್ವರಃ ॥"*

ಯೋಗ ಎಂದರೆ ಮುಕ್ತ ಕರ್ಮದಲ್ಲಿ ತನ್ನ ಕರ್ಮಗಳ ನಿರ್ವಿಘ್ನತ ಪೂರ್ಣತೆಗಾಗಿ ಸ್ಮರಣೆ ಮಾಡುವ ಪರಮೇಶ್ವರನನ್ನು ಯೋಗೇಶ್ವರನೆನ್ನುತ್ತಾರೆ.

## ಋಗ್ವೇದದ ಸಂದೇಶ

*" ಯೋಗೇ ಯೋಗೇ ತವಸ್ತರಂ ವಾಜೇ ವಾಜೇ ಹವಾಮಹೇ*
*ಸಖಾಮದಿಂದ್ರ ಭೂತಯೇ ॥" (ಋಗ್ವೇದ ೧/೩೦/೭)*

ಯೋಗೇ ಯೋಗೇ ಎಂದರೆ ಪ್ರತ್ಯೇಕ ಕರ್ಮದ ಪ್ರಾರಂಭದಲ್ಲಿ ಅಥವಾ ಪ್ರತ್ಯೇಕ ಸಮಯದಲ್ಲಿ ತನ್ನ ಸಂರಕ್ಷಣೆಗಾಗಿ ನಾವು ಅತ್ಯಂತ ಬಲಶಾಲಿಗಳಾಗಿ, ಐಶ್ವರ್ಯವಂತರಾಗಿ, ಜ್ಞಾನಸಂಪನ್ನರಾಗಿ ಮತ್ತು ಕರ್ಮಕುಶಲನಾದ ಪರಮೇಶ್ವರನನ್ನು ಕರೆಯಬೇಕು.

ಸಂಜಯನು – ಗೀತಾ - ಜ್ಞಾನ್ಯ - ದಾತಾರನಾದ ಶ್ರೀಕೃಷ್ಣನನ್ನು ಯೋಗೇಶ್ವರನೆಂದು

ಕೊನೆಯಲ್ಲಿ ತನ್ನ ನಿರ್ಣಯವನ್ನು ತಿಳಿಸಿದನು ಎಲ್ಲಿ ಯೋಗೇಶ್ವರ ಶ್ರೀ ಕೃಷ್ಣನಿದ್ದಾನೆಯೋ ಮತ್ತು ಅವನ ಜೊತೆಯಲ್ಲಿ ಧನುರ್ಧಾರೀ ಅರ್ಜುನನಿದ್ದಾನೆಯೋ ಅಲ್ಲಿ ಸಂಪೂರ್ಣ ವಿಜಯಶ್ರೀ ಇರುತ್ತದೆ. ಮುಕ್ತಿ ಮತ್ತು ಶಕ್ತಿ. ಭಗವಂತ ಮತ್ತು ಭಕ್ತಿ, ಬ್ರಹ್ಮ, ಮತ್ತು ಜೀವ, ಜ್ಞಾನ ಮತ್ತು ಕರ್ಮವು ಎಲ್ಲಿ ಎರಡೂ ಇರುತ್ತದೆಯೋ ಅಲ್ಲಿ ಶ್ರೀವಿಜಯ, ವಿಭೂತಿ ಮತ್ತು ನೀತಿಯ ಅಚಲಸ್ಥಾನವಿರುತ್ತದೆ.

ಗೀತೆಯ ಸಾರತತ್ವ ಭಕ್ತ ಮತ್ತು ಭಗವಂತನ ಯೋಗವು ಪ್ರತ್ಯೇಕ ಸ್ಥಿತಿಯಲ್ಲಿ ಜ್ಞಾನದೊಂದಿಗೆ ಕರ್ಮ ಮತ್ತು ನೀತಿಯೊಂದಿಗೆ ಜೊತೆಗಿದೆ. ಎಲ್ಲಿ ಅಂತಹ ಯೋಗ ವಿದೆಯೋ ಅಲ್ಲಿ ಜಗತ್ತಿನ ಯಾವ ವಿಜಯದ ಸಿದ್ಧಿ ಸಫಲತೆಯ ಕೊರತೆ ಇಲ್ಲ.

ಶ್ರೀಕೃಷ್ಣ ಮತ್ತು ಅರ್ಜುನನ ತರಹ ಪರಸ್ಪರ ಭಾವನೆಯಿಂದ ಸೇರಿ ಗೀತೆಯನ್ನು ಕೇಳಿ ಮತ್ತು ತಿಳಿದು ಆಚರಣೆಯಲ್ಲಿ ಇಟ್ಟುಕೊಂಡರೆ ಸ್ಮೃತಿ ಜಾಗ್ರತವಾಗುತ್ತದೆ. ಭಕ್ತ ಮತ್ತು ಭಗವಂತನು ಗುರು ಮತ್ತು ಶಿಷ್ಯ, ತಂದೆ ಮತ್ತು ಮಗ ಸೋದರ ಸೋದರರು ಸ್ನೇಹಿತ ಸ್ನೇಹಿತರು ಯಾವಾಗಲೂ ಯೋಗ ಮುಕ್ತರಾಗಿ ಗೀತೆಯ ಜ್ಞಾನದಲ್ಲಿರುತ್ತಾರೆ. ಆಗ

ಜೀವನ ಸಫಲವಾಗುತ್ತದೆ. ಮತ್ತು ಎಲ್ಲೆಡೆಯೂ ವಿಜಯವು ದೊರೆಯುತ್ತದೆ.

ಗೀತೆಯ ಪಠನ ಮಾಡುವುದು, ಕೇಳುವುದು, ತಿಳಿಯುವುದರಿಂದ ಅವರಿಗೆ ಸ್ವತಃ ಯೋಗವು ಬಂದು ಸೇರುತ್ತದೆ. ಗೀತಾ ಪಠನ ಮಾಡುವವರು ಗೀತೆಯಯೋಗದಿಂದ ಶ್ರೀಃ ವಿಜಯ, ನೀತಿ, ಮತ್ತು ಶಾಶ್ವತವಾದ ಕೀರ್ತಿಯನ್ನು ಪಡೆಯುತ್ತಾರೆ.

*ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ ಅಹಂತ್ವಾ*
*'ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಾಶುಚಃ ''*

✡ ✡ ✡

# ಗೀತೆಯಲ್ಲಿನ ಮುಖ್ಯವಾದ ವಿಷಯ

ಶ್ರೀಕೃಷ್ಣನು ಭಗವದ್ಗಿತೆಯ ೯ನೇ ಅಧ್ಯಾಯದ ೨೩ನೇ ಶ್ಲೋಕದಲ್ಲಿ ಹೇಳಿದ್ದಾನೆ ಮಾನವರು ತಮ್ಮ - ತಮ್ಮ ಕರ್ಮದಿಂದ ನನ್ನನ್ನು ಪೂಜಿಸಿ ಸಿದ್ಧಿಯನ್ನು ಪಡೆಯುತ್ತಾರೆ. ಅ -೧೮ ಶ್ಲೋಕ ೪೬ರಲ್ಲಿ ತಿಳಿಸಿರುವಂತೆ ಎಲ್ಲರಿಗೂ ಎಂದರೆ ಸ್ತ್ರೀಯರು, ಶೂದ್ರರು, ವೈಶ್ಯರು ಮತ್ತು ಪಾಪಯೋನಿಗಳಲ್ಲಿ ಜನಿಸಿದವರೂ ಸಹ ಪರಮಾತ್ಮನನ್ನು ಪಡೆಯಲು ಅರ್ಹರು.

ಕೆಲವರು ಗೀತೆಯನ್ನು ಆಳವಾಗಿ ಅಭ್ಯಾಸಿಸದೆ ಈ ಗ್ರಂಥ ಕೇವಲ ಸನ್ಯಾಸಿಗಳಿಗೆ ಮಾತ್ರ ಎಂದು ನಂಬಿದ್ದಾರೆ, ಆದರೆ ಕ್ಷತ್ರಿಯನಾದ ಅರ್ಜುನನು ಬಂಧು ವ್ಯಾಮೋಹದಿಂದ ಯುದ್ಧ ಬೇಡವೆಂದಾಗ ಶ್ರೀಕೃಷ್ಣನು ಗೀತಾ ಶಾಸ್ತ್ರವನ್ನು ಉಪದೇಶಿಸಿದನು. ಅರ್ಜುನನು ಕರ್ತವ್ಯ ತತ್ಪರನಾಗಿ ಕಾರ್ಯನಿರ್ವಹಿಸಿದನು, ಆದ್ದರಿಂದ ಪ್ರತಿ ಒಬ್ಬನೂ ಗೀತಾ ಪಠನ ಮಾಡಬೇಕು.

ಭಗವಂತನು ತನ್ನನ್ನು ಪಡೆಯಲು ಮುಖ್ಯವಾಗಿ ಎರಡು ಮಾರ್ಗಗಳನ್ನು ತಿಳಿಸಿರುತ್ತಾನೆ. (ಎ) ಸಾಂಖ್ಯ ಯೋಗ (ಬಿ) ಕರ್ಮಯೋಗ.

ಜಗತ್ತಿನ ಎಲ್ಲಾ ಪದಾರ್ಥಗಳನ್ನು ಮರೀಚಿಕೆಯಂತೆಯೂ ಮತ್ತು ಸ್ವಪ್ನದಂತೆಯೂ ಮಾಯಾರೂಪವಾಗಿ ಕಂಡು ಬರುವುದರಿಂದ ಸಂಪೂರ್ಣ ಕರ್ಮವನ್ನು ತಾನು ಮಾಡಿದ ನೆಂಬ ಅಹಂಕಾರದಿಂದ ದೂರವಿರಬೇಕು, (ಅ. ೫. ಶ್ಲೋಕ ೮,೯) ಏಕ ಮಾತ್ರ ಭಗವಂತ ನಲ್ಲಿ ತಲ್ಲೀನನಾಗಿ, ವಾಸುದೇವನನ್ನಲ್ಲದೆ ಮತ್ಯಾರನ್ನೂ ಸ್ಮರಿಸಬಾರದು. ಇದೇ ಸಾಂಖ್ಯ ಯೋಗ ಸಾಧನವಾಗಿದೆ.

ಬಿ) ಎಲ್ಲವೂ ಆ ಸರ್ವಶಕ್ತನದೇ ಎಂದು ಫಲದ ಆಸೆಯನ್ನು ಬಿಟ್ಟು ಭಗವ ದಾಜ್ಞೆಯಿಂದ ಕರ್ಮತತ್ಪರನಾಗಿರಬೇಕು, (ಅ೨, ಶ್ಲೋಕ೪೮ ಅ೫, ಶ್ಲೋಕ೧೦) ಶ್ರದ್ಧಾ, ಭಕ್ತಿಯಿಂದ ಮನಸ್ಸು, ವಾಣಿ ಮತ್ತು ಶರೀರಗಳಿಂದ ಭಗವಂತನಿಗೆ ಶರಣಾಗತನಾಗಬೇಕು. ಅವನ ಸ್ವರೂಪ, ರೂಪ, ಗುಣಗಳನ್ನೇ ಚಿಂತಿಸುತ್ತಾ (ಅ, ೫, ಶ್ಲೋಕ ೪೭) ಇರುವುದೇ ನಿಷ್ಕಾಮಕರ್ಮಯೋಗದ ಸಾಧನವಾಗಿದೆ.

ಮೇಲೆ ಹೇಳಿರುವ ಎರಡು ಸಾಧನೆಗಳ ಪರಿಣಾಮವು ಒಂದೇ ಆದ್ದರಿಂದ ಅಭಿನ್ನ ವಾಗಿದೆ. (ಅ೫, ಶ್ಲೋಕ೪,೫) ಆದರೆ ಸಾಧನೆ ಮಾಡುವಾಗ ಅಧಿಕಾರಿ ಭೇದದಿಂದ ಎರಡು ಮಾರ್ಗಗಳಲ್ಲಿ ಒಂದೇ ಸಮಯದಲ್ಲಿ ಹೋಗಲಾರ, ಮೇಲೆ ತಿಳಿಸಿರುವ ಸಾಧನೆಯಲ್ಲಿ ಕರ್ಮಯೋಗದ ಸಾಧನೆ ಸನ್ಯಾಸ ಆಶ್ರಮದಲ್ಲಿ ಆಗಲಾರದು ಏಕೆಂದರೆ ಸನ್ಯಾಸ

ಆಶ್ರಮದಲ್ಲಿ ಕರ್ಮದ ಸ್ವರೂಪದಲ್ಲಿಯೂ ಕೂಡ ತ್ಯಾಗವಿದೆ. ಮತ್ತು ಸಾಂಖ್ಯ ಯೋಗದ ಸಾಧನೆಯನ್ನು ಎಲ್ಲಾ ಆಶ್ರಮದಲ್ಲಿಯೂ ಮಾಡಬಹುದು. ಒಂದು ವೇಳೆ ಹೇಳುವುದಾದರೆ ಭಗವಂತನು ಸಾಂಖ್ಯ ಯೋಗವನ್ನು ಸನ್ಯಾಸವೆಂದು ಕರೆದಿರುತ್ತಾನೆ. ಆದ್ದರಿಂದ ಅದಕ್ಕೆ ಸಂನ್ಯಾಸ ಆಶ್ರಮದಲ್ಲಿಯೇ ಅಧಿಕಾರವಿದೆ. ಗೃಹಸ್ಥಾಶ್ರಮದಲ್ಲಿ ಇಲ್ಲ, ಹೀಗೆ ಹೇಳುವುದು ಸರಿ ಇಲ್ಲ, ಏಕೆಂದರೆ ಎರಡನೇ ಅಧ್ಯಾಯದ ೧೧ನೇ ಶ್ಲೋಕದಿಂದ ೩೦ ರವರೆಗೆ ಯಾರು ಸಾಂಖ್ಯ ನಿಷ್ಠರ ಉಪದೇಶವನ್ನು ಮಾಡಿರುತ್ತಾರೋ ಅದಕ್ಕನುಸಾರವಾಗಿಯೂ, ಭಗವಂತನು ಅಲ್ಲಲ್ಲಿಯೇ ಅರ್ಜುನನಿಗೆ ಯುದ್ಧ ಮಾಡಬೇಕೆಂದು ಹೇಳಿರುತ್ತಾನೆ, ಒಂದು ವೇಳೆ ಗೃಹಸ್ಥನಲ್ಲಿ ಸಾಂಖ್ಯ ಯೋಗದ ಅಧಿಕಾರವೇ ಇಲ್ಲವಾಗಿದ್ದರೆ, ಭಗವಂತನು ಹೀಗೇಕೆ ಹೇಳುತ್ತಿದ್ದನು ? ಆದರೆ ಇಷ್ಟು ಮಾತ್ರ ವಿಶೇಷತೆ ಇದೆ. ಸಾಂಖ್ಯ ಮಾರ್ಗದ ಅಧಿಕಾರಿ ದೇಹಾಭಿಮಾನವಿಲ್ಲದವನಾಗಿರಬೇಕು. ಏಕೆಂದರೆ ಎಲ್ಲಿಯವರೆಗೂ ಶರೀರದಲ್ಲಿ ಅಹಂ ಭಾವವಿದೆಯೋ, ಅಲ್ಲಿಯವರೆಗೆ ಸಾಂಖ್ಯ ಯೋಗದ ಸಾಧನೆ ಪೂರ್ಣವಾಗಿ ತಿಳುವಳಿಕೆಗೆ ಬರುವುದಿಲ್ಲ. ಆದ್ದರಿಂದಲೇ ಭಗವಂತನು ಸಾಂಖ್ಯ ಯೋಗವನ್ನು ಕಠಿಣವಾದ ವಿಚಾರ ವಿಂದಿರುತ್ತಾನೆ. (ಗೀ, ಅ. ೫. ಶ್ಲೋಕ ೬) ಮತ್ತು ನಿಷ್ಕಾಮ ಕರ್ಮಯೋಗ ಸಾಧನೆ ಸುಲಭವಾದ್ದರಿಂದ ಅರ್ಜುನನಿಗೆ ಅಲ್ಲಲ್ಲಿಯೇ ವಿವರಿಸಿರುತ್ತಾನೆ ನೀನು ಅನವರತ ನನ್ನ ಚಿಂತನೆಯನ್ನು ಮಾಡುತ್ತಾ ನಿಷ್ಕಾಮ ಕರ್ಮಯೋಗ ಆಚರಣೆಯನ್ನು ಮಾಡು.

****

# ತ್ಯಾಗದಿಂದ ಭಗವಂತನನ್ನು ಪಡೆಯಬಹುದು

## ಸಪ್ತವಿಧ ತ್ಯಾಗಗಳು

ಮನುಷ್ಯನು ಗೃಹಸ್ಥಾಶ್ರಮದಲ್ಲಿ ಇದ್ದುಕೊಂಡೇ ತ್ಯಾಗದಿಂದ ಪರಮಾತ್ಮನನ್ನು ಪಡೆಯಬಹುದು. ಪರಮಾತ್ಮನನ್ನು ಪಡೆಯಲು ''ತ್ಯಾಗವೇ'' ವೇ ಮುಖ್ಯ ಸಾಧನವಾಗಿದೆ.

ಆದ್ದರಿಂದ ೭ ವಿಧ ತ್ಯಾಗಗಳ ಲಕ್ಷಣಗಳನ್ನು ಸಂಕ್ಷಿಪ್ತವಾಗಿ ವಿವರಿಸುತ್ತೇವೆ.

೧. ''ನಿಷಿದ್ಧ ಕರ್ಮಗಳನ್ನು ಸರ್ವಥಾ ತ್ಯಾಗಮಾಡಬೇಕು''

ಕಳ್ಳತನ ವ್ಯಬಿಚಾರ, ಸುಳ್ಳು, ವಂಚನೆ, ತಂತ್ರ (ಕುಟಿಲತೆ) ಬಲಾತ್ಕಾರವಾಗಿ ಹಿಂಸಿಸುವುದು; ತಿನ್ನಬಾರದ ಭೋಜನ ಕೂದಲು ,ಮೈಲಿಗೆ ಇತ್ಯಾದಿ

೨.'' ಕಾಮ್ಯ ಕರ್ಮದ ತ್ಯಾಗ''

ಸ್ತ್ರೀ ಪುತ್ರರು ಮತ್ತು ಐಶ್ವರ್ಯ ಮುಂತಾದ ವಸ್ತುಗಳನ್ನು ಪಡೆಯುವ ಉದ್ದೇಶದಿಂದ ಮತ್ತು ರೋಗ, ಕಷ್ಟಗಳ ನಿವೃತ್ತಿಗಾಗಿ ಮಾಡುವ ಯಾಗ, ಯಜ್ಞ, ದಾನ, ತಪ್ಪಸ್ಸು ಮತ್ತು ಉಪಾಸನಾದಿ ಫಲಾಪೇಕ್ಷೆಯಿಂದ ಮಾಡುವ ಕರ್ಮಗಳನ್ನು ತ್ಯಜಿಸಬೇಕು.

೩.'' ಸ್ವಾರ್ಥಲಾಲಸೆಯನ್ನು ಖಂಡಿತ ಬಿಡಬೇಕು''

ಗೌರವ, ಪ್ರತಿಷ್ಠೆ ಮುಂತಾದವು, ಸ್ತ್ರೀ, ಪುತ್ರರು ಮತ್ತು ಹಣಕಾಸುಗಳಿಂದ

ಅನಿತ್ಯ ವಸ್ತುಗಳು, ಪ್ರಾರಬ್ಧ ಕರ್ಮಕ್ಕನುಸಾರವಾಗಿ ದೊರೆತಿದ್ದರೆ ಅದು ಹೆಚ್ಚಲೆಂದು ಆಶಿಸಿದರೆ, ಭಗವಪ್ರಾಪ್ತಿಯಲ್ಲಿ ಅಡ್ಡಿ ಉಂಟಾಗುತ್ತದೆ ಎಂದು ತ್ಯಾಗಮಾಬೇಕು.

೪.'' ಸುಖ ಸಂತೋಷಕ್ಕಾಗಿ ಮತ್ತೊಬ್ಬರಿಂದ ಸೇವೆ ಮಾಡಿಸಿಕೊಳ್ಳುವುದು''

ತನ್ನ ಸುಖಕ್ಕಾಗಿ ಮತ್ತೊಬ್ಬರಿಂದ ಐಶ್ವರ್ಯವನ್ನು ಪಡೆಯಲು ಇಚ್ಛಿಸುವುದು ಕೇಳದ ಇತರರು ಕೊಡುವ ಪದಾರ್ಥಗಳನ್ನು ಅಥವಾ ಸೇವೆಯನ್ನು ಸ್ವೀಕರಿಸುವುದು. ಇಷ್ಟೇ ಅಲ್ಲದೆ ಕೇವಲ ಮನಸ್ಸಿನಲ್ಲಿ ಇಚ್ಛಿಸುವುದನ್ನೂ ತ್ಯಾಗಮಾಡಬೇಕು.

೫. ಸಂಪೂರ್ಣ ಕರ್ತವ್ಯದಲ್ಲಿ ಆಲಸ್ಯ ಮತ್ತು ಫಲದ ಇಚ್ಛೆಯನ್ನು ಸರ್ವಥಾ ತ್ಯಾಗ ಮಾಡುವುದು. ಈಶ್ವರನ ಭಕ್ತಿ ದೇವತೆಗಳು ಪೂಜಿಸುವುದು, ತಾಯಿ ತಂದೆ ಮತ್ತು ಗುರು ಹಿರಿಯರ ಸೇವೆ, ಯಜ್ಞ, ದಾನ-ಧರ್ಮ, ವರ್ಣಾಶ್ರಮ ಧರ್ಮಕ್ಕೆ ಅನುಸಾರವಾಗಿ ಜೀವನ ನಿರ್ವಾಹ, ಶರೀರಕ್ಕೆ ಅವಶ್ಯಕವಾದ ಊಟ-ತಿಂಡಿ ಎಷ್ಟೊಂದು ಕರ್ತವ್ಯ ಕರ್ಮಗಳಿವೆಯೋ

ಅವುಗಳಲ್ಲೆಲ್ಲಾ ಮುಖ್ಯವಾಗಿ ಆಲಸ್ಯ ಎಂದರೆ ಸೋಮಾರಿತನವನ್ನು ತ್ಯಾಗಮಾಡಬೇಕು.

೬." ಈಶ್ವರ ಭಕ್ತಿಯಲ್ಲಿ ಆಲಸ್ಯವನ್ನು ತ್ಯಾಗಮಾಡಬೇಕು"

ಮಾನವ ಜೀವನದ ಮುಖ್ಯವಾದ ಕರ್ತವ್ಯವೆಂದು ಪರಮದಯಾಳುಗಳುವಾದ, ಎಲ್ಲರನ್ನು ಸಲಹುವಂತಹ, ಪರಮಪ್ರಿಯ, ಅಂತರ್ಯಾಮಿ ಪರಮಾತ್ಮನ ಗುಣ, ಸೌಂದರ್ಯ, ಸೌಶೀಲ್ಯಗಳನ್ನು ಸ್ಮರಿಸುತ್ತಾ ಅವನ ಗುಣ ಸಂಕೀರ್ತನೆಯನ್ನು ಜಪಿಸುತ್ತಾ ಸೋಮಾರಿತನವನ್ನು ತ್ಯಾಗಮಾಡಬೇಕು.

**ಖ)" ಈಶ್ವರ ಭಕ್ತಿಯಲ್ಲಿ ಫಲಾಪೇಕ್ಷೆಯ ತ್ಯಾಗ"**

ಈ ಲೋಕ ಮತ್ತು ಪರಲೋಕದ ಸಂಪೂರ್ಣ ಭೋಗಗಳನ್ನು ಕ್ಷಣಭಂಗುರ, ನಾಶ ಹೊಂದುವಂತಹ ಮತ್ತು ಭಗವಂತನ ಭಕ್ತಿಯಲ್ಲಿ ಅಡಚಣೆ ಉಂಟು ಮಾಡುತ್ತದೆ ಎಂದು ತಿಳಿದು ಯಾವ ವಸ್ತುವನ್ನೂ ಅಪೇಕ್ಷಿಸದೆ ಭಗವಂತನನ್ನು ಭಕ್ತಿಯಿಂದ ಪೂಜಿಸಬೇಕು.

ಯಾವ ಸಂಕಟವೇ ಬರಲಿ ಅದನ್ನು ಪರಿಹರಿಸಲು ಭಗವಂತನನ್ನು ಪ್ರಾರ್ಥಿಸಬಾರದು, ಹೃದಯದಲ್ಲಿ ಇಂತಹ ವಿಚಾರವನ್ನು ಇಟ್ಟುಕೊಳ್ಳಬೇಕು ಪ್ರಾಣ ಹೋದರೂ ಸರಿ. ಆದರೆ ಈ ಭ್ರಮೆ ಉಳ್ಳ ಜೀವನದ ಸುಖಕ್ಕಾಗಿ ನಿರ್ಮಲವಾದ ಭಕ್ತಿಗೆ ಕಲಂಕವನ್ನುಂಟು ಮಾಡುವುದು ಸರಿ ಅಲ್ಲ. ಹೇಗೆ ಭಕ್ತ ಪ್ರಹ್ಲಾದನು ತಂದೆಯಿಂದ ಹಿಂಸೆಗೆ ಒಳಗಾದರೂ ತನ್ನ ಕಷ್ಟ ಪರಿಹಾರಕ್ಕಾಗಿ ಭಗವಂತನಲ್ಲಿ ಪ್ರಾರ್ಥಿಸಲಿಲ್ಲ. ತನಗೆ ಅನಿಷ್ಟ ಉಂಟು ಮಾಡಿದರೂ ಸಹ "ಭಗವಂತನು ನಿಮಗೆ ಕೆಟ್ಟದ್ದು ಮಾಡಲಿ" ಎನ್ನಲಿಲ್ಲ. ಭಗವಂತನಲ್ಲಿ ಭಕ್ತಿ ಇಟ್ಟಿರುವುದರಿಂದ ಆ ಭರವಸೆಯಿಂದ ಇತರರಿಗೆ "ಭಗವಂತನು ನಿನಗೆ ಆರೋಗ್ಯ ವನ್ನುಂಟುಮಾಡಲಿ" "ಭಗವಂತನು ನಿನ್ನ ದುಃಖವನ್ನು ದೂರ ಮಾಡಲಿ" "ನಿನ್ನ ಆಯಸ್ಸು ಹೆಚ್ಚಲಿ" ಎಂಬ ಅನುಗ್ರಹವನ್ನು ತೋರಬಾರದು.

ಪತ್ರ ವ್ಯವಹಾರದಲ್ಲಿಯೂ ಸಹ ಭಗವಂತನು ಒಳ್ಳೆಯದನ್ನು ಮಾಡಲಿ ಮುಂತಾದ ವಾಕ್ಯಗಳನ್ನು ಬರೆಯಬಾರದು.

**ಗ) ದೇವತೆಗಳನ್ನು ಪೂಜಿಸುವುದರಲ್ಲಿ ಆಲಸ್ಯ ಮತ್ತು ಫಲಾಪೇಕ್ಷೆಯನ್ನು ತ್ಯಾಗ ಮಾಡಬೇಕು.**

ಶಾಸ್ತ್ರ ಮರ್ಯಾದೆಗೆ ಅನುಸಾರವಾಗಿ ದೇವತೆಗಳನ್ನು ಪೂಜಿಸಲು ಭಗವಂತನ ಆಜ್ಞೆ ಇದೆ. ಅವನ ಆಜ್ಞೆಯನ್ನು ಪಾಲಿಸುವುದು ಕರ್ತವ್ಯ. ಈ ರೀತಿ ದೇವತೆಗಳನ್ನು ಪೂಜಿಸುವಾಗಲೂ ಫಲಾಪೇಕ್ಷೆಯನ್ನು ಅಪೇಕ್ಷಿಸಬಾರದು.

ಮಾರವಾಡಿಗಳು ಮಾಡುವಂತೆ ಲೆಕ್ಕ ಪತ್ರಗಳ ಪ್ರಾರಂಭದಲ್ಲಿ ಲಕ್ಷ್ಮೀದೇವಿ ಲಾಭವನ್ನುಂಟುಮಾಡಲು ಭಂಡಾರ ತುಂಬಿರಲಿ ಗಂಗಾಜೀಯ ಅನುಗ್ರಹವುಂಟಾಗಲಿ ಮುಂತಾದ ಫಲಾಪೇಕ್ಷೆಯನ್ನು ಅಪೇಕ್ಷಿಸಬಾರದು. ಬಹಳ ಆನಂದದಿಂದ ಶ್ರೀ ಲಕ್ಷ್ಮೀ ನಾರಾಯಣರ ಪೂಜೆ ಮಾಡಿದೆನು ಎಂಬ ನಿಷ್ಕಾಮ ಮಂಗಳಕರವಾದ ಶಬ್ದಗಳನ್ನು ಬರೆಯಬೇಕು.

ಘ) ತಂದೆ-ತಾಯಿ ಮೊದಲಾದ ಗುರುಜನರ ಸೇವೆ ಮಾಡುವುದರಲ್ಲಿ ಆಲಸ್ಯವನ್ನು ತ್ಯಾಗಮಾಡಬೇಕು. ತಾಯಿ-ತಂದೆ ಆಚಾರ್ಯ ಮುಂತಾದ ಹಿರಿಯರಿಗೆ ಪ್ರತಿದಿನ ಸೇವೆಯನ್ನು ಮಾಡಬೇಕು. ಈ ರೀತಿ ಗೌರವ-ಆದರದಿಂದ ಆಲಸ್ಯವನ್ನು ತ್ಯಾಗ ಮಾಡಿ ನಿಷ್ಕಾಮ ಭಾವದಿಂದ ಸೇವೆ ಮಾಡಬೇಕು.

ಙ) ಯಜ್ಞ ದಾನ ಮತ್ತು ತಪಸ್ಸು ಮುಂತಾದ ಶುಭಕಾರ್ಯಗಳಲ್ಲಿ ಆಲಸ್ಯ ಮತ್ತು ಫಲಾಪೇಕ್ಷೆಯನ್ನು ತ್ಯಾಗಮಾಡಬೇಕು.

ಪಂಚಯಜ್ಞ-ದೇವಯಜ್ಞ(ಅಗ್ನಿಹೋತ್ರ) ಋಷಿಯಜ್ಞ) ವೇದ ಪಾಠ ಸಂಧ್ಯಾ ಗಾಯಿತ್ರಿ ಮುಂತಾದ ಜಪ-ತಪ) ಪಿತೃಯಜ್ಞ (ತರ್ಪಣ, ಶ್ರಾದ್ಧಾದಿ) ಮನುಷ್ಯ ಯಜ್ಞ (ಅತಿಥಿ ಸೇವಾ) ಮತ್ತು ಭೂತಯಜ್ಞ(ಬಲಿವೈಶ್ವ ದೇವ)

ಚ) ವೃತ್ತಿಯಿಂದ ಸಂಪಾದಿಸಿದ ದ್ರವ್ಯದಿಂದ ಗೃಹಸ್ಥಾಶ್ರಮದ ಉಚಿತ ಕರ್ಮಗಳನ್ನು ಮಾಡುವುದರಲ್ಲಿ ಆಲಸ್ಯ ಮತ್ತು ಫಲಾಪೇಕ್ಷೆ ಇರಬಾರದು.

ಜೀವನ ವೃತ್ತಿ ಎಂದರೆ ರೈತನಿಗೆ ಕೃಷಿ, ವೈಶ್ಯನಿಗೆ ವ್ಯಾಪಾರ ಗೋರಕ್ಷಣೆ ಮುಂತಾದುವುಗಳನ್ನು ವರ್ಣಾಶ್ರಮದರ್ಮಕ್ಕನುಸಾರವಾಗಿ ಮಾಡಬೇಕೆಂದು ಭಗವಂತನ ಆಜ್ಞೆಯಾಗಿದೆ. ಲಾಭ-ನಷ್ಟವನ್ನು ಸಮಾನವಾಗಿ ಭಾವಿಸಿ ಎಲ್ಲಾ ಫಲಗಳ ಆಸೆಯನ್ನು ತ್ಯಾಗ ಮಾಡಿ ಮೇಲೆ ತಿಳಿಸಿರುವ ಆಶ್ರಮಧರ್ಮವನ್ನು ಪಾಲಿಸಬೇಕು.

ಛ) ಶರೀರ ಸಂಬಂಧೀ ಕರ್ಮಗಳಲ್ಲಿ ಫಲಾಪೇಕ್ಷೆಯನ್ನು ಆಲಸ್ಯವನ್ನು ತ್ಯಾಗಮಾಡಬೇಕು.

ಶರೀರ ಸಂಬಂಧೀ ಕರ್ಮವೆಂದರೆ ಜೀವಿಸಿರಲು ಅವಶ್ಯಕ ಶಾಸ್ತ್ರ ರೀತಿಯಿಂದ ಭೋಜನ, ಔಷಧಿ ಮುಂತಾದವುಗಳು. ಇದರಲ್ಲಿ ಎಲ್ಲಾ ಭೋಗವಿಲಾಸಗಳನ್ನೂ ಅಪೇಕ್ಷಿಸದೆ, ಸುಖ-ದುಃಖ, ಲಾಭ-ಹಾನಿ ಮತ್ತು ಜೀವನ, ಮರಣ ಮುಂತಾದವುಗಳನ್ನು ಸಮಾನ್ಯವಾಗಿ ಭಾವಿಸಿ ಕೇವಲ ಭಗವತ್-ಪ್ರಾಪ್ತಿಗಾಗಿಯೇ ಮೇಲ್ಕಂಡ ಕಾರ್ಯವನ್ನು ಮಾಡಬೇಕು.

ಮೇಲೆ ಹೇಳಿರುವ ನಾಲ್ಕು ವಿಭಾಗಗಳ ತ್ಯಾಗಗಳೊಂದಿಗೆ ಈ ಎರಡನೆ ವಿಭಾಗದ ತ್ಯಾಗ ಎಲ್ಲಾ ದೋಷಗಳ ಮತ್ತು ಎಲ್ಲಾ ವಿಧ ಇಚ್ಛೆಗಳನ್ನು ತ್ಯಾಗಮಾಡಿ, ಏಕಮಾತ್ರ ಭಗವತ್ ಪ್ರಾಪ್ತಿಯನ್ನು ಪಡೆಯಲು ಕಾತುರರಾಗುವುದೇ ಜ್ಞಾನದ ಪ್ರಥಮ ಭೂಮಿಕೆಯಲ್ಲಿ ಪರಿಪಕ್ವ ಸ್ಥಿತಿಯ ಪುರುಷನ ಲಕ್ಷಣವೆಂದು ತಿಳಿಯಬೇಕು.

**ಜ) ಪ್ರಪಂಚದ ಎಲ್ಲಾ ಪದಾರ್ಥಗಳಲ್ಲಿ ಮತ್ತು ಕರ್ಮಗಳಲ್ಲಿ ಮಮತೆ ಮತ್ತು ಆಸಕ್ತಿಯನ್ನು ತ್ಯಾಗಮಾಡಬೇಕು.**

**ಧನ-ಕನಕ** ವಸ್ತುಗಳು, ಸ್ತ್ರೀ, ಪುತ್ರ, ಮಿತ್ರ ಮುಂತಾದ ಬಂಧು ಜನರು, ಮಾನ ಮರ್ಯಾದೆ, ಪ್ರತಿಷ್ಠೆ ಮುಂತಾದ ಈ ಲೋಕದ ಮತ್ತು ಪರಲೋಕದ ಎಷ್ಟು ವಿಷಯ ಭೋಗರೂಪವಾದ ಪದಾರ್ಥಗಳಿವೆಯೋ ಅವುಗಳೆಲ್ಲಾ ಕ್ಷಣಭಂಗುರ ಮತ್ತು ನಶ್ವರವಾದ ಕಾರಣ ಅವುಗಳಲ್ಲಿ ಮಮತೆ ಮತ್ತು ಆಸಕ್ತಿಯನ್ನು ತೊರೆದು ಕೇವಲ ಪರಮಾತ್ಮನಲ್ಲೇ ಅನನ್ಯ ಭಾವದಿಂದ ಕಾಯಾ, ವಾಚಾ, ಮನಸಾ ಶರೀರದ ಮುಖಾಂತರ ಉಂಟಾಗುವ ಸಂಪೂರ್ಣಕ್ರಿಯೆಗಳನ್ನೂ ಶರೀರದ ಮೇಲಿನ ಮಮತೆಯನ್ನು ತೊರೆಯಬೇಕು. ಇದೇ ೬ನೇಯ ತ್ಯಾಗವಾಗಿದೆ.

**ಸಂಪೂರ್ಣ** ಪದಾರ್ಥಗಳ ಕರ್ಮಗಳಲ್ಲಿ ಲಾಲಸೆ, ಮತ್ತು ಫಲದ ಇಚ್ಛೆಯನ್ನು ತ್ಯಾಗಮಾಡುವುದಾದರೋ ಐದನೆಯ ವಿಭಾಗದ ತ್ಯಾಗವೆನ್ನುತ್ತಾರೆ.

**ಈ** ಆರನೆಯ ವಿಭಾಗದ ತ್ಯಾಗವುಳ್ಳ ಪುರುಷನು ಜಗತ್ತಿನ ಎಲ್ಲಾ ಪದಾರ್ಥಗಳಲ್ಲಿಯೂ ವೈರಾಗ್ಯವನ್ನು ಹೊಂದಿ ಕೇವಲ ಏಕೈಕ ಪ್ರಿಯ ಪರಮಾತ್ಮನಲ್ಲಿಯೇ ಪ್ರೀತಿ ಉಳ್ಳವನಾಗಿರುತ್ತಾನೆ. ಆದ್ದರಿಂದ ಅವನಿಗೆ ಅನವರತ ಭಗವಂತನ ಗುಣ ಸಂಕೀರ್ತನೆ, ಕಥಾ ವರ್ಣನೆ, ಭಜನೆ, ಧ್ಯಾನ, ಶಾಸ್ತ್ರಗಳ ರಹಸ್ಯ ವಿಚಾರಗಳನ್ನು ಅನುಸಂಧಾನ ಮಾಡುವುದೇ ಪ್ರಿಯವಾಗಿರುತ್ತದೆ.

ವಿಲಾಸಿಗಳ ಜೊತೆ ಸೇರಿ ಹಾಸ್ಯ ನಗು, ನಿಂದೆ ವಿಷಯಾಸಕ್ತಿ ಮತ್ತು ವ್ಯರ್ಥವಾದ ವಾರ್ತೆಗಳಲ್ಲಿ ತನ್ನ ಅಮೂಲ್ಯವಾದ ಸಮಯದ ಒಂದು ಕ್ಷಣವನ್ನು ಹಾಳು ಮಾಡಲು ಇಷ್ಟಪಡುವುದಿಲ್ಲ. ಅವನ ಪ್ರತಿಕ್ಷಣದ ವ್ಯವಹಾರವೂ ಭಗವಂತನ ವಿಯವಾಗಿಯೇ ಇರುತ್ತದೆ. ಈ ರೀತಿ ಎಲ್ಲಾ ಕರ್ಮಗಳಲ್ಲಿಯೂ ಮಮತೆ ಮತ್ತು ಆಸಕ್ತಿಯನ್ನು ತೊರೆದು, ಕೇವಲ ಸಚ್ಚಿದಾನಂದ ಪರಮಾತ್ಮನಲ್ಲೇ ಪವಿತ್ರಪ್ರೇಮವುಂಟಾಗುವುದೇ ಜ್ಞಾನದ ದ್ವಿತೀಯ ಭೂಮಿಕೆಯಲ್ಲಿನ ಪರಿಪಕ್ವವಾದ ಸ್ಥಿತಿಯನ್ನು ಪಡೆದ ಸಜ್ಜನನ ಲಕ್ಷಣವೆಂದು

ತಿಳಿಯಬೇಕು.

ಝ) ಪ್ರಪಂಚ ಶರೀರ ಮತ್ತು ಸಂಪೂರ್ಣ ಕರ್ಮಗಳಲ್ಲಿ ಸೂಕ್ತ ಆಸಕ್ತಿ ಮತ್ತು ಅಹಂಕಾರವನ್ನು ಸರ್ವತಾ ತ್ಯಾಗ ಮಾಡಬೇಕು.

ಜಗತ್ತಿನ ಎಲ್ಲಾ ಪದಾರ್ಥಗಳು ಮಾಯೆಯಿಂದ ಅವ್ಯಕ್ತವಾಗಿರುವುದರಿಂದ ನಶ್ವರವಾದದ್ದು, ಏಕ ಮಾತ್ರ ಭಗವಂತನು ಮಾತ್ರ ಸರ್ವತ್ರ ಸಂಪೂರ್ಣನು ಎಂದು ಪರಿಗಣಿಸಿ ಶರೀರದೊಂದಿಗೆ ಜಗತ್ತಿನ ಎಲ್ಲಾ ಪದಾರ್ಥಗಳಲ್ಲಿಯೂ ಮತ್ತು ಎಲ್ಲಾ ಕರ್ಮಗಳಲ್ಲಿಯೂ ಇಚ್ಛೆಯನ್ನು ಬಿಡಬೇಕು. ಮನಸ್ಸಿನಲ್ಲಿ ಸಹ ಅಹಂಕಾರವಿಲ್ಲದೆ ಮನಸ್ಸು, ವಾಣಿ ಮತ್ತು ಶರೀರಗಳಿಂದ ಮಾಡುವ ಎಲ್ಲಾ ಕರ್ತೃತ್ವದ ಗರ್ವವನ್ನು ಕಿಂಚಿತ್ತೂ ಇಟ್ಟುಕೊಳ್ಳಬಾರದು. ಇದೇ ಸಪ್ತಮ ಶ್ರೇಣಿಯ ತ್ಯಾಗ!

ಈ ಏಳನೆಯ ಶ್ರೇಣಿಯ ತ್ಯಾಗ ರೂಪವಾದ ವೈರಾಗ್ಯವನ್ನು ಪಡೆದ ವ್ಯಕ್ತಿಯ ಅಂತಃ ಕರಣದ ನಡವಳಿಕೆಗಳು ಸಂಪೂರ್ಣ ಜಗತ್ತಿನಿಂದ ವಿಮುಖರಾಗುತ್ತದೆ. ಒಂದು ವೇಳೆ ಯಾವಾಗಲಾದರೂ ಸಂಸಾರಿಕವಾದ ತೊಂದರೆ ಬಂದರೂ ಅದು ಸಂಸ್ಕಾರ ಬಲದಿಂದ ಸ್ಥಿರಗೊಳ್ಳುವುದಿಲ್ಲ. ಏಕೆಂದರೆ ಅವನಿಗೆ ವಾಸುದೇವನಾದ ಪರಮಾತ್ಮನಲ್ಲಿಯೇ ಅನನ್ಯ ಭಾವದಿಂದ ಮನಸ್ಸು ಸ್ಥಿರವಾಗಿರುತ್ತದೆ.

ಆದ್ದರಿಂದ ಅವನ ಅಂತಃಕರಣದಲ್ಲಿ ದುರ್ಗುಣದ ಅಭಾವ ಉಂಟಾಗಿ ೧) ಅಹಿಂಸಾ ೨) ಸತ್ಯ ೩) ಸ್ಥೈರ್ಯ, ೪) ಬ್ರಹ್ಮಚರ್ಯ ೫) ಅಪೈಶುನತಾ, ೬) ಲಜ್ಜೆ ನಿಷ್ಕಪಟಭಾವ, ಎ) ಶೌಚ, ಬಿ) ತಿತಿಕ್ಷೆ, ಸಿ) ಸತ್ಸಂಗ, ಸೇವೆ ಯಜ್ಞ ದಾನ, ತಪಸ್ಸು, ಡಿ) ,ಸ್ವಾಧ್ಯಾಯ, ಇ) ಶ್ರಮ. ಎಫ್) ಧರ್ಮ. ಜಿ) ವಿನಯ

ಎ) ಬಾಹ್ಯ ಮತ್ತು ಆಂತರಿಕ ಪವಿತ್ರತೆ, ಸತ್ಯದಿಂದ ಒಳ್ಳೆ ವ್ಯವಹಾರದ ದ್ರವ್ಯ ಮತ್ತು ಅನ್ನದಿಂದ ಯಥಾ ಯೋಗ್ಯವಾದ ನಡವಳಿಕೆ ಜಲ-ಮೃತ್ತಿಕೆಗಳಿಂದ ಶರೀರದ ಸ್ವಚ್ಛತೆಯನ್ನು ಬಾಹ್ಯ ಶುದ್ಧಿ ಎನ್ನುತ್ತಾರೆ. ರಾಗ ದ್ವೇಷ ಮತ್ತು ಕಪಟ ವ್ಯವಹಾರದಿಂದ ಉಂಟಾಗುವ ವಿಕಾರಗಳನ್ನು ನಾಶಮಾಡಿ ಅಂತಃಕರಣವನ್ನು ಸ್ವಚ್ಛವಾಗಿಡುವುದು ಅಂತಃಕರಣದ ಶುದ್ಧಿ.

ಬಿ) ಲಾಲಸೆ (ತೃಷ್ಣೆ) ಯ ಸರ್ವಾಥಾ ಅಭಾವ.

ಸಿ) ಶೀತ-ಉಷ್ಣ, ಸುಖ-ದುಃಖ ಮುಂತಾದ ಅಸಮಾನತೆಯನ್ನು ಸಹಿಸುವುದು.

ಡಿ) ಸ್ವಧರ್ಮ ಪಾಲನೆಗಾಗಿ ಕಷ್ಟವನ್ನು ಸಹಿಸುವುದು.

ಇ) ವೇದ-ವೇದಾಂತಗಳ ಅಧ್ಯಯನ, ಸತ್ ಶಾಸ್ತ್ರಗಳ ಅವಲೋಕನ ಮತ್ತು ಭಗವಂತನ ಗುಣ-ಸಂಕೀರ್ತನೆ.

ಎಫ್) ಮನಸ್ಸನ್ನು ವಶದಲ್ಲಿ ಇಟ್ಟುಕೊಳ್ಳುವುದು.

ಜಿ) ಇಂದ್ರಿಯಗಳನ್ನು ವಶದಲ್ಲಿ ಇಟ್ಟುಕೊಳ್ಳುವುದು.

**ಶ್ರೀ ಕೃಷ್ಣಾರ್ಪಣ ಮಸ್ತು.**

✡ ✡ ✡

## ಶ್ರೀ|| ಶ್ರೀ|| ಶ್ರೀ|| ಮಠಾಧಿಪತಿಗಳು ಮತ್ತು ವಿದ್ವಾಸರ ವಿಚಾರಗಳು

ಕಲವರ ಅಭಿಪ್ರಾಯದಲ್ಲಿ ಅಧ್ಯಾತ್ಮಿಕ ವಿಚಾರಗಳನ್ನು ಮತು ಸಾಂಪ್ರದಾಯಿಕ ವಿಚಾರಗಳನ್ನು ವಿವರಿಸಿ ಪುಸ್ತಕ ಬರೆದರೆ ಪ್ರಖ್ಯಾತಿಯನ್ನು ಪಡೆಯಲಾರೆವು ಎಂದು.

ಆದರೆ ಮತ್ತೆ ಶ್ರೇಷ್ಠ ಪಂಡಿತರು, ಜ್ಞಾನಿಗಳ ವಿಚಾರ ಆಧ್ಯಾತ್ಮಿಕ ಉನ್ನತಿಗೂ, ಧರ್ಮ-ಸಂಸ್ಕೃತಿಯನ್ನು ಪರಿಚಯಿಸಲು ಈ ರೀತಿಯ ಶ್ರೇಷ್ಠಕೃತಿಗಳಿಂದಾಗಿ ಸಮಾಜದಲ್ಲಿ ಜನರ ಮನಸ್ಸು ನಮ್ಮ ಪ್ರಾಚೀನ ಸಂಸ್ಕೃತಿಯನ್ನು ಅರಿತು, ಬ್ರಹ್ಮಸೂತ್ರ, ಉಪನಿಷತ್ತು, ಗೀತೆ, ರಾಮಾಯಣ, ಯತಿ ಸನ್ಯಾಸಿಗಳ ಜೀವನ ವಿಚಾರಗಳನ್ನು, ಆಚಾರ್ಯರು, ಪೀಠಾಧಿಪತಿಗಳನ್ನು ಹೇಗೆ ಕಾಣಬೇಕೆಂದು ತಿಳಿಯಬಹುದು.

ಇನ್ನು ಆಗಮಶಾಸ್ತ್ರ ಎಂದರೆ ದೇವಾಲಯಗಳು, ಶಿಲ್ಪಶಾಸ್ತ್ರ, ಮೂರ್ತಿನಿರ್ಮಾಣ, ಆರಾಧನೆ, ಪೂಜೆ ಮತ್ತು ಭಗವದವತಾರವನ್ನು ಈ ಮೂರ್ತಿಗಳ ದರ್ಶನದಲ್ಲಿ ಪಡೆದು ಸುಖ-ಶಾಂತಿಯನ್ನು ಹೊಂದಬಹುದು. ಧಾರ್ಮಿಕ, ದಾರ್ಶನಿಕ ಭಾವೈಕತ್ಯೆಯನ್ನು ನೀಡುವ ಸ್ಥಳ ದೇವಾಲಯಗಳೇ ಆಗಿದೆ. ಕರ್ನಾಟಕದಲ್ಲಿ ಆಗಮ ಶಾಸ್ತ್ರದಲ್ಲಿ ಕೃತಿಗಳನ್ನು ರಚಿಸಿರುವ ಏಕೈಕ ಮಹಿಳೆ ಶ್ರೀದೇವಿ!

ಶ್ರೀದೇವಿಯವರು ಜೀವನದ ಆಗು-ಹೋಗುಗಳನ್ನು ಅನುಭವಿಸಿ ಭಗವಂತನ ಚಿಂತನೆಯಲ್ಲಿ ನಾನಾ ಕೃತಿಗಳನ್ನು ಸಮಾಜಕ್ಕೆ ನೀಡಿದ್ದಾರೆ. ಇವರ ಆಧ್ಯಾತ್ಮಿಕ ಗ್ರಂಥಗಳನ್ನು ಕೇಂದ್ರಸರ್ಕಾರ, ಶ್ರೇಷ್ಠ ವಿದ್ವಾಂಸರು, ಮಠಾಧಿಪತಿಗಳು ಮತ್ತಿತರೇ ವಿದ್ವಾಂಸರು ಬಹಳವಾಗಿ ಆದರಿಸಿ ನೀಡಿರುವ ಪುರಸ್ಕಾರ, ಪ್ರಶಸ್ತಿಗಳ ವಿವರಣೆ ಭಾರತದ ಆ ಸೇತು ಹಿಮಾಲಯ ಪರ್ಯಂತ ಇವರ ಕೃತಿಗೆ ಮನ್ನಣೆ ದೊರೆತಿದೆ. ಇವರ ಆಗಮ ಗ್ರಂಥಕ್ಕೆ ಅಮೇರಿಕಾದಲ್ಲಿ ಅತ್ಯಂತ ಬೇಡಿಕೆ ಮತ್ತು ಪ್ರಶಂಸೆ ದೊರೆತಿದೆ.

ವಿದ್ವಾಂಸರು ಮತ್ತು ಮಠಾಧಿಪತಿಗಳು ಈ ವಿವರಣೆಯನ್ನು ಪ್ರಕಟಿಸಿರುತ್ತಾರೆ-

1) ತಮಿಳುನಾಡಿನ ವೇದಾ-ವೇದಾಂತ ವೈಜಯಂತಿ ಪಾಠ ಶಾಲೆಯಿಂದ ದೊರೆತ ''ವಿದ್ಯಾವಿಚಕ್ಷಣಾ'' ಎಂಬ ರಜತ ಫಲಕದ ವಿವರಣೆ-

''ವಿದ್ಯಾ ವಿಚಕ್ಷಣಾ''
ರಜತ ಫಲಕ

### ಸಿಲವರ್ ಷೀಲ್ಡ್
### ವಿದ್ಯಾ ವಿಚಕ್ಷಣಾ

1) CLEVER - ಚುರುಕು, ಸೂಕ್ಷ್ಮ ಬುದ್ಧಿ
2) WISE - ಪರಿಶ್ರಮಿ, ಜ್ಞಾನಿ
3) SKILFUL - ತಜ್ಞನಾದ
4) PROFICIENT - ಬಹುಸೂಕ್ಷ್ಮ ಬುದ್ಧಿ ಉಳ್ಳ
5) LEARNED - ವಿದ್ವಾಂಸಳು
6) SHINNG - ಪ್ರಕಾಶಿಸುವ ತೇಜಸ್ವಿಯಾದ

The following are the philontrapic work and achievement made against Vishistadwaita and its detail philosophy speeches and literature given by Dr.Smt.M.N.Singaramma, pen name Sridevi. 3018, 100 ft Road Nehrunagar Mandya. Which has got wide publication and reports spread throughout philosophy of Ramanuja Darshan. The Country Vishistadwitha Tatwa.

1. Central Government fellowship in Literature and culture
2. Bihar Vikranta Seta Vidya Peeta for the Book Sri Krishna (4 South Indian Languages) Vidya Sagar D.Lit.
3. Silvar Shield from Vedavidantha Ujjayanthe Patashala title "Vidya Vithakshna" Tamil Nadu.
4. Rajasthan Grantha Puraskar.
5. Karnataka Grantha Purakar for Agama Shastra (Kannada and Culture)
6. Mandya district Silver Jubilee Function awarded by former Governor of Karnataka with Shield and Shawl.
7. Received Mysoe University Award for National Language Tran....Award for the Book Sri Ramayana Praddeepa (Kannada) for
8. Dassera Kavi Sammelan, Shawl with Sanman.
9. Jamunalal Puraskar from Bajaj for short stories in Hindi.
10. Rajyotsava Puraskar 1989
11. Award from DB. Prachara sabha for conducting Pravvena Vidyalaya for 25 years on the occasion of Golden Jubilee Celebrations.
12. Award from Maddur Kannada Sahitya Parishad.
13. Mahatma Gandhi Award for the Book "Bakthi Sidanjana" from Bangalore University-1972.
14. 9-7-1994 Silpa Shastra and Vishnu Vigraharadhana Vishista was awarded and hononured by Shawl.
15. Lckakiyara Bhalaga of Mandya Award
16. Mahila Hindi seva samithi. Mandya awarded with momento and Shawl.
17. Awarded with momento and Shawl by Mahila hindi seva Samithi Chamarajapet, Bangalore.
18. 1996 Certificate Sahitya Mahopady aya awarded at prayagby Hindi Sahity Sammelan for ...work.
19. 1997 Kannada Sahitya Parishad Lekhakhiyara Balaga presented with 'Aattimabbe' Award for the book "Geetheya Govinda"
20. Vijaya Shri Award International friend Society New Delhi 1997.